ಗುರುವಾರ, ಜುಲೈ 3, 2025 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಪ್ರವಾಹ ಮುನ್ಸೂಚನೆ

ಕೇಂದ್ರ ಜಲಶಕ್ತಿ ಸಚಿವಾಲಯವು 'ಸಿ-ಫ್ಲಡ್' ಎಂಬ ವೆಬ್ ಆಧಾರಿತ ಪ್ರವಾಹ ಮುನ್ಸೂಚನಾ ವ್ಯವಸ್ಥೆಯನ್ನು ಬುಧವಾರ ಜಾರಿಗೊಳಿಸಿದೆ



ಯಶಸ್ವಿ ಚೆಂದದ ಬ್ಯಾಟಿಂಗ್



ಎಜ್‌ಬಾಸ್ಟನ್‌ನಲ್ಲಿ ಬುಧವಾರ ಆರಂಭವಾದ ಇಂಗ್ಲೆಂಡ್ ಎದುರಿನ 2ನೇ ಟೆಸ್ಟ್ ಕ್ರಿಕೆಟ್ ಪಂದ್ಯದಲ್ಲಿ ಭಾರತದ ಯಶಸ್ವಿ ಜೈಸ್ವಾಲ್ (87 ರನ್) ಅರ್ಧಶತಕ ಬಾರಿಸಿದರು

‘ವಾಹನ ದಟ್ಟಣೆ ನಿವಾರಣೆಗೆ ಪರಿಹಾರವಲ್ಲ’

ಸುರಂಗ ರಸ್ತೆ ಪ್ರವೇಶ–ನಿರ್ಗಮನದಲ್ಲಿ ‘ಬಾಟಲ್ ನೆಕ್’ಗಳ ವೃದ್ಧಿ: ತಜ್ಞರ ಅಭಿಮತ

• ಆರ್.ಮಂಜುನಾಥ್

ಬೆಂಗಳೂರು: ನಗರವು ವೃತ್ತಾಕಾರದಲ್ಲಿ ಅಭಿವೃದ್ಧಿ ಆಗಿದೆ. ಯಾವುದೋ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸುರಂಗ ರಸ್ತೆ ನಿರ್ಮಿಸುವುದರಿಂದ ವಾಹನ ದಟ್ಟಣೆ ಕಡಿಮೆ ಆಗುವುದಿಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.


‘ಬೆಂಗಳೂರು ತನ್ನ ಕೇಂದ್ರ ಭಾಗದಿಂದ ವೃತ್ತಾಕಾರವಾಗಿ ಎಲ್ಲೆಡೆ ಕ್ಷಿಪ್ರವಾಗಿ ಬೆಳವಣಿಗೆ ಆಗಿದೆ ಹಾಗೂ ಇನ್ನೂ ಆಗುತ್ತಲೇ ಇದೆ. ಇಂತಹ ಸಂದರ್ಭದಲ್ಲಿ ಕೇಂದ್ರ ಭಾಗದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡಲು ಸುರಂಗ ರಸ್ತೆ ನಿರ್ಮಿಸುವುದರಿಂದ ಹೆಚ್ಚಿನ ಪ್ರಯೋಜನ ಆಗುವುದಿಲ್ಲ. ಬದಲಿಗೆ, ಸುರಂಗ ರಸ್ತೆಯ ಪ್ರವೇಶ–ನಿರ್ಗಮನ ಸ್ಥಳಗಳಲ್ಲಿ ‘ಬಾಟಲ್ ನೆಕ್’ಗಳ ಸಂಖ್ಯೆ ವೃದ್ಧಿಯಾಗಲಿದೆ’ ಎಂದು ಸಂಚಾರ ತಜ್ಞ ಪ್ರೊ. ಎಂ.ಎನ್. ಶ್ರೀಹರಿ ಹೇಳಿದರು.

‘ವಾಹನ ದಟ್ಟಣೆ ಕಡಿಮೆ ಮಾಡಲು ಕೇಂದ್ರ ಭಾಗದಲ್ಲಿ ಮೇಲ್ಸೇತುವೆ ಅಥವಾ ರಸ್ತೆ ವಿಸ್ತರಣೆ ಕಾಮಗಾರಿ ಮಾಡುವುದು ಕಷ್ಟಸಾಧ್ಯವಾಗಿದೆ. ಭೂಸ್ವಾಧೀನಕ್ಕೆ ಸಾವಿರಾರು ಕೋಟಿ ವೆಚ್ಚವಾಗಲಿದೆ. ಇದಕ್ಕೆ ಪರ್ಯಾಯವಾಗಿ ಭೂಮಿಯ ಕೆಳಗೆ ರಸ್ತೆ ನಿರ್ಮಿಸುವ ಯೋಜನೆ ಒಂದು ಪರ್ಯಾಯ ಆಯ್ಕೆ ಆಗಿದ್ದರೂ, ಅದರಿಂದಾಗುವ ಸಮಸ್ಯೆಗಳನ್ನು ಹೇಗೆ ನಿಭಾಯಿಸುತ್ತಾರೆ ಎಂಬುದೇ ದೊಡ್ಡ ಪ್ರಶ್ನೆ. ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆ ಅಧಿಕವಾಗಿದೆಯಾದರೂ, ಸಾಮಾನ್ಯ ಜ್ಞಾನ ಕಡಿಮೆಯಾಗಿದೆ’ ಎಂದರು.

‘ಬೆಂಗಳೂರಿನ ಭೂಗರ್ಭದಲ್ಲಿ ಹೆಚ್ಚಾಗಿ ಕಲ್ಲಿನ ಪದರಗಳಿವೆ. ಗ್ರಾನೈಟ್ ಕಲ್ಲುಗಳು ಹೇರಳವಾಗಿವೆ. ‘ಹಾರ್ಡ್‌ರಾಕ್’ ಹೆಚ್ಚು ಸಿಗುತ್ತದೆ. ಹೀಗಾಗಿ, ಸುರಂಗವನ್ನು ಕೊರೆಯುವ ಕಾರ್ಯಕ್ಕೆ ಹೆಚ್ಚು ಶ್ರಮ ಅಗತ್ಯ. ಸುರಂಗ ಕೊರೆಯಲು ವಿದೇಶಗಳಿಂದ ಬರುವ ಅತ್ಯಾಧುನಿಕ ಯಂತ್ರಗಳು (ಟಿಪಿಎಂ) ಈ ಕೆಲಸವನ್ನು ಮಾಡುತ್ತವೆಯಾದರೂ, ಅದರ ಹಿಂದಿನ ಪರಿಣತಿ ಮೇಲೆ ಯಶಸ್ಸು ನಿಂತಿರುತ್ತದೆ. ನಮ್ಮ ಮೆಟ್ರೊ ನಿರ್ಮಾಣದ ಸಂದರ್ಭದಲ್ಲಿ ಹಲವು ಬಾರಿ ಟಿಪಿಎಂಗಳು ಕೈಕೊಟ್ಟಿವೆ. ಅದಕ್ಕಿಂತ ಹೆಚ್ಚಿನ ಸುರಕ್ಷತೆ ಸುರಂಗ ರಸ್ತೆಯಲ್ಲಿ ಇರಬೇಕಾಗುತ್ತದೆ’ ಎಂದು ಹೇಳಿದರು.

‘ಹಾರ್ಡ್‌ರಾಕ್ ಹೆಚ್ಚಿರುವ ನಗರದ ಭೂಗರ್ಭದಲ್ಲಿ ಭೂಕುಸಿತದಂತಹ ಸಮಸ್ಯೆ ಎದುರಾಗುವ ಸಂಭವ ಕಡಿಮೆ. ಆದರೆ, ಹತ್ತಾರು ಕಿ.ಮೀ ಉದ್ದ ಸಂಚರಿಸುವಾಗ ಏನಾದರೂ ಸಮಸ್ಯೆಯಾದರೆ ಅದಕ್ಕೆ ಕ್ಷಿಪ್ರವಾಗಿ ಪರಿಹಾರ ಕಲ್ಪಿಸುವ ಯೋಜನೆಗೆ ಹೆಚ್ಚು ಪ್ರಾಮುಖ್ಯ ನೀಡಬೇಕು. ಅಲ್ಲದೆ, ಸುರಂಗದಲ್ಲಿ ನೀರು ಜಿನುಗದಂತೆ ಹಾಗೂ ಮಳೆ ನೀರು ಸೇರಿಕೊಳ್ಳದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಸುರಂಗ ರಸ್ತೆಯಲ್ಲಿ ಬೋಟ್ ನೀಡಬೇಕಾಗಬಹುದು’ ಎಂದು ಆತಂಕ ವ್ಯಕ್ತಪಡಿಸಿದರು.

ಸಿಂಗಪುರ ಮಾದರಿಯಾಗಲಿ: ‘ಸುರಂಗ ರಸ್ತೆಯಿಂದ ನಮ್ಮ ಮೆಟ್ರೊ ವ್ಯವಸ್ಥೆಗೆ ಧಕ್ಕೆಯಾಗುತ್ತದೆ. ಹೆಬ್ಬಾಳ– ಸಿಲ್ಕ್ ಬೋರ್ಡ್ ಕಾರಿಡಾರ್‌ನಲ್ಲಿ ಮೆಟ್ರೊ ಸಂಚಾರವನ್ನು ಯೋಜಿಸಲಾಗಿದೆ. ಅದಕ್ಕೂ ಸಾವಿರಾರು ಕೋಟಿ ವೆಚ್ಚ ಮಾಡಲಾಗುತ್ತದೆ. ಸುರಂಗ ರಸ್ತೆಯಿಂದ ಮೆಟ್ರೊ ಪ್ರಯಾಣಿಕರ ಸಂಖ್ಯೆ ಶೇ 5ರಷ್ಟು ಕಡಿಮೆಯಾಗುತ್ತದೆ. ಇದರಿಂದ ರಾಜ್ಯದ ಹಣಕಾಸಿನ ಮೇಲೆ ಮತ್ತಷ್ಟು ಹೊರೆಯಾಗುತ್ತದೆ. 57 ಲಕ್ಷ ಜನಸಂಖ್ಯೆ ಹೊಂದಿರುವ ಸಿಂಗಪುರದಲ್ಲಿ ಕೇವಲ 6.24 ಲಕ್ಷ ಕಾರುಗಳಿವೆ. 3.6 ಕೋಟಿ ಜನಸಂಖ್ಯೆ ಹೊಂದಿರುವ ಟೋಕಿಯೊದಲ್ಲಿ ಕೇವಲ 30 ಲಕ್ಷ ಖಾಸಗಿ ವಾಹನಗಳಿವೆ. ಟೋಕಿಯೊದಲ್ಲಿ ಸಾಮೂಹಿಕ ಸಾರಿಗೆಯಲ್ಲಿ ದೈನಂದಿನ ರೈಲು ಪ್ರಯಾಣಿಕರ ಸಂಖ್ಯೆ ನಾಲ್ಕು ಕೋಟಿ, ಬೆಂಗಳೂರಿನಲ್ಲಿ ಈ ಸಂಖ್ಯೆ ಆರು ಲಕ್ಷದ ಆಸುಪಾಸಿನಲ್ಲಿದೆ. 2017ರಲ್ಲಿ ಸಿಂಗಪುರವು ಭೂಗತ ರಸ್ತೆ ಯೋಜನೆ ರದ್ದುಗೊಳಿಸಿ ಸಾರ್ವಜನಿಕ ಸಾರಿಗೆಯನ್ನು ವಿಸ್ತರಿಸುವತ್ತ ಗಮನಹರಿಸಿತು. ಸಿಂಗಪುರ ಮಾದರಿಯಾಗಿರಿಸಿಕೊಂಡಿರುವ ಬೆಂಗಳೂರು ಅದನ್ನೇ ಪಾಲಿಸಿದರೆ ಉತ್ತಮ’ ಎಂದು ಸಿವಿಕ್– ಬೆಂಗಳೂರು ಸಂಸ್ಥೆಯ ಕಾರ್ಯಕಾರಿ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ಹೇಳಿದರು.



2023ರಿಂದ ಸುರಂಗ ರಸ್ತೆ ಜಪ!

- 2023ರ ಜೂನ್‌ನಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸುರಂಗ ರಸ್ತೆ ನಿರ್ಮಿಸುವುದಾಗಿ ಪ್ರಸ್ತಾಪಿಸಿದ್ದರು
- ತುಮಕೂರು ರಸ್ತೆ, ಬಳ್ಳಾರಿ ರಸ್ತೆ ಮತ್ತು ಹಳೇ ಮದ್ರಾಸ್ ರಸ್ತೆಗಳನ್ನು ಸಂಪರ್ಕಿಸುವ ಮೈಸೂರು ರಸ್ತೆ ಮತ್ತು ಹೊಸೂರು ರಸ್ತೆಯಲ್ಲಿ ₹50 ಸಾವಿರ ವೆಚ್ಚದ 30 ಕಿ.ಮೀ ಉದ್ದದ ಸುರಂಗ ಮಾರ್ಗದ ಯೋಜನೆ ಸಿದ್ಧವಾಗುತ್ತಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) 2023ರ ಜೂನ್‌ನಲ್ಲಿ ತಿಳಿಸಿತ್ತು
- ದೆಹಲಿಯಲ್ಲಿರುವ 1.3 ಕಿ.ಮೀ ಸುರಂಗ ರಸ್ತೆ, ಮುಂಬೈನಲ್ಲಿ ನಿರ್ಮಾಣ ಹಂತದಲ್ಲಿರುವ 7.75 ಕಿ.ಮೀ ಸುರಂಗ ರಸ್ತೆಯನ್ನು ಪ್ರಸ್ತಾಪಿಸಿದ್ದ ಎನ್‌ಎಚ್‌ಎಐ, ಶೇ 40ರಷ್ಟು ವೆಚ್ಚ ಭರಿಸಿ, ಉಳಿದಿದ್ದನ್ನು ಬಿಒಟಿ ಮಾದರಲ್ಲಿ ನಿರ್ಮಿಸಲಾಗುತ್ತದೆ ಎಂದು ಹೇಳಿತ್ತು
- ಸಂಚಾರ ಸುಗಮಗೊಳಿಸಲು 60 ಕಿ.ಮೀ ಸುರಂಗ ರಸ್ತೆ ನಿರ್ಮಿಸಲಾಗುತ್ತದೆ, ಡಿಪಿಆರ್ ಸಿದ್ಧಪಡಿಸಿ, ಪ್ರಾಯೋಗಿಕವಾಗಿ ಹೆಬ್ಬಾಳದಿಂದ ಮೇಖ್ರಿ ವೃತ್ತದವರೆಗೆ 3 ಕಿ.ಮೀ ರಸ್ತೆಯನ್ನು ಕೂಡಲೇ ಪ್ರಾರಂಭಿಸಲಾಗುತ್ತದೆ ಎಂದು ಡಿ.ಕೆ. ಶಿವಕುಮಾರ್ 2024ರ ಜನವರಿಯಲ್ಲಿ ಹೇಳಿದ್ದರು
- 2024ರಿಂದ ಡಿಪಿಆರ್ ಸಿದ್ಧವಾಗುತ್ತಿದೆ, ಶೀಘ್ರವೇ ಟೆಂಡರ್ ಆಹ್ವಾನಿಸಲಾಗುತ್ತದೆ ಎಂದು ಹೇಳಲಾಗುತ್ತಿದೆ

ಪ್ರಯಾಣಿಕರ ಸುರಕ್ಷತೆಯೇ ಸವಾಲು: ಶ್ರೀಹರಿ



‘ಲಂಡನ್‌ನಲ್ಲಿ 50 ವರ್ಷಗಳ ಹಿಂದೆಯೇ ಸುರಂಗ ರಸ್ತೆ ನಿರ್ಮಿಸಲಾಗಿದೆ. ಅಲ್ಲಿ ಜನರ ಸುರಕ್ಷತೆಗೆ ಮೊದಲ ಆದ್ಯತೆ ನೀಡಲಾಗಿದೆ. ಜನರ ಪ್ರಾಣಕ್ಕೆ ಹೆಚ್ಚು ಪ್ರಾಮುಖ್ಯವಿದ್ದು, ಎಷ್ಟು ವೆಚ್ಚವನ್ನಾದರೂ ಮಾಡುತ್ತಾರೆ. ಆದರೆ, ನಮ್ಮ ವ್ಯವಸ್ಥೆಯಲ್ಲಿ ಅತಿ ಕಡಿಮೆ ‘ಕೋಟ್’ ಮಾಡುವವರಿಗೆ ಟೆಂಡರ್ ನೀಡಿ ಕಾಮಗಾರಿ ನಡೆಸಲಾಗುತ್ತದೆ. ಅಂದರೆ, ವೆಚ್ಚ ಕಡಿಮೆ ಮಾಡುವುದಕ್ಕೆ ಆದ್ಯತೆ. ಅದಾದ ಮೇಲೆ, ಕಿಕ್ ಬ್ಯಾಕ್, ಕಮಿಷನ್‌ನಲ್ಲಿ ಹಲವು ಪರ್ಸೆಂಟ್ ಹೋಗುತ್ತದೆ. ಆದ್ದರಿಂದ ಸಾವಿರಾರು ಕೋಟಿಗಳನ್ನು ವೆಚ್ಚ ಮಾಡಿ ನಿರ್ಮಿಸುವ ಸುರಂಗ ರಸ್ತೆಯಲ್ಲಿ ಅತಿಹೆಚ್ಚು ಶುಲ್ಕವನ್ನು ಪಾವತಿಸಿ ಸಂಚರಿಸುವಾಗ ಅದು ಗುಣಮಟ್ಟದಿಂದ ಕೂಡಿದೆಯೇ, ಸುರಕ್ಷಿತವೇ ಎಂಬ ಪ್ರಶ್ನೆ ಉದ್ಭವಿಸುತ್ತದೆ’ ಎಂದು ಸಂಚಾರ ತಜ್ಞ ಪ್ರೊ. ಎಂ.ಎನ್. ಶ್ರೀಹರಿ ಹೇಳಿದರು.

ಸಾರ್ವಜನಿಕ ಸಾರಿಗೆ ವೃದ್ಧಿಯಾಗಲಿ: ಕಾತ್ಯಾಯಿನಿ



‘ಸುರಂಗ ರಸ್ತೆಗಳಿಗೆ ಸುಮಾರು ₹40 ಸಾವಿರ ಕೋಟಿ ವೆಚ್ಚ ಮಾಡುವ ಬದಲು, ಬೆಂಗಳೂರಿಗೆ ಬಹು-ಮಾದರಿಯ ಸಾರ್ವಜನಿಕ ಸಾರಿಗೆಯ ಮೂಲಸೌಕರ್ಯ ಹೆಚ್ಚಿಸಬೇಕು. ನಮ್ಮ ಮೆಟ್ರೊ, ಉಪನಗರ ರೈಲು ಮತ್ತು ಮುಖ್ಯ ರಸ್ತೆಗಳನ್ನು ಅಭಿವೃದ್ಧಿ- ಮಾಡಬಹುದು. ಬಿಎಂಟಿಸಿ ಬಸ್‌ಗಳನ್ನು 18 ಸಾವಿರಕ್ಕೆ ಹೆಚ್ಚಿಸಿ, ಕೊನೆಯ ಮೈಲಿ ಸಂಪರ್ಕಕ್ಕೆ ಸೇವೆ ನೀಡಬಹುದು. ಸಾರ್ವಜನಿಕ ಸಾರಿಗೆ ಪ್ರಯಾಣ ದರವನ್ನು ಎರಡು ಪಟ್ಟು ಕಡಿಮೆ ಮಾಡಬಹುದು ಅಥವಾ ದಕ್ಷಿಣ ಅಮೆರಿಕದ ನಗರಗಳಂತೆ ಉಚಿತ ಮಾಡಿ, ಪ್ರಯಾಣಿಕರ ಸಂಖ್ಯೆಯನ್ನು ಗಮನಾರ್ಹವಾಗಿ ಹೆಚ್ಚಿಸಬಹುದು’ ಎಂದು ಸಿವಿಕ್– ಬೆಂಗಳೂರು ಸಂಸ್ಥೆಯ ಕಾರ್ಯಕಾರಿ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ಸಲಹೆ ನೀಡಿದರು.

ಸುದ್ದಿ 2 ನಿಮಿಷ

ವಾಯುವಿಹಾರಕ್ಕೆ ಸಾಕು ನಾಯಿ ಕರೆದೊಯ್ಯುವ ವೇಳೆ ಗಲಾಟೆ

ಬೆಂಗಳೂರು: ಬನಶಂಕರಿಯ ಕದಿರೇನಹಳ್ಳಿಯಲ್ಲಿ ವಾಯು ವಿಹಾರಕ್ಕೆ ನಾಯಿಯನ್ನು ಕರೆದೊಯ್ಯುವ ವೇಳೆ ಎರಡು ಕುಟುಂಬಗಳ ಮಧ್ಯೆ ಬುಧವಾರ ಬೆಳಿಗ್ಗೆ ಗಲಾಟೆ ನಡೆದಿದೆ.

ನಾಯಿ ಗಲೀಜು ಮಾಡಿದೆ ಎಂದು ಹೇಳಿದ್ದಕ್ಕೆ ಎರಡು ಕುಟುಂಬಸ್ಥರ ಮಧ್ಯೆ ಗಲಾಟೆ ಆಗಿದೆ. ಎರಡು ಕುಟುಂಬಗಳು ಬಡಿದಾಡಿಕೊಂಡು ಪೊಲೀಸ್ ಠಾಣೆ ಮೆಟ್ಟಿಲೇರಿದ್ದಾರೆ.

‘ಯುವತಿ ಇಂದುಮತಿ ಅವರು ತಮ್ಮ ಮನೆಯ ಸಾಕು ನಾಯಿಯನ್ನು ವಾಯುವಿಹಾರಕ್ಕೆ ಕರೆದೊಯ್ಯುತ್ತಿದ್ದರು. ಆ ವೇಳೆ ವ್ಯಕ್ತಿಯೊಬ್ಬ, ‘ಯಾಕೆ ನಿಮ್ಮ ನಾಯಿಯನ್ನು ಮನೆಯ ಎದುರು ಕರೆತಂದು ಗಲೀಜು ಮಾಡಿಸುತ್ತೀಯಾ’ ಎಂದು ಪ್ರಶ್ನಿಸಿದ್ದರು. ಆಗ ನಡೆದ ಗಲಾಟೆಯು ವಿಕೋಪಕ್ಕೆ ಹೋಗಿ ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಮಹಿಳೆಯರು ಪರಸ್ಪರ ತಲೆಕೂದಲು ಹಿಡಿದುಕೊಂಡು ಜಗಳ ಮಾಡಿಕೊಂಡಿದ್ದಾರೆ. ಚಪ್ಪಲಿಯಲ್ಲಿ ಬಡಿದಾಡಿಕೊಂಡಿದ್ದಾರೆ. ಜಗಳ ನಡೆಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಕುರಿತು ಬನಶಂಕರಿ ಪೊಲೀಸ್ ಠಾಣೆಗೆ ದೂರು, ಪ್ರತಿದೂರು ನೀಡಲಾಗಿದೆ.

ಎಲೆ ಮಲ್ಲಪ್ಪ ಕೆರೆ: ಆಟೊ ತಂದು ಹಾಕಿದ ಕಿಡಿಗೇಡಿಗಳು



ಬೆಂಗಳೂರು: ಕೆ.ಆರ್.ಪುರದ ಎಲೆ ಮಲ್ಲಪ್ಪ ಶೆಟ್ಟಿ ಕೆರೆಗೆ ಸಿಕ್ಕಿದ್ದೆಲ್ಲವನ್ನು ತಂದು ಸುರಿಯುತ್ತಿರುವ ಕಿಡಿಗೇಡಿಗಳು ಬುಧವಾರ ಹಳೇ ಆಟೊವನ್ನೇ ತಂದು ಹಾಕಿದ್ದಾರೆ ಎಂದು ಸ್ವಯಂಸೇವಕ ಬಾಲಾಜಿ ರಘೋತ್ತಮ ತಿಳಿಸಿದ್ದಾರೆ.

‘ಸತ್ತ ದನಗಳನ್ನು, ಕಸವನ್ನು, ಕಟ್ಟಡದ ಅವಶೇಷಗಳನ್ನೆಲ್ಲ ಕೆರೆಗೆ ತಂದು ಹಾಕುತ್ತಿದ್ದಾರೆ. ನಾನು ಕೆರೆ ಸಂರಕ್ಷಣಾ ಸದಸ್ಯನಾಗಿ ಕೆಲಸ ಮಾಡುತ್ತಿದ್ದು, ಬುಧವಾರ ಕೆರೆ ಬಳಿ ತೆರಳಿದಾಗ ಆಟೊ ಕಂಡು ಬಂದಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಕೆರೆ ಸ್ವಚ್ಛವಾಗಿ ಇಟ್ಟುಕೊಳ್ಳಲು ಅಡ್ಡಿಪಡಿಸುವವರನ್ನು ಬಿಬಿಎಂಪಿ ಅಧಿಕಾರಿಗಳು ಪತ್ತೆ ಮಾಡಿ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ನಿಧನ ವಾರ್ತೆ

ಮಧುಸೂದನ್



ಮಧುಸೂದನ್

ನೆಲಮಂಗಲ: ಪಟ್ಟಣದ ರಾಯನ್ ನಗರದ ಮಧುಸೂದನ್ (43) ಅನಾರೋಗ್ಯದಿಂದ ಬುಧವಾರ ನಿಧನರಾದರು. ಅವರಿಗೆ ಪತ್ನಿ, ಒಬ್ಬ ಪುತ್ರ, ಒಬ್ಬ ಪುತ್ರಿ ಇದ್ದಾರೆ. ರಾಯನ್ ನಗರದಲ್ಲಿ ಬುಧವಾರ ಸಂಜೆ ಅಂತ್ಯಸಂಸ್ಕಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಸ್ತೆ ಗುಂಡಿ ಮುಚ್ಚಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚಲು ಬಿಬಿಎಂಪಿ ಒಂದು ವಾರದ ಒಳಗೆ ಕ್ರಮ ಕೈಗೊಳ್ಳಬೇಕು. ಇಲ್ಲದೇ ಇದ್ದರೆ ನಾವೇ ಗುಂಡಿಮುಚ್ಚಿ ಪ್ರತಿಭಟನೆ ಆರಂಭಿಸುತ್ತೇವೆ’ ಎಂದು ‘ಆರೋಹಣ’ ಫೌಂಡೇಷನ್ ಸಂಸ್ಥೆಯ ಸದಸ್ಯರು ತಿಳಿಸಿದ್ದಾರೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

‘ಗುಂಡಿ ಮುಚ್ಚುವಂತೆ ನಾವು ಬಿಬಿಎಂಪಿಗೆ ಎರಡು ಬಾರಿ ಮನವಿ ಸಲ್ಲಿಸಿದ್ದೇವೆ. ಯಾವುದೇ ಸ್ಪಂದನೆ ದೊರೆಯದ ಕಾರಣ ಸಾಂಕೇತಿಕವಾಗಿ ಪ್ರತಿಭಟನೆ ಹಮ್ಮಿಕೊಂಡಿದ್ದೇವೆ. ಇನ್ನು ಒಂದು ವಾರದಲ್ಲಿ ಬಿಬಿಎಂಪಿ ಕ್ರಮ ಕೈಗೊಳ್ಳಬೇಕು’ ಎಂದು ‘ಆರೋಹಣ’ ಫೌಂಡೇಷನ್ ಅಧ್ಯಕ್ಷ ಮಹಮ್ಮದ್ ರಾಯಿದ್ ಝ್ಯೆನ್ ಗಡುವು ನೀಡಿದರು.

ವೈಟ್‌ಫೀಲ್ಡ್, ಬನ್ನೇರುಘಟ್ಟ ರಸ್ತೆ ಸೇರಿದಂತೆ ನಗರದ ಅನೇಕ ಕಡೆಗಳಲ್ಲಿ ಗುಂಡಿಗಳು ಬಿದ್ದಿವೆ. ಹೊಂಡಗಳಿಂದಾಗಿ ಅಪಘಾತಗಳು ಹೆಚ್ಚಿವೆ ಎಂದು ತಿಳಿಸಿದರು.

‘ಆರೋಹಣ’ ಫೌಂಡೇಷನ್‌ನ ಶ್ರೀಹರಿ ಶ್ರೀನಿವಾಸ್, ಇಮಾನ್ ಸಯಿದ್ ಉಪಸ್ಥಿತರಿದ್ದರು.



ನಗರದ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಬೇಕೆಂದು ಆಗ್ರಹಿಸಿ ಆರೋಹಣ ಫೌಂಡೇಷನ್ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಸಿ.ಎಂ ಬದಲಾವಣೆ ಖಚಿತ: ಅಶೋಕ

ಬೆಂಗಳೂರು: ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಮುಖ್ಯಮಂತ್ರಿ ಬದಲಾವಣೆ ಖಚಿತ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷ ಮನೆಯೊಂದು ಮೂರು ಬಾಗಿಲು ಆಗಿದ್ದು, ಎಲ್ಲರೂ ಮುಖ್ಯಮಂತ್ರಿ ಆಗಲು ಪೈಪೋಟಿ ನಡೆಸಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಐದು ವರ್ಷ ಇರುತ್ತಾರೆ ಎಂಬುದನ್ನು ಹೈಕಮಾಂಡ್ ಹೇಳಬೇಕು. ಆದರೆ, ಅಧಿಕಾರ ಕಳೆದುಕೊಳ್ಳುವ ಭಯದಲ್ಲಿರುವ ಸಿದ್ದರಾಮಯ್ಯ ಪದೇ ಪದೇ ತಾವೇ ಸಿ.ಎಂ ಆಗಿ ಮುಂದುವರಿಯುವುದಾಗಿ ಹೇಳುತ್ತಿದ್ದಾರೆ. ಸರ್ಕಾರದಲ್ಲಿ ಹಣವಿಲ್ಲದೆ ಅಭಿವೃದ್ಧಿ ಶೂನ್ಯವಾಗಿ ಕಾಂಗ್ರೆಸ್ ಶಾಸಕರೇ ಬೇಸರಗೊಂಡಿದ್ದಾರೆ ಎಂದು ಕುಟುಕಿದರು.

ಸಮೀಕ್ಷೆಯಾಗದೆ ಸ್ಟಿಕರ್ ಅಂಟಿಸಬೇಡಿ: ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿ ಪರಿಶಿಷ್ಟ ಜಾತಿಯವರ ಸಮಗ್ರ ಸಮೀಕ್ಷೆಯಾಗದ ಮನೆಗಳಿಗೆ ಸ್ಟಿಕರ್ ಅಂಟಿಸದಂತೆ ಗಣತಿ ಸಿಬ್ಬಂದಿಗೆ ಸೂಚಿಸಲಾಗಿದೆ’ ಎಂದು ಬಿಬಿಎಂಪಿ ಕಲ್ಯಾಣ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

'ನಗರದಾದ್ಯಂತ ಪರಿಶಿಷ್ಟ ಜಾತಿಯವರ ಸಮಗ್ರ ಸಮೀಕ್ಷೆ ಪ್ರತಿ ಅರ್ಹ ಕುಟುಂಬವನ್ನು ಒಳಗೊಂಡಿದೆಯೇ ಎಂದು ಖಚಿತ ಪಡಿಸಿಕೊಳ್ಳುವ ಗುರಿ ಹೊಂದಲಾಗಿದೆ. ಸಮೀಕ್ಷಾ ತಂಡಗಳು ನಿವಾಸಿಗಳೊಂದಿಗೆ ಸಂವಹನ ನಡೆಸದೆ ಮನೆಗಳ ಮೇಲೆ ಸಮೀಕ್ಷೆಯ ಸ್ಟಿಕರ್‌ಗಳನ್ನು ಅಂಟಿಸಿವೆ ಎಂಬ ದೂರುಗಳು ಬಂದಿದ್ದು, ನಿವಾಸಿಗಳಿಂದ ಮಾಹಿತಿ ಪಡೆಯದೆ ಸ್ಟಿಕರ್ ಅಂಟಿಸದಂತೆ ಸೂಚಿಸಲಾಗಿದೆ’ ಎಂದರು.

‘ಸಮೀಕ್ಷಾ ತಂಡಗಳು ಪ್ರತಿ ಮನೆಗೆ ಭೇಟಿ ನೀಡಿರುವುದನ್ನು ಖಚಿತಪಡಿಸುವ ಮತ್ತು ದೃಢೀಕರಿಸುವ ಉದ್ದೇಶದಿಂದ ಮನೆಗೆ ಸ್ಟಿಕರ್ ಅಂಟಿಸುವುದು ಸಮೀಕ್ಷಾ ಪ್ರಕ್ರಿಯೆಯ ಒಂದು ಭಾಗವಾಗಿದೆ. ಮನೆಯ ಸದಸ್ಯರೊಂದಿಗೆ ಮಾತುಕತೆ ನಡೆಸದೆ ಸ್ಟಿಕರ್ ಅಂಟಿಸಬಾರದು ಎಂದು ಸಮೀಕ್ಷಾ ತಂಡಗಳಿಗೆ ಸ್ಪಷ್ಟವಾಗಿ ಸೂಚನೆ ನೀಡಲಾಗಿದೆ. ಕೆಲ ಸಂದರ್ಭಗಳಲ್ಲಿ ಇದನ್ನು ಅನುಸರಿಸದಿರುವುದನ್ನು ನಾವು ಒಪ್ಪಿಕೊಳ್ಳುತ್ತೇವೆ’ ಎಂದು ಹೇಳಿದರು.

‘ಮನೆಯ ಸದಸ್ಯರಿಂದ ಮಾಹಿತಿ ಪಡೆಯದೆ ಸ್ಟಿಕರ್ ಅಂಟಿಸಿದ್ದರೆ, ಸಹಾಯವಾಣಿ 94813 59000ಗೆ ಕರೆ ಮಾಡಬಹುದು’ ಎಂದು ತಿಳಿಸಿದರು.

ಸಿ.ಎಂ ರಾಜೀನಾಮೆಗೆ ಜೆಡಿಎಸ್ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ಬಿಡಿಗಾಸು ಕೊಡಲು ಸಾಧ್ಯವಾಗದ ದುಸ್ಥಿತಿಗೆ ತಲುಪಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್ ಗೌಡ ಆಗ್ರಹಿಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಭ್ರಷ್ಟಾಚಾರ, ಆಡಳಿತ ವೈಫಲ್ಯದಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಆಡಳಿತ ಪಕ್ಷದ ಹಿರಿಯ ಶಾಸಕರೇ ಸರ್ಕಾರದ ವಿರುದ್ಧ ಧ್ವನಿ ಎತ್ತಿದ್ದಾರೆ. ರಾಜ್ಯವು ಆರ್ಥಿಕ ದಿವಾಳಿಯತ್ತ ಸಾಗಿದೆ ಎಂದು ದೂರಿದರು.

ವಿಧಾನಪರಿಷತ್ ಸದಸ್ಯ ಟಿ.ಎನ್. ಜವರಾಯಿಗೌಡ, ಮಾಜಿ ಸದಸ್ಯ ಕೆ.ಎ. ತಿಪ್ಪೇಸ್ವಾಮಿ, ಪಕ್ಷದ ಬೆಂಗಳೂರು ನಗರ ಮಹಿಳಾ ಘಟಕದ ಅಧ್ಯಕ್ಷೆ ಶೈಲಾ ಸಂತೋಜಿ ರಾವ್, ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಅಫ್ರೋಜ್ ಬೇಗ್, ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಅಧ್ಯಕ್ಷ ಟಿ.ಆರ್. ತುಳಸಿರಾಮ್, ಉತ್ತರ ಲೋಕಸಭೆ ಕ್ಷೇತ್ರದ ಅಧ್ಯಕ್ಷ ಎ.ಎಂ. ಪ್ರವೀಣ್ ಕುಮಾರ್ ಸೇರಿದಂತೆ ಹಲವು ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ರಾಜ್ಯ ಸರ್ಕಾರದ ಆಡಳಿತ ವೈಫಲ್ಯ ಖಂಡಿಸಿ ಜೆಡಿಎಸ್ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು

ಜಯದೇವ ಸೇರಿ ವಿವಿಧ ಆಸ್ಪತ್ರೆಗಳಲ್ಲಿ ಒಪಿಡಿ ನೋಂದಣಿ ಶೇ 20ರವರೆಗೆ ಹೆಚ್ಚಳ

ಹೃದಯ ತಪಾಸಣೆ: ಹೊರರೋಗಿಗಳ ಸಂಖ್ಯೆ ಹೆಚ್ಚಳ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಸೇರಿ ರಾಜ್ಯದ ವಿವಿಧೆಡೆ ಹೃದಯಾಘಾತದಿಂದ ಯುವಜನರು ಹಾಗೂ ಮಧ್ಯವಯಸ್ಕರು ಮೃತಪಡುತ್ತಿರುವ ಬಗ್ಗೆ ವರದಿಯಾಗುತ್ತಿರುವ ಕಾರಣ, ನಗರದ ಜಯದೇವ ಹೃದ್ರೋಗ ಸಂಸ್ಥೆ ಸೇರಿ ವಿವಿಧ ಪ್ರಮುಖ ಆಸ್ಪತ್ರೆಗಳಲ್ಲಿ ಹೃದಯ ತಪಾಸಣೆಗೆ ಭೇಟಿ ನೀಡುವ ಹೊರ ರೋಗಿಗಳ ಸಂಖ್ಯೆ ಶೇ 20 ರಷ್ಟು ಹೆಚ್ಚಳವಾಗಿದೆ.

ಹೃದಯದ ಕಾಳಜಿಯಿಂದ ಆರೋಗ್ಯವಂತರು ಸಹ ಆಸ್ಪತ್ರೆಗೆ ಭೇಟಿ ನೀಡಿ, ಇಸಿಜಿ ಸೇರಿ ವಿವಿಧ ಪರೀಕ್ಷೆ ಮಾಡಿಸಿಕೊಳ್ಳುತ್ತಿದ್ದಾರೆ. ಜಯನಗರದಲ್ಲಿರುವ ಜಯದೇವ ಹೃದ್ರೋಗ ಸಂಸ್ಥೆಯು 1,050 ಹಾಸಿಗೆಗಳನ್ನು ಒಳಗೊಂಡಿದೆ.

ಇದು ವಿಶ್ವದಲ್ಲೇ ಅತಿದೊಡ್ಡ ಹೃದ್ರೋಗ ಆಸ್ಪತ್ರೆಯಾಗಿದೆ. ಹೃದ್ರೋಗ ಚಿಕಿತ್ಸೆ ಹಾಗೂ ತಪಾಸಣೆ ಸಂಬಂಧ ಈ ಆಸ್ಪತ್ರೆಗೆ ರಾಜ್ಯದ ವಿವಿಧೆಡೆಯಿಂದ ರೋಗಿಗಳು ಬರುತ್ತಿದ್ದು, ಹೊರ ರೋಗಿಗಳ ವಿಭಾಗದ ನೋಂದಣಿ (ಒಪಿಡಿ) ವಾರದಿಂದ ಶೇ 15ರಿಂದ ಶೇ 20ರವರೆಗೆ ಏರಿಕೆಯಾಗಿದೆ.

ಜಯದೇವ ಆಸ್ಪತ್ರೆಯಲ್ಲಿ ಪ್ರತಿನಿತ್ಯ ಸರಾಸರಿ 1,300ರಿಂದ 1,400 ಇರುತ್ತಿದ್ದ ಹೊರರೋಗಿಗಳ ಸಂಖ್ಯೆ, ಈಗ 1,700ರಿಂದ 1,800ಕ್ಕೆ ತಲುಪಿದೆ. ಯುವಜನರು ಹಾಗೂ ಮಧ್ಯ ವಯಸ್ಕರು ಸಹ ಹೆಚ್ಚಿನ ಸಂಖ್ಯೆಯಲ್ಲಿ ತಪಾಸಣೆ ಮಾಡಿಸಿಕೊಳ್ಳಲು ಬರುತ್ತಿದ್ದಾರೆ. ಇದೇ ರೀತಿ, ನಾರಾಯಣ ಹೃದಯಾಲಯ, ಫೋರ್ಟಿಸ್ ಸೇರಿ ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿಯೂ ಹೃದಯ ತಪಾಸಣೆಗೆ ಬರುವವರ ಸಂಖ್ಯೆ ಕೊಂಚ ಏರಿಕೆಯಾಗಿದೆ.



‘ಜೀವನಶೈಲಿ ಬದಲಾದ ಕಾರಣ ಮಧುಮೇಹ, ಅಧಿಕ ರಕ್ತದೊತ್ತಡ, ಮಾನಸಿಕ ಒತ್ತಡ ಹೆಚ್ಚಾಗುತ್ತಿದೆ. ಧೂಮಪಾನದಂತಹ ವ್ಯಸನದಿಂದಲೂ ಹೃದಯ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಯುವಜನರಲ್ಲಿಯೂ ಒತ್ತಡ ಹೆಚ್ಚಾಗುತ್ತಿದೆ. ಪರೀಕ್ಷೆ, ಉದ್ಯೋಗ ಸೇರಿ ವಿವಿಧ ಒತ್ತಡಗಳನ್ನು ಎದುರಿಸುತ್ತಿದ್ದಾರೆ. ಇದರಿಂದಾಗಿಯೂ ಹೃದಯಾಘಾತ ಕಾಣಿಸಿಕೊಳ್ಳುವ ಸಾಧ್ಯತೆಯಿದೆ’ ಎಂದು ಹೃದ್ರೋಗ ತಜ್ಞರು ತಿಳಿಸಿದರು.

> ಹೃದಯ ತಪಾಸಣೆಗೆ ಬರುವವರ ಸಂಖ್ಯೆ ಹೆಚ್ಚಳವಾಗಿದೆ. ಕೆಲವರು ಅನಗತ್ಯ ಭಯಕ್ಕೆ ಒಳಗಾಗಿ ಬರುತ್ತಿದ್ದಾರೆ. ಅಗತ್ಯ ಪರೀಕ್ಷೆಗಳನ್ನು ಮಾಡಲಾಗುತ್ತಿದೆ
> **ಡಾ.ಕೆ.ಎಸ್. ರವೀಂದ್ರನಾಥ್,** ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ

> ಹತ್ತು ದಿನಗಳಿಂದ ಹೃದಯ ಪರೀಕ್ಷೆಗೆ ಬರುವವರ ಸಂಖ್ಯೆ ಶೇ 20ರಷ್ಟು ಹೆಚ್ಚಳವಾಗಿದೆ. 30ರಿಂದ 50 ವರ್ಷದೊಳಗಿನವರೇ ಹೆಚ್ಚಿದ್ದಾರೆ.
> **ಡಾ.ರಾಜ್‌ಪಾಲ್ ಸಿಂಗ್ ಆರ್.ಎಲ್.,** ಫೋರ್ಟಿಸ್ ಆಸ್ಪತ್ರೆ ಹೃದ್ರೋಗ ವಿಭಾಗದ ನಿರ್ದೇಶಕ

> ಹೃದಯಾಘಾತವು ಜೀವನಶೈಲಿ ಆಧಾರಿತ ಕಾಯಿಲೆ. ಬದಲಾದ ಜೀವನಶೈಲಿಯಿಂದ ಈ ಪ್ರಕರಣ ಹೆಚ್ಚಾಗಿದೆ. ಯುವಜನರಲ್ಲೂ ಹೃದ್ರೋಗ ಕಾಣಿಸಿಕೊಳ್ಳುತ್ತಿದೆ **ಡಾ.ಕೇಶವ ಆರ್.,**
> ಮಣಿಪಾಲ್ ಆಸ್ಪತ್ರೆ ಹೃದ್ರೋಗ ತಜ್ಞ

ತಜ್ಞರ ಪ್ರಕಾರ ಪ್ರಮುಖ ಕಾರಣಗಳು

- ಅಧಿಕ ರಕ್ತದೊತ್ತಡ, ಮಧುಮೇಹ ಮತ್ತು ಅಧಿಕ ಕೊಲೆಸ್ಟ್ರಾಲ್
- ಬದಲಾದ ಜೀವನಶೈಲಿ, ಧೂಮಪಾನ, ತಂಬಾಕು ಉತ್ಪನ್ನ ಸೇವನೆ, ಮಾದಕ ವಸ್ತುಗಳ ಸೇವನೆಯ ವ್ಯಸನ
- ವ್ಯಾಯಾಮ ಸೇರಿದಂತೆ ದೈಹಿಕ ಚಟುವಟಿಕೆ ಇಲ್ಲದಿರುವುದು
- ಜಂಕ್ ಫುಡ್ ಸೇರಿ ಪಾಶ್ಚಾತ್ಯ ಆಹಾರ ಸೇವನೆ
- ಜಿಮ್‌ಗಳಲ್ಲಿ ಅಶಿಸ್ತಿನ ಕಸರತ್ತು, ಅವೈಜ್ಞಾನಿಕವಾಗಿ ಪ್ರೊಟೀನ್ ಸಪ್ಲಿಮೆಂಟ್ ಪಡೆಯುವಿಕೆ
- ಅನುವಂಶಿಕವಾಗಿ, ಕುಟುಂಬದ ಸದಸ್ಯರಿಗೆ ಹೃದಯಾಘಾತದ ಇತಿಹಾಸವಿದ್ದರೆ
- ಮಾನಸಿಕ ಒತ್ತಡ, ಹೆಚ್ಚುತ್ತಿರುವ ವಾಯುಮಾಲಿನ್ಯ

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ವಿಮಾನದಲ್ಲಿ ಹಾವು

ಆಸ್ಟ್ರೇಲಿಯಾದ ಮೆಲ್ಬರ್ನ್‌ನಿಂದ ಬ್ರಿಸ್ಬೇನ್‌ಗೆ ಸಂಚರಿಸಬೇಕಿದ್ದ ವಿಮಾನದಲ್ಲಿ ಹಾವು ಕಾಣಿಸಿಕೊಂಡ ಕಾರಣ ಎರಡು ಗಂಟೆ ವಿಳಂಬ ಆಗಿದೆ



ಕಂಠೀರವದಲ್ಲಿ ನೀರಜ್

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ಒಲಿಂಪಿಯನ್ ನೀರಜ್ ಚೋಪ್ರಾ ಜಾವೆಲಿನ್ ಥ್ರೋ ಅಭ್ಯಾಸ ಮಾಡಿದರು. ಇದೇ 5ರಂದು ನೀರಜ್ ಚೋಪ್ರಾ ಕ್ಲಾಸಿಕ್ ಆಯೋಜನೆಗೊಂಡಿದೆ

ಸೆನ್ಸೆಕ್ಸ್ 83,409 | ನಿಫ್ಟಿ 25,453 | $/₹85.62 | ಚಿನ್ನ (Std. 10g) ₹1.02 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.12 ಲಕ್ಷ (ಬೆಂಗಳೂರು)

ವಾಲ್ಮೀಕಿ ಹಗರಣ – ಮಂತ್ರಿಗಳು ಭಾಗಿ

ಎಲ್ಲಾ ದಾಖಲೆಗಳನ್ನು ಸಿಬಿಐಗೆ ಒಪ್ಪಿಸಲು ಹೈಕೋರ್ಟ್ ಆದೇಶ

● ಬಿ.ಎಸ್.ಷಣ್ಮುಖಪ್ಪ

ಬೆಂಗಳೂರು: ‘ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ರೂಪಾಯಿ ದುರ್ಬಳಕೆ ಆರೋಪ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಕೆಲವು ಪ್ರಭಾವಿ ಮಂತ್ರಿಗಳು ಮತ್ತು ಉನ್ನತ ಮಟ್ಟದ ಅಧಿಕಾರಿಗಳೂ ಭಾಗಿಯಾಗಿದ್ದಾರೆ ಎಂಬುದನ್ನು ಸಿಬಿಐ ಈವರೆಗಿನ ತನ್ನ ತನಿಖೆಯಲ್ಲಿ ಪತ್ತೆ ಮಾಡಿದೆ’ ಎಂಬ ಅಂಶವನ್ನು ಹೈಕೋರ್ಟ್ ಮಧ್ಯಂತರ ಆದೇಶದಲ್ಲಿ ಉಲ್ಲೇಖಿಸಿದೆ.



ಇದೇ ವೇಳೆ, ‘ಈ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಇನ್ನೂ ಎರಡು ಹೊಸದಾದ, ಅಕ್ರಮ ಹಣ ವರ್ಗಾವಣೆ ಹಗರಣಗಳೂ ಬೆಳಕಿಗೆ ಬಂದಿವೆ. ಹೀಗಾಗಿ, ಹಗರಣದ ತನಿಖೆ ನಡೆಸಿರುವ ಎಲ್ಲಾ ತನಿಖಾ ಸಂಸ್ಥೆಗಳು ತನಿಖೆಯ ವೇಳೆ ಯಾವೆಲ್ಲಾ ದಾಖಲೆಗಳನ್ನು ತಮ್ಮ ಸುಪರ್ದಿಗೆ ಪಡೆದಿವೆಯೋ ಅಂತಹ ಡಿಜಿಟಲ್ ಸಾಧನ ಮತ್ತು ಪರಿಶೀಲನೆಗೆ ಒಳಪಡಿಸಿರುವ ಸಮಸ್ತ ದಸ್ತಾವೇಜುಗಳನ್ನು ಸಿಬಿಐ ವಶಕ್ಕೆ ಒಪ್ಪಿಸಬೇಕು’ ಎಂದು ಮಹತ್ವದ ಆದೇಶ ಹೊರಡಿಸಿದೆ.

‘ವಾಲ್ಮೀಕಿ ನಿಗಮದಲ್ಲಿನ ಹಗರಣದ ತನಿಖೆಗೆ ಸಂಬಂಧಿಸಿದ ದೋಷಾರೋಪ ಪಟ್ಟಿಯನ್ನು ಶೀಘ್ರವೇ ಸಕ್ಷಮ ವಿಚಾರಣಾ ನ್ಯಾಯಾಲಯಕ್ಕೆ ಒಪ್ಪಿಸುವಂತೆ ಸಿಬಿಐಗೆ ನಿರ್ದೇಶಿಸಬೇಕು ಮತ್ತು ಸಿಬಿಐ ವಿಶೇಷ ನ್ಯಾಯಾಲಯ ಈ ಕುರಿತಂತೆ ವೇಗವಾಗಿ ವಿಚಾರಣೆ ನಡೆಸಿ ಪ್ರಕರಣ ತಾರ್ಕಿಕ ಅಂತ್ಯ ಕಾಣುವಂತೆ ತೀರ್ಮಾನ ಕೈಗೊಳ್ಳಲು ನಿರ್ದೇಶಿಸಬೇಕು’ ಎಂದು ಕೋರಲಾದ ರಿಟ್ ಅರ್ಜಿಯಲ್ಲಿ ಈ ಕುರಿತಂತೆ ಆದೇಶಿಸಲಾಗಿದೆ.

‘ಈ ಪ್ರಕರಣದ ಸಿಬಿಐ ತನಿಖೆಯನ್ನು ಹೈಕೋರ್ಟ್ ನಿಗಾದಲ್ಲಿಯೇ ನಡೆಸಬೇಕು’ ಎಂದು ಕೋರಿ ಬಿಜೆಪಿಯ ಸಮಾನ ಮನಸ್ಕ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಮತ್ತು ರಮೇಶ ಜಾರಕಿಹೊಳಿ, ಮಾಜಿ ಶಾಸಕರಾದ ಅರವಿಂದ ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ದಾಖಲಿಸಿರುವ ರಿಟ್ ಅರ್ಜಿಯಲ್ಲಿ ಸಿಬಿಐ ಎರಡು ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿತ್ತು. ಈ ಎರಡೂ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ವಶಕ್ಕೆ ಒಪ್ಪಿಸಿ: ‘ವಾಲ್ಮೀಕಿ ನಿಗಮದ ಬಹುಕೋಟಿ ಹಣ ದುರ್ಬಳಕೆ ಆರೋಪ ಪ್ರಕರಣದಲ್ಲಿ ಅಕ್ರಮವಾಗಿ ಹಣ ವರ್ಗಾವಣೆ ನಡೆದಿದೆ ಮತ್ತು ಈ ಅಕ್ರಮದ ಒಳಸುಳಿ ಹಾಗೂ ಇದರ ಹಿಂದೆ ಅಡಗಿರುವ ಪಿತೂರಿಯನ್ನು ಬಯಲುಗೊಳಿಸಲು ಈಗಾಗಲೇ ತನಿಖೆ ನಡೆಸಿರುವ ವಿಶೇಷ ತನಿಖಾ ತಂಡ (ಎಸ್ಐಟಿ), ಜಾರಿ ನಿರ್ದೇಶನಾಲಯ (ಇ.ಡಿ), ಕೇಂದ್ರ ವಿಧಿ ವಿಜ್ಞಾನ ಪ್ರಯೋಗಾಲಯ (ಸಿಎಫ್ಎಸ್ಎಲ್) ಮತ್ತು ರಾಜ್ಯ ವಿಧಿ ವಿಜ್ಞಾನ ಪ್ರಯೋಗಾಲಯ (ಎಸ್ಎಫ್ಎಸ್ಎಲ್) ಹೊಂದಿರುವ ದಾಖಲೆಗಳನ್ನು ಸಿಬಿಐ ವಶಕ್ಕೆ ಒಪ್ಪಿಸಬೇಕು’ ಎಂದು ನ್ಯಾಯಪೀಠ ತಾಕೀತು ಮಾಡಿದೆ.

▶6

ಮತ್ತೆರಡು ಅಕ್ರಮ ಪತ್ತೆ ಮಾಡಿದ ಸಿಬಿಐ

- ವಾಲ್ಮೀಕಿ ನಿಗಮಕ್ಕೆ ಸೇರಿದ ಬೆಂಗಳೂರಿನ ಸಿದ್ದಯ್ಯ ರಸ್ತೆಯಲ್ಲಿರುವ ಬ್ಯಾಂಕ್ ಆಫ್ ಬರೋಡಾ ಖಾತೆಯಲ್ಲಿದ್ದ ₹2.17 ಕೋಟಿ ಮೊತ್ತವನ್ನೂ ನೆಕ್ಕಂಟಿ ನಾಗರಾಜ್ ಖಾತೆಗೆ ವರ್ಗಾಯಿಸಿರುವುದು ಸಿಬಿಐ ತನಿಖೆ ವೇಳೆ ಪತ್ತೆಯಾಗಿದೆ
- ಕೆಜಿಟಿಟಿಐಗೆ ಸೇರಿದ ಬೆಂಗಳೂರಿನ ಕೆನರಾ ಬ್ಯಾಂಕ್ ಖಾತೆಯಲ್ಲಿದ್ದ ₹95 ಲಕ್ಷ ಮೊತ್ತವನ್ನು ರಹಸ್ಯವಾಗಿ ಮಧ್ಯವರ್ತಿ ಖಾತೆಗಳ ಮುಖಾಂತರ ಮಾಜಿ ಸಚಿವ ಬಿ.ನಾಗೇಂದ್ರ ಆಪ್ತ ನೆಕ್ಕಂಟಿ ನಾಗರಾಜ್ ಖಾತೆಗೆ ವರ್ಗಾಯಿಸಿರುವುದು ಗೊತ್ತಾಗಿದೆ

ಸಿಬಿಐ ಕೋರಿಕೆಗಳೇನು?

- 700 ಖಾತೆಗಳಿಗೆ ನಿಗಮದ ಹಣವನ್ನು ವರ್ಗಾಯಿಸಿದ ಪ್ರಕರಣದಲ್ಲಿ ಹಣಕಾಸು ದಾಖಲೆಗಳನ್ನು ತಿರುಚಲಾಗಿದೆ. ಇದನ್ನು ಬಯಲಿಗೆಳೆಯಲು ಸಮಗ್ರ ತನಿಖೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಎಸ್ಐಟಿ, ಇ.ಡಿ ಮತ್ತು ಎಫ್ಎಸ್ಎಲ್‌ಗಳಲ್ಲಿ ಈಗಾಗಲೇ ಸಂಗ್ರಹಿಸಲಾಗಿರುವ ಡಿಜಿಟಲ್ ಸಾಧನಗಳು, ವಿಧಿವಿಜ್ಞಾನ ಪ್ರಯೋಗಾಲಯದ ವಶದಲ್ಲಿರುವ ಚಿತ್ರಗಳು ಮತ್ತು ಜಪ್ತಿ ಮಾಡಲಾಗಿರುವ ಇತರೆ ಎಲ್ಲಾ ದಾಖಲೆಗಳನ್ನು ನಮ್ಮ ವಶಕ್ಕೆ ನೀಡುವಂತೆ ನಿರ್ದೇಶಿಸಬೇಕು
- ಕರ್ನಾಟಕ ಜರ್ಮನ್ ತಾಂತ್ರಿಕ ತರಬೇತಿ ಸಂಸ್ಥೆ (ಕೆಜಿಟಿಟಿಐ), ಪರಿಶಿಷ್ಟ ಪಂಗಡ ಕಲ್ಯಾಣ ಇಲಾಖೆ ಅಧಿಕಾರಿಗಳು ಮತ್ತು ಖಾಸಗಿ ವ್ಯಕ್ತಿಗಳ ಪಾತ್ರದ ಬಗ್ಗೆ ತನಿಖೆ ನಡೆಸಲು ನ್ಯಾಯಾಲಯ ಅನುಮತಿ ನೀಡಬೇಕಿದೆ. ಸದ್ಯಕ್ಕೆ ತನಿಖೆಯು ಪ್ರಾಥಮಿಕ ಹಂತದಲ್ಲಿದೆ. ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 173ರ ಅಡಿ ಸರ್ಕಾರಿ ಅಧಿಕಾರಿಗಳು ಮತ್ತು ಆರೋಪಿಗಳ ವಿರುದ್ಧ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲು ಅನುಮತಿಸಬೇಕು
- ಸಿಬಿಐನ ಈ ಎರಡೂ ಕೋರಿಕೆಯುಳ್ಳ ಮಧ್ಯಂತರ ಅರ್ಜಿಗಳನ್ನು ನ್ಯಾಯಪೀಠ ಮನ್ನಿಸಿ ಆದೇಶಿಸಿದೆ

ಹಗರಣದ ಹಿಂದಿನ ಹೆಜ್ಜೆಗಳು

ವಾಲ್ಮೀಕಿ ನಿಗಮದ ಹಣ ದುರ್ಬಳಕೆ ಆರೋಪ ತಾರಕ ಸ್ಥಿತಿ ತಲುಪುತ್ತಿದ್ದಂತೆಯೇ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು, ‘ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು’ ಎಂದು ಕೇಂದ್ರ ಗೃಹ ಸಚಿವಾಲಯಕ್ಕೆ 2024ರ ಜೂನ್ 1ರಂದು ಮನವಿ ಮಾಡಿದ್ದರು.

ಇನ್ನೊಂದೆಡೆ, ‘ಪ್ರಕರಣದ ಎಸ್ಐಟಿ ತನಿಖೆಯನ್ನು ಸಿಬಿಐಗೆ ವರ್ಗಾವಣೆ ಮಾಡಬೇಕು’ ಎಂದು ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿತ್ತು. ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ 2024ರ ನವೆಂಬರ್ 13ರಂದು ಮನವಿಯನ್ನು ವಜಾಗೊಳಿಸಿತ್ತು.

ಇದೇ ವೇಳೆ ಯತ್ನಾಳ, ಜಾರಕಿಹೊಳಿ, ಲಿಂಬಾವಳಿ ಮತ್ತು ಕುಮಾರ್ ಬಂಗಾರಪ್ಪ ಅವರು ಹೈಕೋರ್ಟ್‌ಗೆ ರಿಟ್ ಅರ್ಜಿಯೊಂದನ್ನು ಸಲ್ಲಿಸುವ ಮೂಲಕ ‘ಹಲವು ತಿಂಗಳುಗಳೇ ಉರುಳಿದರೂ ಸಿಬಿಐ ಇನ್ನೂ ಪ್ರಕರಣದ ತನಿಖೆ ಆರಂಭಿಸಿಲ್ಲ’ ಎಂದು ಆಕ್ಷೇಪಿಸಿದ್ದರು.

▶6

ಬಿಜೆಪಿ ನಾಯಕರದು ಹಗಲುಗನಸು: ಸಿದ್ದರಾಮಯ್ಯ

‘5 ವರ್ಷ ನಾನೇ ಸಿ.ಎಂ’

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ‘ಐದು ವರ್ಷ ನಾನೇ ಮುಖ್ಯಮಂತ್ರಿ. ಆ ಬಗ್ಗೆ ಯಾವುದೇ ಅನುಮಾನ ಬೇಡ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಸ್ಪಷ್ಟವಾಗಿ ಹೇಳಿದರು. ಆ ಮೂಲಕ ಕೆಲವು ದಿನಗಳಿಂದ ಭುಗಿಲೆದ್ದಿದ್ದ ನಾಯಕತ್ವ ಬದಲಾವಣೆ ಕೂಗು ಮತ್ತೊಂದು ತಿರುವು ಪಡೆದಿದೆ. ನಂದಿಗಿರಿಧಾಮದಲ್ಲಿ ನಡೆದ ಸಚಿವ ಸಂಪುಟ ಸಭೆಗೆ ಹೊರಡುವ ಮೊದಲು ಭೋಗ ನಂದೀಶ್ವರ ದೇವಾಲಯದಲ್ಲಿ ದರ್ಶನ ಪಡೆದು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

‘ನಾಯಕತ್ವ ಬದಲಾವಣೆ ಬಗ್ಗೆ ಬಿಜೆಪಿ ನಾಯಕರು ಹಗಲುಗನಸು ಕಾಣುತ್ತಿದ್ದಾರೆ. ಬಿಜೆಪಿಯವರ ಕನಸು ಎಂದಿಗೂ ನನಸಾಗದು. ನಾವೆಲ್ಲಾ ಒಟ್ಟಾಗಿದ್ದೇವೆ. ನಮ್ಮ ಸರ್ಕಾರ ಬಂಡೆಯಂತೆ ಐದು ವರ್ಷ ಆಡಳಿತ ನಡೆಸಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಿಮಗೆ ಯಾರು ಹೇಳಿದರು?: ‘ನಾಯಕತ್ವ ಬದಲಾವಣೆಯಾಗುತ್ತದೆ ಎಂಬ ಸುದ್ದಿ ಇದೆಯಲ್ಲ’ ಎಂಬ ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಸಿದ್ದರಾಮಯ್ಯ ಪಕ್ಕದಲ್ಲಿದ್ದ ಗೃಹ ಸಚಿವ ಜಿ.ಪರಮೇಶ್ವರ, ‘ನಿಮಗೇಕೆ ಆ ಅನುಮಾನ. ನಿಮಗೆ ಯಾರು ಹೇಳಿದರು ಹಾಗಂತ’ ಎಂದು ಪ್ರಶ್ನಿಸಿದರು. ಆಗ ಮಾಧ್ಯಮ ಪ್ರತಿನಿಧಿಗಳು, ‘ಮುಖ್ಯಮಂತ್ರಿ ಸಿದ್ದರಾಮಯ್ಯ ಬದಲಾಗುತ್ತಾರೆ ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ’ ಎಂದರು.

‘ಬಿಜೆಪಿಯ ಆರ್.ಅಶೋಕ, ಬಿ.ವೈ.ವಿಜಯೇಂದ್ರ, ಛಲವಾದಿ ನಾರಾಯಣಸ್ವಾಮಿ ನಮ್ಮ ಹೈಕಮಾಂಡ್ ಅಲ್ಲ. ನಾನೇ ಐದು ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯಲಿದ್ದೇನೆ’ ಎಂದು ಸಿದ್ದರಾಮಯ್ಯ ಕುಟುಕಿದರು. ‘ಬಿಜೆಪಿಯವರು ಸುಳ್ಳನ್ನು ಮಾತ್ರ ನಂಬುತ್ತಾರೆ. ಸತ್ಯವನ್ನಲ್ಲ. ಸತ್ಯ ಹೇಳಿ ಅವರಿಗೆ ಗೊತ್ತೇ ಇಲ್ಲ’ ಎಂದರು.

ಪ್ರಜಾಪ್ರಭುತ್ವದಲಿ ಎಲ್ಲರಿಗೂ ಸಚಿವರಾಗುವ ಅಧಿಕಾರವಿದೆ. ಸಚಿವ ಸ್ಥಾನದ ಬಗ್ಗೆ ಪಕ್ಷದ ವರಿಷ್ಠರು ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ. ಪಕ್ಷೇತರರೂ ಸೇರಿ 142 ಶಾಸಕರು ನಮ್ಮಲ್ಲಿ ಇದ್ದಾರೆ. 34 ಜನರನ್ನು ಮಾತ್ರ ಸಚಿವರನ್ನಾಗಿಸಬಹುದು. ಎಲ್ಲರನ್ನು ಮಾಡಲು ಸಾಧ್ಯವಾಗುವುದಿಲ್ಲ ಎಂದರು.



ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಬೆಟ್ಟದಲ್ಲಿ ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಭಾಗವಹಿಸಲು ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜನರತ್ತ ಕೈ ಬೀಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಚಿವರಾದ ಜಿ.ಪರಮೇಶ್ವರ್, ಡಾ.ಎಂ.ಸಿ. ಸುಧಾಕರ್, ರಹೀಂ ಖಾನ್ ಮುಂತಾದವರು ಜೊತೆಗಿದ್ದರು.

ನನ್ನ ಬಳಿ ಆಯ್ಕೆಗಳಿಲ್ಲ: ಡಿಕೆಶಿ

‘ನನ್ನ ಬಳಿ ಬೇರೆ ಆಯ್ಕೆಗಳಿಲ್ಲ. ಪಕ್ಷ ಮತ್ತು ಹೈಕಮಾಂಡ್ ತೀರ್ಮಾನಕ್ಕೆ ಬದ್ಧನಾಗಿರುವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಬೆಂಬಲವಾಗಿ ನಿಲ್ಲುವೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

‘2028ರ ವಿಧಾನಸಭೆ ಚುನಾವಣೆ ದೃಷ್ಟಿಯಲ್ಲಿ ಇಟ್ಟುಕೊಂಡು ಎಲ್ಲರೂ ಒಟ್ಟಾಗಿ ಕೆಲಸ ಮಾಡುತ್ತೇವೆ. ಪಕ್ಷ ಡಿ.ಕೆ.ಶಿವಕುಮಾರ್ ಒಬ್ಬನದ್ದಲ್ಲ. ಲಕ್ಷಾಂತರ ಕಾರ್ಯಕರ್ತರು ನಮಗಾಗಿ ಕೆಲಸ ಮಾಡಿದ್ದಾರೆ’ ಎಂದು ಅವರು ಉತ್ತರಿಸಿದರು.

ಸುದ್ದಿಗಾರರ ಉಳಿದ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸಿದ ಅವರು, ‘ಈ ಬಗ್ಗೆ ಸದ್ಯ ನಾನು ಏನನ್ನೂ ಚರ್ಚಿಸುವುದಿಲ್ಲ’ ಎಂದರು.

ಕಾರ್ಮಿಕರ ಮಕ್ಕಳಿಗೆ ವಸತಿ ಶಾಲೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತರಾಗಿರುವ ಕಾರ್ಮಿಕರ ಮಕ್ಕಳಿಗಾಗಿ ಒಟ್ಟು ₹1,125 ಕೋಟಿ ವೆಚ್ಚದಲ್ಲಿ ಜಿಲ್ಲೆಗೊಂದರಂತೆ ವಸತಿ ಶಾಲೆ ಆರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಬುಧವಾರ ನಂದಿಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಬಳಿಕ ಸುದ್ದಿಗೋಷ್ಠಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ವಿಷಯ ತಿಳಿಸಿದರು.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಕೇಂದ್ರ ಲೋಕಸೇವಾ ಆಯೋಗದ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಪಡೆಯುವುದಕ್ಕೆ ಅನುಕೂಲವಾಗುವಂತೆ ಬೆಂಗಳೂರಿನಲ್ಲಿ ₹10 ಕೋಟಿ ವೆಚ್ಚದಲ್ಲಿ ಎರಡು ವಸತಿ ನಿಲಯ ನಿರ್ಮಿಸಲಾಗುವುದು ಎಂದೂ ಅವರು ತಿಳಿಸಿದರು.

₹3,400 ಕೋಟಿಗೆ ಅನುಮೋದನೆ: ‘ಆರೋಗ್ಯ, ಶಿಕ್ಷಣ, ಕೃಷಿ, ತೋಟಗಾರಿಕೆ, ಪ್ರವಾಸೋದ್ಯಮ, ನೀರಾವರಿ ಮತ್ತು ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದ ₹3,400 ಕೋಟಿ ವೆಚ್ಚದ ಹಲವು ಯೋಜನೆಗಳಿಗೆ ಅನುಮೋದನೆ ನೀಡಿದ್ದೇವೆ’ ಎಂದರು.

ಗ್ರಾಮಾಂತರ ಬೆಂಗಳೂರು ಉತ್ತರ, ಬಾಗೇಪಲ್ಲಿಗೆ ‘ಭಾಗ್ಯ’ನಗರ

ನಿರೀಕ್ಷೆಯಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಬಾಗೇಪಲ್ಲಿ ತಾಲ್ಲೂಕು ಕೇಂದ್ರದ ಹೆಸರು ಬದಲಾವಣೆಗೆ ಬುಧವಾರ ನಂದಿಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬೆಂಗಳೂರು ಉತ್ತರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ಕೇಂದ್ರದ ಹೆಸರನ್ನು ‘ಭಾಗ್ಯನಗರ’ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಎಂದು ಮರು ನಾಮಕರಣ ಮಾಡಲು ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಎತ್ತಿನಹೊಳೆಗೆ ಹೆಚ್ಚುವರಿ ಹಣ

ಮುಂದಿನ ಎರಡು ವರ್ಷಗಳಲ್ಲಿ ಎತ್ತಿನಹೊಳೆ ಯೋಜನೆಯ ನೀರು ಬಯಲುಸೀಮೆ ಜಿಲ್ಲೆಗಳಿಗೆ ಹರಿಯಲಿದೆ ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

ಎತ್ತಿನಹೊಳೆಯ ಪರಿಷ್ಕೃತ ಯೋಜನಾ ವೆಚ್ಚ ₹23,251 ಕೋಟಿಯಾಗಿದ್ದು ಈಗಾಗಲೇ ₹17,147 ಕೋಟಿ ಖರ್ಚಾಗಿದೆ. ₹6,103 ಕೋಟಿ ಖರ್ಚು ಮಾಡಬೇಕಾಗಿದೆ. ಭೂ ಸ್ವಾಧೀನ ಪ್ರಕ್ರಿಯೆಗೆ ಮತ್ತಷ್ಟು ಹಣ ಅಗತ್ಯವಿದೆ. ಆದ್ದರಿಂದ ಹೆಚ್ಚುವರಿಯಾಗಿ ₹1,900 ಕೋಟಿ ನೀಡಲಾಗುವುದು ಎಂದರು.

ಮೊದಲ ಹಂತದಲ್ಲಿ 14 ಟಿಎಂಸಿ ಅಡಿ ನೀರನ್ನು ಕುಡಿಯುವ ನೀರಿಗಾಗಿ ನೀಡಲಾಗುತ್ತದೆ. ನಂತರ 8ಟಿಎಂಸಿ ಅಡಿ ನೀರನ್ನು ಕೆರೆಗಳಿಗೆ ಹರಿಸಲಾಗುವುದು ಎಂದು ತಿಳಿಸಿದರು.

ವಿಡಿಯೊ ಚಿತ್ರೀಕರಣ ವ್ಯಕ್ತಿ ಬಂಧನ

ಬೆಂಗಳೂರು: ಇನ್ಫೊಸಿಸ್ ಕಂಪನಿಯ ಮಹಿಳಾ ಉದ್ಯೋಗಿಯೊಬ್ಬರು ಶೌಚಾಲಯಕ್ಕೆ ತೆರಳಿದ್ದ ವೇಳೆ ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಿಸಿದ್ದ ಆರೋಪಿಯನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರು ಬುಧವಾರ ಸಂಜೆ ಬಂಧಿಸಿದ್ದಾರೆ.

ಇನ್ನಷ್ಟು ವಿವರ ▶3

ಚಿನಕುರುಳಿ ಪ್ರಕಾಶ್ ಶೆಟ್ಟಿ



ನಾಯಿ ದಾಳಿ: ವೃದ್ಧಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಾಲ್‌ಬಾಗ್‌ನಲ್ಲಿ ವಾಯು ವಿಹಾರ ಮಾಡುತ್ತಿದ್ದ ವೃದ್ಧರೊಬ್ಬರ ಮೇಲೆ ನಾಯಿ ದಾಳಿ ಮಾಡಿದೆ. ಎಡಗೈ ತೋಳಿನ ಭಾಗಕ್ಕೆ ಕಚ್ಚಿದ್ದು, ಗಂಭೀರವಾಗಿ ಗಾಯಗೊಂಡಿದ್ದಾರೆ’ ಎಂದು ಲಾಲ್‌ಬಾಗ್‌ನ ವಾಯು ವಿಹಾರಿಗಳು ತಿಳಿಸಿದ್ದಾರೆ.

‘ನಾಯಿ ದಾಳಿಗೊಳಗಾದವರನ್ನು ಬನಶಂಕರಿ ನಿವಾಸಿ ಹೃಷಿಕೇಶ್ (72) ಎಂದು ಗುರುತಿಸಲಾಗಿದೆ. ಅವರಿಗೆ ತಕ್ಷಣ ಲಾಲ್‌ಬಾಗ್‌ನಲ್ಲಿರುವ ಕ್ಲಿನಿಕ್‌ನಲ್ಲಿ ಅವರಿಗೆ ಪ್ರಥಮ ಚಿಕಿತ್ಸೆ ನೀಡಲಾಯಿತು. ನಾಯಿ ದಾಳಿ ಮಾಡಿದ ಕೂಡಲೇ ಲಾಲ್‌ಬಾಗ್‌ನಲ್ಲಿರುವ ಕ್ಲಿನಿಕ್‌ನಲ್ಲಿ ಅವರಿಗೆ ಪ್ರಥಮ ಚಿಕಿತ್ಸೆ ನೀಡಲಾಯಿತು. 'ಹೆಚ್ಚಿನ ಚಿಕಿತ್ಸೆಗಾಗಿ ಲಾಲ್‌ಬಾಗ್ ಹತ್ತಿರದಲ್ಲಿರುವ ಸೌತ್ ಸಿಟಿ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಪ್ರತ್ಯಕ್ಷದರ್ಶಿ ಶಿವಕುಮಾರ್ ಮಾಹಿತಿ ನೀಡಿದರು.

‘ಲಾಲ್‌ಬಾಗ್ ಉಪನಿರ್ದೇಶಕರ ಕಚೇರಿ ಬಳಿ ಈ ಘಟನೆ ನಡೆದಿದೆ. ಲಾಲ್‌ಬಾಗ್‌ನಲ್ಲಿ ನಾಯಿಗಳ ಸಂಖ್ಯೆ ಹೆಚ್ಚಾಗಿದ್ದು, ನಿತ್ಯ ವಾಯುವಿಹಾರಿಗಳ ಮೇಲೆ ದಾಳಿ ಮಾಡುತ್ತಿವೆ. ಇಲ್ಲಿ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ. ನಾಯಿಗಳನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ತೋಟಗಾರಿಕೆ ಇಲಾಖೆಗೆ ಮನವಿ ಮಾಡಿದರೂ, ಸ್ಪಂದಿಸುತ್ತಿಲ್ಲ’ ಎಂದು ವಾಯು ವಿಹಾರಿಗಳು ದೂರಿದರು.

‘ವೃದ್ಧರೊಬ್ಬರ ಮೇಲೆ ದಾಳಿ ಮಾಡಿದ ನಾಯಿಯನ್ನು ಬಿಬಿಎಂಪಿಯ ಪಶು ಸಂಗೋಪನೆ ವಿಭಾಗದ ಸಿಬ್ಬಂದಿ ಬೇರೆಡೆಗೆ ಸ್ಥಳಾಂತರಿಸಿದ್ದಾರೆ. ಮುಂದೆ ಇಂತಹ ಘಟನೆಗಳು ಆಗದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುವುದು. ನಾಯಿ ಮತ್ತು ಹಾವು ಕಡಿತ, ಜೇನು ನೊಣಗಳ ದಾಳಿಗೆ ಒಳಗಾದವರಿಗೆ ಇಲ್ಲಿನ ಕ್ಲಿನಿಕ್‌ನಲ್ಲಿ ಚಿಕಿತ್ಸೆ ನೀಡುವ ಸೌಲಭ್ಯವಿದೆ’ ಎಂದು ಲಾಲ್‌ಬಾಗ್‌ನ ಉಪನಿರ್ದೇಶಕ ಬಾಲಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.



ನಾಯಿ ದಾಳಿಗೊಳಗಾದ ಹೃಷಿಕೇಶ್

‘ಬೇಡಿಕೆ ಈಡೇರಿಸಿ’

ಪ್ರಜಾವಾಣಿ ಚಿತ್ರ



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬೀದಿಬದಿ ವ್ಯಾಪಾರಿಗಳು ಬುಧವಾರ ಪ್ರತಿಭಟನೆ ನಡೆಸಿದರು

ಹೃದಯಾಘಾತಕ್ಕೆ ಕೋವಿಡ್ ಲಸಿಕೆ ಕಾರಣ ಅಲ್ಲ: ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಯುವಜನರಲ್ಲಿ ಹಠಾತ್ ಹೃದಯಾಘಾತಕ್ಕೆ ಕೋವಿಡ್ ಲಸಿಕೆ ಕಾರಣ ಎಂಬುದನ್ನು ಅಲ್ಲಗಳೆಯಲು ಆಗದು ಎಂದು ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅನುಮಾನ ವ್ಯಕ್ತಪಡಿಸಿದ ಬೆನ್ನಲ್ಲೇ ಸ್ಪಷ್ಟನೆ ನೀಡಿರುವ ಕೇಂದ್ರ ಆರೋಗ್ಯ ಸಚಿವಾಲಯ, ‘ಇಂತಹ ಹೇಳಿಕೆ ಸುಳ್ಳು ಹಾಗೂ ದಾರಿ ತಪ್ಪಿಸುವಂತ ಹುದು. ಇದಕ್ಕೆ ವೈಜ್ಞಾನಿಕ ಪುರಾವೆ ಇಲ್ಲ’ ಎಂದಿದೆ.

‘ಹಠಾತ್ ಹೃದಯಾಘಾತಕ್ಕೂ ಕೋವಿಡ್ ಲಸಿಕೆಗೂ ಸಂಬಂಧ ಇಲ್ಲ ಎಂಬುದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಮತ್ತು ರಾಷ್ಟ್ರೀಯ ರೋಗ ನಿಯಂತ್ರಣ ಕೇಂದ್ರ (ಎನ್‌ಸಿಡಿಸಿ) ನಡೆಸಿರುವ ಅಧ್ಯಯನಗಳಿಂದ ಸಾಬೀತಾಗಿದೆ. ಭಾರತದಲ್ಲಿ ನೀಡಲಾಗುವ ಕೋವಿಡ್ ಲಸಿಕೆಗಳು ಸುರಕ್ಷಿತ ಮತ್ತು ಪರಿಣಾಮಕಾರಿ ಎಂದು ಅಧ್ಯಯನಗಳು ಹೇಳಿವೆ. ಈ ಲಸಿಕೆಗಳು ಅತ್ಯಂತ ಕಡಿಮೆ ಅಡ್ಡಪರಿಣಾಮ ಗಳನ್ನು ಹೊಂದಿವೆ’ ಎಂದು ತಿಳಿಸಿದೆ.

ಕೆಲವರು ಮಾಡುತ್ತಿರುವ ಆಧಾರ ರಹಿತ ಆರೋಪದಿಂದಾಗಿ ಜನರು ಲಸಿಕೆ ಹಾಕಿಸಿಕೊಳ್ಳಲು ಹಿಂಜರಿಯಬಹುದು. ಇದರಿಂದ ಸಾರ್ವಜನಿಕ ಆರೋಗ್ಯ ಪರಿಸ್ಥಿತಿಯ ಮೇಲೆ ಪರಿಣಾಮ ಬೀರುತ್ತದೆ ಎಂದೂ ತಿಳಿಸಿದೆ. ಆನುವಂಶಿಕ ಗುಣ ಲಕ್ಷಣಗಳು, ಜೀವನಶೈಲಿ, ಮೊದಲಿನಿಂದ ಇರುವ ಆರೋಗ್ಯ ತೊಂದರೆಗಳು ಹಾಗೂ ಕೋವಿಡ್ ನಂತರದ ಸಮಸ್ಯೆಗಳು ಸೇರಿದಂತೆ ಹಲವಾರು ಅಂಶಗಳು ಹಠಾತ್ ಹೃದಯಾಘಾತ ಮತ್ತು ಸಾವುಗಳಿಗೆ ಕಾರಣವಾಗಬಹುದು ಎಂದು ಸಚಿವಾಲಯ ಅಭಿಪ್ರಾಯಪಟ್ಟಿದೆ.

▶6

45 ದಿನಗಳಲ್ಲಿ ವರದಿ ಸಲ್ಲಿಕೆಗೆ ಸೂಚನೆ ● ಎರಡು ಸಮ್ಮೇಳನಗಳ ಹಣ ದುರುಪಯೋಗದ ಆರೋಪ

ಅವ್ಯವಹಾರ ದೂರು: ಕಸಾಪ ವಿರುದ್ಧ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ (ಕಸಾಪ) ನಡೆದಿದೆ ಎನ್ನಲಾದ ಹಣಕಾಸಿನ ಅವ್ಯವಹಾರ ಹಾಗೂ ಅಧಿಕಾರ ದುರ್ಬಳಕೆಯ ಆರೋಪಗಳ ಬಗ್ಗೆ ವಿಚಾರಣೆಗೆ ಆದೇಶಿಸಿರುವ ಸಹಕಾರ ಇಲಾಖೆ, ಬೆಂಗಳೂರು ನಗರ ಜಿಲ್ಲೆಯ ಸಹಕಾರ ಸಂಘಗಳ ಉಪ ನಿಬಂಧಕ ಪಿ.ಶಶಿಧರ್ ಅವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿದೆ.

ಕಸಾಪ ಕಾರ್ಯಚಟುವಟಿಕೆಗಳ ಬಗ್ಗೆ ಹಲವು ದೂರುಗಳು ಸಲ್ಲಿಕೆಯಾಗಿವೆ. ಈ ದೂರುಗಳ ಸತ್ಯಾಸತ್ಯತೆ ಅರಿಯಲು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 25ರ ಅಡಿ 17 ಅಂಶಗಳ ಬಗ್ಗೆ ವಿಚಾರಣೆ ನಡೆಸಲು ನಿರ್ಧರಿಸಿ, ಆದೇಶಿಸಲಾಗಿದೆ. ವಿಚಾರಣಾಧಿಕಾರಿಯು 45 ದಿನಗಳೊಳಗೆ ವಿಚಾರಣೆ ನಡೆಸಿ, ವರದಿ ಸಲ್ಲಿಸಬೇಕು ಎಂದು ಸಂಘಗಳ ಜಿಲ್ಲಾ ನೋಂದಣಾಧಿಕಾರಿ ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು ತಿಳಿಸಿದ್ದಾರೆ.

ಪರಿಷತ್ತಿನ ನಿಯಮ–ನಿಬಂಧನೆಯ ಪ್ರಕಾರ ಆಯ್ಕೆಗೊಂಡಿರುವ ಆಡಳಿತ ಮಂಡಳಿಯ ಪದಾಧಿಕಾರಿಗಳಿಗೆ ಮತ್ತು ಜಿಲ್ಲಾ ಪದಾಧಿಕಾರಿಗಳಿಗೆ ನಿಯಮ ಬಾಹಿರವಾಗಿ ಕಸಾಪ ಅಧ್ಯಕ್ಷರು ನೋಟಿಸ್ ಜಾರಿ ಮಾಡುತ್ತಿರುವ ಬಗ್ಗೆ ಪರಿಶೀಲಿಸಬೇಕು. 2022–23ನೇ ಸಾಲಿನಿಂದ ಈವರೆಗೆ ವಾಹನಗಳ ಖರೀದಿ ಮತ್ತು ಮಾರಾಟ ಮಾಡುವಲ್ಲಿ ಆಗಿರುವ ಹಣಕಾಸಿನ ದುರುಪಯೋಗದ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಹಾವೇರಿ ಮತ್ತು ಮಂಡ್ಯ ಜಿಲ್ಲೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲೆಕ್ಕಪತ್ರಗಳನ್ನು ಸಲ್ಲಿಸದೆ, ಹಣ ದುರುಪಯೋಗ ಮಾಡಿರುವ ಬಗ್ಗೆ ಪರಿಶೀಲಿಸಬೇಕು. ಪರಿಷತ್ತಿನ ಕಟ್ಟಡದ ನಿರ್ಮಾಣ ಮತ್ತು ನವೀಕರಣದಲ್ಲಿನ ಹಣ ದುರುಪಯೋಗದ ಬಗ್ಗೆ ವಿಚಾರಣೆ ನಡೆಸಬೇಕು ಎಂದು ತಿಳಿಸಲಾಗಿದೆ.

‘ಪರಿಷತ್ತಿನವರು ನಿಯಮ ಬಾಹಿರವಾಗಿ ವಿದೇಶ ಪ್ರವಾಸ ಕೈಗೊಂಡು, ಹಣ ದುರುಪಯೋಗ ಮತ್ತು ನಷ್ಟ ಮಾಡಿರುವ ಬಗ್ಗೆಯೂ ಪರಿಶೀಲಿಸಬೇಕು’ ಎಂದು ಸೂಚಿಸಲಾಗಿದೆ.



ಕೆಲವೇ ಕೆಲವು ವ್ಯಕ್ತಿಗಳು ಹಿಂದಿನಿಂದಲೂ ಆರೋಪ ಮಾಡುತ್ತಾ ಬಂದಿದ್ದಾರೆ. ಈ ಆರೋಪಗಳು ಸುಳ್ಳು ಹಾಗೂ ದುರುದ್ದೇಶದಿಂದ ಕೂಡಿವೆ. ಈಗಾಗಲೇ ಮಾಡಲಾದ ಆರೋಪಗಳು ಹಾಗೂ ಸಹಕಾರ ಸಂಘದವರು ಈ ಹಿಂದೆ ಬರೆದ ಪತ್ರಗಳ ಬಗ್ಗೆ ಬಳ್ಳಾರಿಯಲ್ಲಿ ನಡೆದ ಕಾರ್ಯಕಾರಿ ಸಮಿತಿಯಲ್ಲಿ ದೀರ್ಘವಾಗಿ ಚರ್ಚಿಸಿ, ದಾಖಲೆ ಸಹಿತ ಕಾನೂನಾತ್ಮಕ ಉತ್ತರ ಕೊಡಲು ಸರ್ವಾನುಮತದಿಂದ ನಿರ್ಧರಿಸಲಾಗಿದೆ.

ಮಹೇಶ ಜೋಶಿ
ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

ಕುಟುಂಬದ ಕಾರ್ಯಕ್ರಮಕ್ಕೆ ಹಣ ಬಳಕೆ?

ಕಸಾಪದ ಚಟುವಟಿಕೆ, ಹಣ ಬಳಕೆ ಹಾಗೂ ಅಧಿಕಾರ ದುರುಪಯೋಗದ ಬಗೆಗಿನ ಆರೋಪಗಳನ್ನು ಆದೇಶದಲ್ಲಿ ಉಲ್ಲೇಖಿಸಲಾಗಿದ್ದು, ಆ ಬಗ್ಗೆ ವಿಚಾರಣೆ ನಡೆಸುವಂತೆ ವಿಚಾರಣಾಧಿಕಾರಿಗೆ ಸೂಚಿಸಲಾಗಿದೆ.

ಯಾವ ಆರೋಪಗಳ ಪರಿಶೀಲನೆ

- ಪರಿಷತ್ತಿನ ಹಣವನ್ನು ಕಸಾಪ ಅಧ್ಯಕ್ಷರ ಕುಟುಂಬದ ಸದಸ್ಯರ ಕಾರ್ಯಕ್ರಮಗಳಿಗೆ ನಿಯಮ ಬಾಹಿರವಾಗಿ ಬಳಕೆ ಮಾಡಿಕೊಂಡಿರುವುದು
- 2022-23ರಿಂದ ಈವರೆಗೆ ಅನುಮೋದಿಸಿರುವ ತಿದ್ದುಪಡಿಗಳು
- ಸರ್ಕಾರ ಮತ್ತು ಇತರೆ ಮೂಲಗಳಿಂದ ಪರಿಷತ್ತಿನಲ್ಲಿ ಸಂಗ್ರಹವಾಗಿರುವ ಅನುದಾನವನ್ನು ಪಾರದರ್ಶಕವಾಗಿ ನಿರ್ವಹಿಸದೆ, ಹಣ ದುರುಪಯೋಗ ಮಾಡಿರುವುದು
- ವಿವಿಧ ಕಾರ್ಯಕ್ರಮಗಳಿಗಾಗಿ ಜಿಲ್ಲಾ ಘಟಕ, ತಾಲ್ಲೂಕು ಘಟಕ ಮತ್ತು ಇತರೆ ಸಂಘ–ಸಂಸ್ಥೆಗಳಿಗೆ ನೀಡಿರುವ ಅನುದಾನವನ್ನು ಪಾರದರ್ಶಕವಾಗಿ ನಿರ್ವಹಿಸದೆ, ಹಣ ದುರುಪಯೋಗ ಮಾಡಿರುವುದು
- ಕಂಪ್ಯೂಟರ್ ಖರೀದಿ, ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಕೆ, ಅಗ್ನಿಶಾಮಕ ಉಪಕರಣದ ಅಳವಡಿಕೆ, ಪುಸ್ತಕಗಳ ಮುದ್ರಣಗಳಿಗೆ ಸಂಬಂಧಿಸಿದಂತೆ ಹಣ ದುರ್ಬಳಕೆ
- ಕರ್ನಾಟಕ ರಾಜ್ಯ ಲೆಕ್ಕಪರಿಶೋಧನಾ ಇಲಾಖೆಯು ಲೆಕ್ಕ ಪರಿಶೋಧನೆ ವರದಿಯಲ್ಲಿ ಆಕ್ಷೇಪಿಸಿರುವ ಅಂಶಗಳಿಗೆ ಅನುಪಾಲನಾ ವರದಿ ಸಲ್ಲಿಸದೆ ಇರುವುದು
- ಪರಿಷತ್ತಿನ ಆಡಳಿತ ಮಂಡಳಿಯ ನಿರ್ಣಯಗಳನ್ನು ಸಂಘದ ನಿಯಮ-ನಿಬಂಧನೆಗೆ ವಿರುದ್ಧವಾಗಿ, ತಮ್ಮ ಇಚ್ಛಾನುಸಾರ ದಾಖಲಿಸಿರುವುದು
- ಸಂಘದ ಗುರುತಿನ ಚೀಟಿ (ಸ್ಮಾರ್ಟ್ ಕಾರ್ಡ್) ನೀಡುವಲ್ಲಿ ಆಗಿರುವ ಹಣ ದುರುಪಯೋಗ ಆಗಿರುವುದು
- ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಯಲ್ಲಿ ದೋಷಗಳ ಪತ್ತೆ ಮಾಡುವುದು
- ಪರಿಷತ್ತಿನಲ್ಲಿ ಸಂಗ್ರಹವಾಗಿರುವ ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ದುರುಪಯೋಗ ಆಗಿರುವುದು
- ವಾರ್ಷಿಕ ಸರ್ವಸದಸ್ಯರ ಸಭೆಗಳ ಕುರಿತು ಪರಿಶೀಲಿಸುವುದು
- ಪ್ರತಿ ವರ್ಷ ವಾರ್ಷಿಕ ಸರ್ವಸದಸ್ಯರ ಸಭೆಯ ನಂತರ ದಾಖಲಾತಿಗಳನ್ನು ಪ್ರಾಧಿಕಾರಕ್ಕೆ ಸಲ್ಲಿಸಿ, ಸ್ವೀಕೃತಿ ಪಡೆದಿರುವ ಬಗ್ಗೆ ತಪಾಸಣೆ ಮಾಡುವುದು

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ, ಅಲ್ಲಲ್ಲಿ ಮಳೆ ಸಾಧ್ಯತೆ

‘ಸ್ತ್ರೀಯರಿಗೆ ಬೈಕ್ ಟ್ಯಾಕ್ಸಿ ಸುರಕ್ಷಿತ’

ಕೈಗೆಟುಕುವ ಪ್ರಯಾಣ ಸಾಧನ • ರಿಟ್ ಮೇಲ್ಮನವಿದಾರರ ಪ್ರತಿಪಾದನೆ



ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೈಕ್ ಟ್ಯಾಕ್ಸಿ ಸೇವೆಯು ಅತ್ಯಂತ ಸುರಕ್ಷತೆಯಿಂದ ಕೂಡಿದ್ದು, ಅನುಕೂಲಕರ ಮತ್ತು ಕೈಗೆಟುಕುವ ಪ್ರಯಾಣ ಸಾಧನವಾಗಿದೆ’ ಎಂದು ಮಹಿಳಾ ಪ್ರಯಾಣಿಕರು ಹಾಗೂ ಚಾಲಕಿಯರ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

‘ಬೈಕ್ ಟ್ಯಾಕ್ಸಿ ಸೇವೆಯನ್ನು ರಾಜ್ಯದಲ್ಲಿ ಮುಂದುವರಿಸಲು ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ, ಉಬರ್ ಇಂಡಿಯಾ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್’, ‘ರೋಪ್ಪೆನ್ ಟ್ರಾನ್ಸ್‌ಪೋರ್ಟೇಶನ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ (ರ್‍ಯಾಪಿಡೊ)’ ಮತ್ತು ‘ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ (ಓಲಾ)’ ಕಂಪನಿಗಳು ಸಲ್ಲಿಸಿರುವ ರಿಟ್ ಮೇಲ್ಮನವಿಗಳನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಮಹಿಳಾ ಪ್ರಯಾಣಿಕರು ಮತ್ತು ಚಾಲಕಿಯರ ಪರ ಸಲ್ಲಿಸಲಾದ ಮಧ್ಯಂತರ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲೆ ಜಯನಾ ಕೊಠಾರಿ ವಾದ ಮಂಡಿಸಿ, ‘ಮಹಿಳೆಯರಿಗೆ ಈ ಸೇವೆಯ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

‘ಸರ್ಕಾರ ಅಸುರಕ್ಷತೆಯ ನೆಪವೊಡ್ಡಿ ಬೈಕ್ ಟ್ಯಾಕ್ಸಿ ಸೇವೆ ನಿರ್ಬಂಧಿಸಿದೆ. ಆದರೆ, ಪ್ರತಿನಿತ್ಯ ಪ್ರಯಾಣಿಸುವವರಿಗೆ ಬೈಕ್ ಟ್ಯಾಕ್ಸಿ ಸೇವೆ ಅತ್ಯಂತ ಸುರಕ್ಷತೆಯಿಂದ ಕೂಡಿದ್ದು, ಅನುಕೂಲಕರ ಮತ್ತು ಕೈಗೆಟುಕುವ ಪ್ರಯಾಣ ಸಾಧನವಾಗಿದೆ’ ಎಂದರು.

‘ಬೇರೆ ರಾಜ್ಯಗಳಲ್ಲಿ ಬೈಕರ್‌ಗಳಿಗೆ ಅರ್ಹತಾ ಪೂರ್ವ ಪರೀಕ್ಷೆ ನಿಗದಿಪಡಿಸಿ ಅವರ ಹಿನ್ನೆಲೆ ಪರಿಶೀಲಿಸಲಾಗುತ್ತದೆ. ಪಶ್ಚಿಮ ಬಂಗಾಳದಲ್ಲಿ ರಾತ್ರಿ ವೇಳೆ ಸೀಮಿತ ಬೈಕ್ ಟ್ಯಾಕ್ಸಿ ಸೇವೆ ನೀಡಲಾಗುತ್ತಿದೆ. ಹಲವು ರಾಜ್ಯಗಳಲ್ಲಿ ಬೈಕ್ ಟ್ಯಾಕ್ಸಿ ಸೇವೆ ಒದಗಿಸಬೇಕು ಎಂಬ ಮಹಿಳೆಯರ ಮನವಿಗೆ ಆದ್ಯತೆ ನೀಡಲಾಗುತ್ತಿದೆ. ಎಲ್ಲಾ ಅಗ್ರಿಗೇಟರ್ ನಿಯಮ ಮತ್ತು ಮಾರ್ಗಸೂಚಿಗಳನ್ನು ಗಮನಿಸಿದಾಗ ಇದೊಂದು ಸುರಕ್ಷತಾ ಸಾರಿಗೆಯ ವಿಧಾನವಾಗಿದೆ’ ಎಂದು ವಿವರಿಸಿದರು.

‘ಸ್ವತಂತ್ರ ಸಂಸ್ಥೆಗಳು ನಡೆಸಿರುವ ರಾಷ್ಟ್ರೀಯ ಮಟ್ಟದ ವರದಿಗಳಲ್ಲಿ ಬೈಕ್ ಟ್ಯಾಕ್ಸಿ ಸೇವೆಗೆ ಶಿಫಾರಸು ಮಾಡಲಾಗಿದೆ. ಕೈಗೆಟುಕುವ ದರ ಹೊಂದಿರುವುದೂ ಇದರ ವಿಶೇಷ’ ಎಂದರು.

ಅಡ್ಡಗಾಲು: ರ್‍ಯಾಪಿಡೊ ಮಾತೃ ಸಂಸ್ಥೆ ಪರ ವಾದ ಮಂಡಿಸಿದ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರು, ‘ಬೈಕ್ ಸೇವೆ ನಿರ್ಬಂಧಿಸಲು ಮಹಿಳೆಯರ ಸುರಕ್ಷತೆಯ ಅಂಶವನ್ನು ಮುಂದು ಮಾಡಲಾಗುತ್ತಿದೆ. ಇದಕ್ಕೆ ಇಂಬು ನೀಡುವಂತೆ ಆಟೊ ರಿಕ್ಷಾ ಚಾಲಕರ ಒಕ್ಕೂಟ ಅಡ್ಡಗಾಲು ಹಾಕುತ್ತಿದೆ. ಬೈಕ್ ಟ್ಯಾಕ್ಸಿ ಸೇವೆ ನಿರ್ಬಂಧಿಸಿರುವ ಕಾರಣ ಬೆಂಗಳೂರು ಮಹಾನಗರದಲ್ಲಿ ಶೇ 18ರಷ್ಟು ಸಂಚಾರ ದಟ್ಟಣೆ ಹೆಚ್ಚಾಗಿದೆ’ ಎಂದು ಆರೋಪಿಸಿದರು.

‘ಈ ಹಿಂದೆ ತಮಿಳುನಾಡು ರಾಜ್ಯವೂ ಬೈಕ್ ಟ್ಯಾಕ್ಸಿ ನಿಷೇಧ ಮಾಡಿತ್ತು. ಈಗ ಅನುಮತಿ ನೀಡಿದೆ. ಅಂತೆಯೇ, ಕೇರಳ ಕೂಡಾ ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿದೆ’ ಎಂಬ ಅಂಶಗಳನ್ನು ನ್ಯಾಯಪೀಠದ ಗಮನಕ್ಕೆ ತಂದರು.

‘ಬೆಳೆಯುತ್ತಿರುವ ಬೆಂಗಳೂರು ಮಹಾನಗರದ ಅಂಚಿನವರೆಗೆ ಸಂಪರ್ಕ ಕಲ್ಪಿಸುವ ಯಾವುದೇ ಸಾರಿಗೆ ಸೇವೆಗಳು ವಿರಳವಾಗಿವೆ. ಜಪಾನ್‌ನಂತಹ ದೇಶಗಳಲ್ಲಿ ಹಲವು ಮೆಟ್ರೊ ಮಾರ್ಗಗಳಿವೆ. ಆದರೆ, ಬೆಂಗಳೂರು ಮಹಾನಗರದ ಪರಿಸ್ಥಿತಿ ಬೇರೆಯದೇ ಆಗಿದ್ದು, ಹಲವು ಮೆಟ್ರೊ ಮಾರ್ಗ ರೂಪಿಸಿದರೂ ಸಂಪರ್ಕ ಅಸಾಧ್ಯ ಎನ್ನುವಂತಿದೆ’ ಎಂದು ವಿವರಿಸಿದರು.

ರ್‍ಯಾಪಿಡೊ ಕಂಪನಿ ಪರ ಹೈಕೋರ್ಟ್ ವಕೀಲ ಎ.ವಿ.ನಿಶಾಂತ್ ವಕಾಲತ್ತು ವಹಿಸಿದ್ದಾರೆ. ಓಲಾ, ಉಬರ್ ಮತ್ತು ರಾಜ್ಯ ಸರ್ಕಾರದ ಪರ ವಾದ ಆಲಿಸಬೇಕಿರುವ ನ್ಯಾಯಪೀಠ ವಿಚಾರಣೆಯನ್ನು ಇದೇ 4ಕ್ಕೆ ಮುಂದೂಡಿದೆ.

‘ಮೋಟಾರು ವಾಹನ ಕಾಯ್ದೆ–1988ರ ಕಲಂ 93ರ ಅನುಸಾರ ರಾಜ್ಯ ಸರ್ಕಾರ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರೂಪಿಸುವ ತನಕ ಸಂಬಂಧಿತ ಸಂಸ್ಥೆಗಳಾದ ಓಲಾ, ಉಬರ್ ಮತ್ತು ರ್‍ಯಾಪಿಡೊಗಳು ತಮ್ಮ ಬೈಕ್ ಟ್ಯಾಕ್ಸಿ ಸೇವೆಯನ್ನು ಸ್ಥಗಿತಗೊಳಿಸಬೇಕು’ ಎಂದು ಏಕಸದಸ್ಯ ನ್ಯಾಯಪೀಠ ಆದೇಶಿಸಿತ್ತು.

ನಟ ಕಮಲ್ ವಿರುದ್ಧ ಕನಕಪುರದಲ್ಲಿ ದೂರು

ಕನಕಪುರ: ಕನ್ನಡ ಹುಟ್ಟಿದ್ದು ತಮಿಳು ಭಾಷೆಯಿಂದ ಎಂದು ಹೇಳಿರುವ ನಟ ಕಮಲ್ ಹಾಸನ್ ವಿರುದ್ಧ ಕನಕಪುರದ 2ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್ ಕೋರ್ಟ್‌ನಲ್ಲಿ ಶ್ರೀರಾಮ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ನಾಗಾರ್ಜುನಗೌಡ ಸೋಮವಾರ ಖಾಸಗಿ ಕ್ರಿಮಿನಲ್ ದೂರು(ಪಿಸಿಆರ್) ದಾಖಲಿಸಿದ್ದಾರೆ. ಜುಲೈ 5ರಂದು ಕೋರ್ಟ್ ವಿಚಾರಣೆ ಕೈಗೆತ್ತಿಕೊಳ್ಳಲಿದೆ.

ನಾಟಕ ಕಂಪನಿಗಳಿಗೆ ಧನ ಸಹಾಯ: ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 2025-26ನೇ ಸಾಲಿಗೆ ವೃತ್ತಿ ರಂಗಭೂಮಿ ಕಾಯಕಲ್ಪ ಯೋಜನೆಯಡಿ ಧನ ಸಹಾಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ನೋಂದಾಯಿತ ವೃತ್ತಿ ನಾಟಕ ಕಂಪನಿಗಳು ಅರ್ಜಿ ಸಲ್ಲಿಸಬಹುದಾಗಿದೆ. ನಿಗದಿತ ಅರ್ಜಿ ನಮೂನೆ ಹಾಗೂ ಮಾರ್ಗಸೂಚಿಯನ್ನು www.kannadasiri.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು, ಭರ್ತಿ ಮಾಡಿ ಅಗತ್ಯ ದಾಖಲೆಗಳನ್ನು ಲಗತ್ತಿಸಿ, ಜುಲೈ 15 ರಿಂದ ಆಗಸ್ಟ್ 15 ರೊಳಗೆ ಸಲ್ಲಿಸಬೇಕು. ವಿಳಾಸ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು.

ಚಿಟಿಕೆ ಸುದ್ದಿ

36 ಆಟೊಗಳ ಮುಟ್ಟುಗೋಲು

ಬೆಂಗಳೂರು: ಪ್ರಯಾಣ ದರ ಅಧಿಕ ವಸೂಲಿ ಮಾಡುತ್ತಿದ್ದ 36 ಆಟೊಗಳನ್ನು ಬುಧವಾರ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಬೆಂಗಳೂರು ಕೇಂದ್ರ, ಬೆಂಗಳೂರು ಪಶ್ಚಿಮ, ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಜ್ಞಾನಭಾರತಿ, ದೇವನಹಳ್ಳಿ, ಯಲಹಂಕ, ಎಲೆಕ್ಟ್ರಾನಿಕ್ ಸಿಟಿ, ಕೆ.ಆರ್. ಪುರ, ಚಂದಾಪುರ ಪ್ರಾದೇಶಿಕ ಸಾರಿಗೆ ಕಚೇರಿಯ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ 163 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ಸೌಹಾರ್ದ ನಡಿಗೆ ಸಮಾರೋಪ ನಾಳೆ

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ಕೋಮುವಾದಕ್ಕೆ ಕಡಿವಾಣ ಹಾಕಲು. ಎಸ್ಸೆಸ್ಸೆಫ್ ಕರ್ನಾಟಕವು 'ಮನಸ್ಸು ಮನಸ್ಸುಗಳನ್ನು ಪೋಣಿಸುವ' ಘೋಷವಾಕ್ಯದೊಂದಿಗೆ ಹಮ್ಮಿಕೊಂಡಿರುವ 'ಸೌಹಾರ್ದ ನಡಿಗೆ'ಯ ಸಮಾರೋಪ ಕಾರ್ಯಕ್ರಮ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಜುಲೈ 4ರಂದು ನಡೆಯಲಿದೆ.

ರಾಜ್ಯದ 20 ಪಟ್ಟಣಗಳಲ್ಲಿ ಸೌಹಾರ್ದ ನಡಿಗೆ ನಡೆದಿತ್ತು. ಸಮಾರೋಪದಲ್ಲಿ ವಿಧಾನ ಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್, ಬೇಲಿ ಮಠದ ಶಿವರುದ್ರ ಸ್ವಾಮೀಜಿ, ಧಮ್ಮವೀರ ಭಂತೆ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ

ಬೆಂಗಳೂರು: ನಗರದ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಜುಲೈ 5ರಿಂದ 12ರವರೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆ–3 ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷೆಯನ್ನು ಸುಸೂತ್ರ ಹಾಗೂ ದೋಷರಹಿತವಾಗಿ ನಡೆಸುವ ಉದ್ದೇಶದಿಂದ ಪರೀಕ್ಷೆ ನಡೆಯುವ ಸಮಯದಲ್ಲಿ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿಯನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಈ ವ್ಯಾಪ್ತಿಯ ಜೆರಾಕ್ಸ್, ಸೈಬರ್ ಹಾಗೂ ಕಂಪ್ಯೂಟರ್ ಸೆಂಟರ್‌ಗಳನ್ನು ಮುಚ್ಚುವಂತೆ ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ ಅವರು ಆದೇಶಿಸಿದ್ದಾರೆ.

ವಿಡಿಯೊ ಚಿತ್ರೀಕರಣ: ವ್ಯಕ್ತಿ ಬಂಧನ

ಶೌಚಾಲಯದಲ್ಲಿ ಚಿತ್ರೀಕರಣ ಆರೋಪ ಇನ್ಫೊಸಿಸ್ ಮಹಿಳಾ ಉದ್ಯೋಗಿ ದೂರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಶೌಚಾಲಯದ ಕಮೋಡ್ ಮೇಲೆ ನಿಂತು ವಿಡಿಯೊ ಚಿತ್ರೀಕರಣ
- ಆರೋಪಿ ಮೊಬೈಲ್‌ನಲ್ಲಿ 30 ವಿಡಿಯೊಗಳು ಪತ್ತೆ
- ಆರೋಪಿಯನ್ನು ತೀವ್ರ ವಿಚಾರಣೆಗೆ ಒಳಪಡಿಸಿದ ಪೊಲೀಸರು

ಬೆಂಗಳೂರು: ಇನ್ಫೊಸಿಸ್ ಕಂಪನಿಯ ಮಹಿಳಾ ಉದ್ಯೋಗಿಯೊಬ್ಬರು ಶೌಚಾಲಯಕ್ಕೆ ತೆರಳಿದ್ದ ವೇಳೆ ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಿಸಿದ್ದ ಆರೋಪಿಯನ್ನು ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರು ಬುಧವಾರ ಸಂಜೆ ಬಂಧಿಸಿದ್ದಾರೆ.

ಮಹಾರಾಷ್ಟ್ರದ ಸಾಂಗ್ಲಿಯ ಸ್ವಪ್ನಿಲ್ ನಾಗೇಶ್ ಮಾಲಿ ಬಂಧಿತ ಆರೋಪಿ.

ಇನ್ಫೊಸಿಸ್ ಕಂಪನಿಯಲ್ಲಿ ಟೆಕ್ನಿಕಲ್ ಟೆಸ್ಟ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ 35 ವರ್ಷದ ಮಹಿಳೆ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ದೂರುದಾರೆ ಮಹಿಳೆಗೆ ಮನೆಯಿಂದಲೇ ಕೆಲಸ ಮಾಡುವ ಅವಕಾಶ ಇತ್ತು. ತಿಂಗಳಲ್ಲಿ ಹತ್ತು ದಿನ ಕಚೇರಿಗೆ ಬಂದು ಕೆಲಸ ಮಾಡುವಂತೆ ಕಂಪನಿಯ ಸೂಚನೆ ಇತ್ತು. ಜೂನ್ 30ರಂದು ಮಹಿಳೆ ಇನ್ಫೊಸಿಸ್ ಕಂಪನಿಗೆ ತೆರಳಿದ್ದರು. ಅಂದು ಬೆಳಿಗ್ಗೆ 10 ಗಂಟೆಯ ಮೂರನೇ ಮಹಡಿಯಲ್ಲಿರುವ ಶೌಚಾಲಯಕ್ಕೆ ತೆರಳಿದ್ದರು. ಆಗ ಎದುರುಗಡೆ ಇರುವ ಶೌಚಾಲಯದ ಬಾಗಿಲು ಬಳಿ ಬೆಳಕು ಕಾಣಿಸಿತ್ತು. ಸ್ವಲ್ಪ ಮುಂದಕ್ಕೆ ತೆರಳಿ ಪರಿಶೀಲಿಸಿದಾಗ ಪಕ್ಕದ ಕಮೋಡ್ ಮೇಲೆ ಆರೋಪಿ ನಿಂತುಕೊಂಡು ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಿಸುತ್ತಿರುವುದು ಕಂಡುಬಂದಿತ್ತು.

ಅಪರಾಧ ಸುದ್ದಿ

ಕಂಪನಿಯ ಇತರೆ ಉದ್ಯೋಗಿಗಳಿಗೆ ಈ ವಿಷಯ ತಿಳಿಸಿದಾಗ ಅವರು, ಆರೋಪಿಯನ್ನು ಹಿಡಿದುಕೊಂಡು ಮೊಬೈಲ್ ಕಸಿದುಕೊಂಡರು. ಆಗ ಆರೋಪಿ ಕ್ಷಮಿಸಿ, ಇನ್ಮುಂದೆ ಈ ರೀತಿಯ ಕೃತ್ಯ ಎಸಗುವುದಿಲ್ಲ ಎಂದು ಕೇಳಿಕೊಂಡಿದ್ದ. ಆ ವೇಳೆಗೆ ಕಂಪನಿಯ ಎಚ್‌ಆರ್ ಸಹ ಸ್ಥಳಕ್ಕೆ ಬಂದು ಮೊಬೈಲ್ ಪರಿಶೀಲಿಸಿದಾಗ ದೂರುದಾರೆ ಶೌಚಾಲಯದಲ್ಲಿದ್ದ ವಿಡಿಯೊ ಇತ್ತು. ಅದರ ಸ್ಕ್ರೀನ್‌ಶಾಟ್ ತೆಗೆದುಕೊಂಡು ವಿಡಿಯೊವನ್ನು ಎಚ್‌ಆರ್ ಡಿಲೀಟ್ ಮಾಡಿದ್ದರು' ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಘಟನೆ ನಡೆದ ಬಳಿಕ ಮಹಿಳೆ ಮನೆಗೆ ತೆರಳಿ ಪತಿಗೆ ವಿಷಯ ತಿಳಿಸಿದ್ದರು. ಪ್ರಕರಣವನ್ನು ಮುಕ್ತಾಯಗೊಳಿಸಿ-



ಸ್ವಪ್ನಿಲ್ ಮಾಲಿ

ದರೆ ಆರೋಪಿ, ಬೇರೆ ಮಹಿಳೆಯರ ವಿಡಿಯೊ ತೆಗೆದು ಲೈಂಗಿಕ ಕಿರುಕುಳ ನೀಡುವ ಸಾಧ್ಯತೆ ಇರುತ್ತದೆ. ಆ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಜರುಗಿಸಲು ಠಾಣೆಯಲ್ಲಿ ದೂರು ದಾಖಲಿಸುವಂತೆ ಪತ್ನಿಗೆ ತಿಳಿಸಿದ್ದರು. ಅದಾದ ಮೇಲೆ ದೂರು ನೀಡಲಾಗಿತ್ತು' ಎಂಬ ಅಂಶ ಎಫ್‌ಐಆರ್‌ನಲ್ಲಿದೆ.

'ಆರೋಪಿಯು ಹೀಲಿಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸೀನಿಯರ್ ಅಸೋಸಿಯೇಟ್ ಕನ್ಸಲ್ಟೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂಬುದು ಗೊತ್ತಾಗಿದೆ. ಆರೋಪಿ ಮೊಬೈಲ್ ಜಪ್ತಿ ಮಾಡಿಕೊಂಡು ಪರಿಶೀಲಿಸಿದಾಗ 30 ವಿಡಿಯೊಗಳು ಪತ್ತೆಯಾಗಿವೆ. ಗುರುವಾರ ಬೆಳಿಗ್ಗೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಎಫ್‌ಎಸ್‌ಎಲ್‌ಗೆ ರವಾನೆ: ಆರೋಪಿಯಿಂದ ಜಪ್ತಿ ಮಾಡಿರುವ ಮೊಬೈಲ್ ಅನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸಲಾಗುವುದು. ತಜ್ಞರು ಮೊಬೈಲ್ ಪರಿಶೀಲಿಸಿ, ಆರೋಪಿ ಎಷ್ಟು ದಿನದಿಂದ ಈ ರೀತಿ ಕೃತ್ಯ ಎಸಗುತ್ತಿದ್ದ, ಎಷ್ಟು ವಿಡಿಯೊಗಳನ್ನು ಚಿತ್ರೀಕರಿಸಿದ್ದ ಎಂಬುದರ ಬಗ್ಗೆ ವರದಿ ನೀಡಲಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಆರೋಪಿಯನ್ನು ಕೆಲಸದಿಂದ ವಜಾಗೊಳಿಸಲಾಗಿದೆ. ಸಂತ್ರಸ್ತೆಯ ಕಾನೂನು ಹೋರಾಟಕ್ಕೆ ಸಹಕಾರ ನೀಡಲಾಗುವುದು' ಎಂದು ಇನ್ಫೊಸಿಸ್ ತಿಳಿಸಿದೆ.

ಕಿರುಕುಳ: ಪತಿ, ಮಾವ, ಅತ್ತೆ ವಿರುದ್ಧ ಎಫ್‌ಐಆರ್

ಬೆಂಗಳೂರು: ಪತಿ ಮತ್ತು ಆತನ ಕುಟುಂಬದ ಸದಸ್ಯರು ಕಿರುಕುಳ ನೀಡುವುದರ ಜತೆಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ಮಹಿಳೆಯೊಬ್ಬರು ದೂರು ನೀಡಿದ್ದು, ಮೂವರ ವಿರುದ್ಧ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೇಗೂರು ನಿವಾಸಿ 21 ವರ್ಷದ ಮಹಿಳೆ ನೀಡಿದ ದೂರಿನ ಮೇರೆಗೆ ಪತಿ ಯೂನಿಷ್ ಪಾಷಾ, ಮಾವ ಚಾಂದ್ ಪಾಷಾ ಮತ್ತು ಅತ್ತೆ ಷಹೀನ್ ತಾಜ್ ವಿರುದ್ಧ ಬನಶಂಕರಿ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

'ಆರೋಪಿ ಯೂನಿಷ್ ಪಾಷಾ 2021ರಲ್ಲಿ ದೂರುದಾರೆಯನ್ನು ಮದುವೆ ಆಗಿದ್ದರು. ನಾಲ್ಕು ತಿಂಗಳ ನಂತರ ಯೂನಿಷ್ ಪಾಷಾ, ಚಾಂದ್ ಪಾಷಾ ಮತ್ತು ಷಹೀನ್ ತಾಜ್, ಮಹಿಳೆಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಲು ಆರಂಭಿಸಿದ್ದರು. ಮಹಿಳೆ ಗರ್ಭಿಣಿಯಾಗಿದ್ದ ವೇಳೆ ಪತಿ, ಆಕೆಯ ಹೊಟ್ಟೆಯ ಮೇಲೆ ಒದ್ದು ಹಲ್ಲೆ ಮಾಡಿದ ಪರಿಣಾಮ ಆಕೆಗೆ ಗರ್ಭಪಾತ ಆಗಿತ್ತು. ಪ್ರಶ್ನಿಸಿದ್ದಾಗ ಆಯುಧ ತೋರಿಸಿ ಬೆದರಿಕೆ ಹಾಕಿದ್ದ. ಅಲ್ಲದೇ ಮಹಿಳೆಯ ಕುಟುಂಬದವರನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'2023ರಲ್ಲಿ ಆರೋಪಿ ಮಹಿಳೆ ಮೇಲೆ ಮತ್ತೆ ಹಲ್ಲೆ ಮಾಡಿದ್ದ. ಪತಿಯ ಮನೆ ಬಿಟ್ಟು ಮಹಿಳೆ ತವರು ಮನೆ ಸೇರಿದ್ದರು. ಜೂನ್ 4ರಂದು ಮಹಿಳೆ ಬಟ್ಟೆಗಳನ್ನು ತೆಗೆದುಕೊಳ್ಳಲು ಆರೋಪಿಯ ಮನೆಗೆ ಹೋದಾಗ ಚಾಕು ತೋರಿಸಿ, ನಿನ್ನ ತಾಯಿಯನ್ನು ಕೊಲ್ಲುವುದಾಗಿ ಬೆದರಿಕೆ ಹಾಕಿದ್ದ' ಎಂದು ಮಹಿಳೆ ನೀಡಿರುವ ದೂರಿನಲ್ಲಿ ವಿವರಿಸಲಾಗಿದೆ.

ಡಿ.ಜಿಗೆ ಪತ್ರ: ಈ ಸಂಬಂಧ ಡಿ.ಜಿ ಮತ್ತು ಐಜಿಪಿ, ನಗರ ಪೊಲೀಸ್ ಕಮಿಷನರ್, ಮಹಿಳಾ ಆಯೋಗ ಮತ್ತು ಮಾನವ ಹಕ್ಕುಗಳ ಆಯೋಗಕ್ಕೆ ಮಹಿಳೆ ದೂರು ನೀಡಿದ್ದಾರೆ.

₹2 ಕೋಟಿ ಸುಲಿಗೆ: ಐವರ ವಶ

ಬೆಂಗಳೂರು: ನಗದು ಹಣವನ್ನು ಡಾಲರ್‌ಗೆ ಪರಿವರ್ತಿಸಿಕೊಡುವುದಾಗಿ ನಂಬಿಸಿ ಉದ್ಯಮಿಯನ್ನು ಕರೆಸಿಕೊಂಡು ಮಾರಕಾಸ್ತ್ರ ತೋರಿಸಿ ಹಣ ಸುಲಿಗೆ ಮಾಡಿದ್ದ ನಾಲ್ವರನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಬೆಂಜಮಿನ್ ಹರ್ಷ, ರಕ್ಷಿತ್, ಪ್ರಕಾಶ್ ಹಾಗೂ ಭರತ್ ಅವರನ್ನು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಲಾಗುತ್ತಿದೆ. ₹ 2 ಕೋಟಿ ಸುಲಿಗೆ ನಡೆಸಲಾಗಿದೆ ಎಂದು ಆರೋಪಿಸಿ ಉದ್ಯಮಿ, ಕೆಂಗೇರಿ ನಿವಾಸಿ ವಿ.ಶ್ರೀಹರ್ಷ ಪೊಲೀಸರಿಗೆ ದೂರು ನೀಡಿದ್ದರು.

ನಗರದಲ್ಲಿ ಇಂದು

'ಆಶಾ ಕಿರಣ ದೃಷ್ಟಿ ಕೇಂದ್ರ' ಉದ್ಘಾಟನೆ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಪ್ರಿಯಕೃಷ್ಣ, ತೇಜಸ್ವಿ ಸೂರ್ಯ, ಆಯೋಜನೆ: ಬಿಬಿಎಂಪಿ, ರಾಷ್ಟ್ರೀಯ ಆರೋಗ್ಯ ಅಭಿಯಾನ, ಸ್ಥಳ: ಪರಮಪೂಜ್ಯ ಡಾ. ಬಾಲಗಂಗಾಧರನಾಥ ಸ್ವಾಮೀಜಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಎಂ.ಸಿ. ಲೇಔಟ್, ಗೋವಿಂದರಾಜನಗರ, ಬೆಳಿಗ್ಗೆ 11

ಭರತನಾಟ್ಯ ಪ್ರದರ್ಶನ: ಶಿವಾನುಗ್ರಹ ಲಲಿತ ಕಲಾ ಟ್ರಸ್ಟ್ ವಿದ್ಯಾರ್ಥಿಗಳು, ನಿರ್ದೇಶನ: ಲತಾ ರಮೇಶ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.30

'ಕಡೇ ದಿನ ಕಡೇ ಶೋ' ನಾಟಕ ಪ್ರದರ್ಶನ: ನಿರ್ದೇಶನ: ಶ್ರೀನಿಧಿ ಬೆಂಗಳೂರು, ಸಂಗೀತ ನಿರ್ದೇಶನ: ಪ್ರಸನ್ನ ಕುಮಾರ್ ಎಂ.ಎಸ್., ಆಯೋಜನೆ: ಟೆಂಟ್ ಸಿನಿಮಾ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಂಗೀತ ಕಛೇರಿ: ಗಾಯನ: ಕೃತಿಕಾ ಶ್ರೀನಿವಾಸನ್, ಕೊಳಲು: ರಾಕೇಶ್ ದತ್, ಮೃದಂಗ: ದೀಪಿಕಾ ಶ್ರೀನಿವಾಸನ್, ವೀಣಾ: ಆರ್.ಪಿ. ಪ್ರಶಾಂತ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 7ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ....
nagaradalli_indu@prajavani.co.in

ಮುಕ್ತ ವಿಶ್ವವಿದ್ಯಾಲಯ ಪ್ರವೇಶಾತಿ ಪ್ರಾರಂಭ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪ್ರಸಕ್ತ ಸಾಲಿನ ಜುಲೈ ಆವೃತ್ತಿಗೆ ವಿವಿಧ ಕೋರ್ಸ್‌ಗಳ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಿದೆ.

ಪದವಿ, ಸ್ನಾತಕೋತ್ತರ ಕೋರ್ಸ್‌ಗಳು, ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ www.ksoumysuru.ac.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ವಿಳಾಸ: ಪ್ರಾದೇಶಿಕ ನಿರ್ದೇಶಕರು, ಬೆಂಗಳೂರು ಪ್ರಾದೇಶಿಕ ಕೇಂದ್ರ-01, ಮೊದಲನೇ ಮಹಡಿ, ಕೆಎಸ್‌ಆರ್‌ಟಿಸಿ ಸ್ಯಾಟ್‌ಲೈಟ್ ಬಸ್ ನಿಲ್ದಾಣ, ಮೈಸೂರು ರಸ್ತೆ, ಬಾಪೂಜಿನಗರ, ಬೆಂಗಳೂರು-26. ಮಾಹಿತಿಗೆ: 080-26603664



ಕೆ.ಆರ್‌.ಪುರ ಸಮೀಪದ ಹೂಡಿಯಲ್ಲಿ ಮಹದೇವಪುರ ಕ್ಷೇತ್ರದ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ನಂಜಾವಧೂತ ಸ್ವಾಮೀಜಿ, ಶಾಸಕಿ ಮಂಜುಳಾ ಲಿಂಬಾವಳಿ, ಮಾಜಿ ಶಾಸಕ ಅರವಿಂದ ಲಿಂಬಾವಳಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಎಚ್‌.ಎಸ್‌.ಪಿಳ್ಳಪ್ಪ, ನಗರ ಮಂಡಲ ಅಧ್ಯಕ್ಷ ಶ್ರೀಧರ್ ರೆಡ್ಡಿ, ಮನೋಹರ್ ರೆಡ್ಡಿ, ಎಲ್‌.ರಾಜೇಶ್, ಕೆ.ವಿ. ನಾಗರಾಜ್ ಹಾಜರಿದ್ದರು.

ಬಿಬಿಎಂಪಿ ಶಾಲೆ: ಗುತ್ತಿಗೆ ಶಿಕ್ಷಕರ ಕಾಯಂಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಶಿಕ್ಷಣ ವಿಭಾಗದಲ್ಲಿ ಖಾಲಿ ಇರುವ 284 ಹುದ್ದೆಗಳಿಗೆ ಹಾಲಿ ಕೆಲಸ ಮಾಡುತ್ತಿರುವ ಗುತ್ತಿಗೆ ಶಿಕ್ಷಕರನ್ನೇ ಕಾಯಂ ಮಾಡಬೇಕು ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಒತ್ತಾಯಿಸಿದೆ.

ಬಿಬಿಎಂಪಿ ಶಿಕ್ಷಣ ವಿಭಾಗದಲ್ಲಿ ಮಂಜೂರಾದ 872 ಹುದ್ದೆಗಳಿದ್ದು, 736 ಹುದ್ದೆಗಳು ಖಾಲಿ ಇದ್ದವು. 2020ರ ಸಿಪಿಆರ್ ನಿಯಮದ ಪ್ರಕಾರ ಅಗತ್ಯ ಇರುವ ಹುದ್ದೆಗಳ ಸಂಖ್ಯೆಯನ್ನು 420ಕ್ಕೆ ಸೀಮಿತಗೊಳಿಸಲಾಯಿತು. ಖಾಲಿ ಇರುವ 284 ಹುದ್ದೆಗಳ ಭರ್ತಿಗೆ 2021ರಲ್ಲಿ ವಿಶೇಷ ನಿಯಮ ರಚಿಸಿ, ಸರ್ಕಾರದ ಅನುಮೋದನೆಗೆ ಕಳುಹಿಸಲಾಗಿತ್ತು. ಆದರೆ, ಇದುವರೆಗೂ ಅನುಮೋದನೆ ದೊರೆತಿಲ್ಲ ಎಂದು ಸಂಘದ ಖಜಾಂಚಿ ಎನ್.ಎಸ್. ಸೋಮಶೇಖರ್ ದೂರಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ನರ್ಸರಿ, ಪ್ರಾಥಮಿಕ, ಪ್ರೌಢಶಾಲೆಗಳಲ್ಲಿ 725 ಗುತ್ತಿಗೆ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಖಾಲಿ ಹುದ್ದೆಗಳಿಗೆ ಅವರನ್ನೇ ನೇಮಕ ಮಾಡಿಕೊಳ್ಳಲು ವಿಶೇಷ ನೇಮಕಾತಿ ನಿಯಮ ರೂಪಿಸಬೇಕು. ಹಲವು ವರ್ಷಗಳಿಂದ ಕಡಿಮೆ ಸಂಬಳಕ್ಕೆ ದುಡಿಯುತ್ತಿರುವ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸಲು ಆಗ್ರಹಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರಿನ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದಲ್ಲಿ ಎಐಸಿಟಿಇಯಿಂದ ಅನುಮೋದನೆಗೊಂಡು ವಿಟಿಯುಗೆ ಸಂಯೋಜಿತಗೊಂಡಿರುವ ಎಂ-ಟೆಕ್ ಇನ್ ಟೂಲ್ ಎಂಜಿನಿಯರಿಂಗ್ ಕೋರ್ಸ್‌ಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಮತ್ತು ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಮಾಹಿತಿಗೆ https://gttc.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ: 9141629584, 9880217473.

ಒಳಮೀಸಲಾತಿ ಜಾರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಸಮಗ್ರ ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಶೀಘ್ರ ಸಲ್ಲಿಸಬೇಕು. ಈ ತಿಂಗಳ ಕೊನೆಯಲ್ಲಿಯೇ ಒಳಮೀಸಲಾತಿ ಜಾರಿಗೊಳ್ಳಲು ಸಹಕರಿಸಬೇಕು' ಎಂದು ಮಾಜಿ ಸಚಿವ ಎಚ್.ಆಂಜನೇಯ ಅವರು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅವರಿಗೆ ಮನವಿ ಮಾಡಿಕೊಂಡರು.

'ಮೂರು ದಶಕಗಳ ಮಾದಿಗ ಸಮುದಾಯದ ಸಮಗ್ರ ಹೋರಾಟದ ಫಲವಾಗಿ ಒಳಮೀಸಲಾತಿ ಜಾರಿಗೆ ಸುಪ್ರೀಂ ಕೋರ್ಟ್ ಹಸಿರು ನಿಶಾನೆ ತೋರಿದೆ. ಅದನ್ನು ಅನುಷ್ಠಾನಗೊಳಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಬದ್ಧರಾಗಿದ್ದಾರೆ. ಆದ್ದರಿಂದ, ಸಮಗ್ರ ಸಮೀಕ್ಷಾ ವರದಿಯನ್ನು ಆದಷ್ಟು ಬೇಗ ಸಿದ್ಧಪಡಿಸಬೇಕು' ಎಂದರು.

'ಸಮೀಕ್ಷಾ ಅವಧಿಯನ್ನು ಮೂರು ಬಾರಿ ವಿಸ್ತರಿಸಲಾಗಿದೆ. ಇನ್ನು ಮುಂದೆ ಯಾವುದೇ ಕಾರಣಕ್ಕೂ ವಿಸ್ತರಿಸಬಾರದು. ಬಿಬಿಎಂಪಿ ವ್ಯಾಪ್ತಿಯಲ್ಲಿ ಜುಲೈ 6ರವರೆಗೆ ಸಮೀಕ್ಷೆ ನಡೆಯಲಿದೆ. ಅದನ್ನೂ ವಿಸ್ತರಿಸಬಾರದು' ಎಂದು ಒತ್ತಾಯಿಸಿದರು.



ಹೂಡಿಕೆ ಪ್ರಕ್ರಿಯೆಯನ್ನು ಸುಲಭಗೊಳಿಸುವ ಉದ್ದೇಶದಿಂದ, ಷೇರುಗಳನ್ನು ಆಯ್ಕೆ ಮಾಡುವ ಹೊರೆಯು ಜನರ ಮೇಲೆ ಬೀಳಬಾರದು ಎಂಬ ಉದ್ದೇಶದಿಂದ ಮ್ಯೂಚುವಲ್ ಫಂಡ್‌ಗಳು ಸೃಷ್ಟಿಯಾದವು
ಸ್ಕಾಟ್ ಕುಕ್, ಅಮೆರಿಕದ ಉದ್ಯಮಿ

ದುಡ್ಡಿನಂಥಾ ಮಾತು

ಷೇರುಪೇಟೆ ಹೂಡಿಕೆಗಳು ಅಂದರೆ ಕೇಳಿದ್ದೆಲ್ಲವನ್ನೂ, ಕೇಳಿದಷ್ಟನ್ನೂ ಕೊಡುವ ಕಾಮಧೇನು ಎಂದು ಕೆಲವರು ಭಾವಿಸುವುದಿದೆ. ಹೀಗೆ ಭಾವಿಸಿ ಅವರು ತಜ್ಞರಲ್ಲದವರ ಮಾತು ಕೇಳಿ ಹೂಡಿಕೆ ಮಾಡಿ ನಷ್ಟ ಮಾಡಿಕೊಳ್ಳುವುದೂ ಇದೆ, ವಂಚನೆಗೆ ಒಳಗಾಗುವುದೂ ಇದೆ. ಹೂಡಿಕೆದಾರರು ಪ್ರಾಥಮಿಕವಾಗಿ ತಿಳಿದುಕೊಳ್ಳಬೇಕಿರುವ ಸಂಗತಿಗಳೇನು? ತಜ್ಞರ ಕಿವಿಮಾತು ಇಲ್ಲಿದೆ...



ಷೇರುಪೇಟೆ: ಕಾಮಧೇನು ಅಲ್ಲ!

• ಶಂಕರ್ ರಾಜಾ

2024ರ ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ನಿಫ್ಟಿ ಸೂಚ್ಯಂಕ ಶೇಕಡ 16ರಷ್ಟು ಜಿಗಿಯಿತು. ಎಸ್‌ಎಂಎಸ್ ಮೂಲಕ ಸಿಕ್ಕ ಮಾಹಿತಿಗಳು ಕೆಲಸಕ್ಕೆ ಬಂದವು ಎಂದು ಅದಿತಿ, ಕುಮಾರ್‌ಗೆ ಹೇಳಿದಳು. ಎಸ್‌ಎಂಎಸ್ ಮೂಲಕ ಷೇರು ಹೂಡಿಕೆ ಬಗ್ಗೆ ಮಾಹಿತಿ ಕೊಡುವ ವ್ಯಕ್ತಿಯು, ನಾಲ್ಕು ತಿಂಗಳಲ್ಲಿ ಶೇ 38ರಷ್ಟು ಲಾಭ ತಂದುಕೊಟ್ಟಿರುವುದಾಗಿ ಹೇಳಿದ್ದ.

'ನಾವು ಚಿನ್ನವನ್ನು ಅಡಮಾನವಾಗಿ ಇರಿಸಿ, ಮಾರುಕಟ್ಟೆಯಲ್ಲಿ ಹಣ ತೊಡಗಿಸಿ ಮುಂದೆ ಸಿಗುವ ಲಾಭವನ್ನೂ ಪಡೆದುಕೊಳ್ಳೋಣ' ಎಂದು ಅದಿತಿ ಹೇಳಿದಳು. ಎಫ್‌.ಡಿ. ಹಣ ಹಿಂಪಡೆದು, ಚಿನ್ನವನ್ನು ಅಡಮಾನ ಇರಿಸಿ ಕುಮಾರ್ ಒಟ್ಟು ₹12.50 ಲಕ್ಷ ತಂದ. ಮುಂದಿನ ನಾಲ್ಕು ತಿಂಗಳಲ್ಲಿ ಶೇ 53ರಷ್ಟು ಲಾಭ ಕೊಡಿಸುವುದಾಗಿ ಎಸ್‌ಎಂಎಸ್ ಹೀರೊ ಭರವಸೆ ಇತ್ತ.

ಆದರೆ ಅಕ್ಕ ಅದಿತಿಗೆ ಈ ಹೊತ್ತಿನಲ್ಲಿ ಎಚ್ಚರಿಕೆ ನೀಡಿದ ಹೇಮಾ, 'ದುರಾಸೆಗೆ ಬೀಳಬೇಡ. ಶೇ 50ರಷ್ಟನ್ನಾದರೂ ಲಾರ್ಜ್‌ಕ್ಯಾಪ್ ಮ್ಯೂಚುವಲ್ ಫಂಡ್‌ಗಳಲ್ಲಿ ತೊಡಗಿಸು' ಎಂದಳು.

ಅದಿತಿ ಮತ್ತು ಕುಮಾರ್ ಒಂದು ಟ್ರೇಡಿಂಗ್ ಖಾತೆ, ಡಿಮ್ಯಾಟ್ ಖಾತೆ ತೆರೆದರು. ಅಲ್ಲಿ ಅವರಿಗೆ ಠೇವಣಿಯಾಗಿ ಇರಿಸಿದ ₹1 ಲಕ್ಷಕ್ಕೆ 50 ಪಟ್ಟು ಹೆಚ್ಚು ಮಾರ್ಜಿನ್ ಸಿಗುತ್ತಿತ್ತು. ಅಲ್ಲಿ ಅವರಿಗೆ ₹12.50 ಲಕ್ಷದ ಶೇ 50ರಷ್ಟು ಹಣಕ್ಕೆ, ಅಂದರೆ ₹6.25 ಲಕ್ಷಕ್ಕೆ ₹3.12 ಕೋಟಿ (6.25X50) ಮೌಲ್ಯದ ಪೋರ್ಟ್‌ಫೋಲಿಯೊ ಸಿದ್ಧವಾಯಿತು!

ಬೆಳಿಗ್ಗೆ 10.03ಕ್ಕೆ ಸಂದೇಶ ಕಳುಹಿಸುವುದಾಗಿ ಎಸ್‌ಎಂಎಸ್ ಮೂಲಕ ಲಾಭ ತಂದುಕೊಡುವ ಹೀರೊ ಭರವಸೆ ನೀಡಿದ. ಎಸ್‌ಎಂಎಸ್ ಬಂದ ತಕ್ಷಣ ತಾನು ಹೇಳಿದ ಷೇರುಗಳನ್ನು ಖರೀದಿಸಬೇಕು ಎಂದು ತಿಳಿಸಿದ. ಬೆಳಿಗ್ಗೆ 10.03ಕ್ಕೆ ಎಸ್‌ಎಂಎಸ್ ಬಂತು. ಎರಡು ಕಂಪನಿಗಳ ಷೇರು ಖರೀದಿಸಲು ಅದರಲ್ಲಿ ಸೂಚನೆ ಇತ್ತು. ಆ ಷೇರುಗಳನ್ನು ಏಕೆ ಖರೀದಿಸಬೇಕು ಎಂಬ ಬಗ್ಗೆ ಒಂದಿಷ್ಟು ವಿವರಣೆಗಳೂ ಅಲ್ಲಿದ್ದವು.

'ಎರಡನೆಯ ಕಂಪನಿಯ ಷೇರುಗಳನ್ನು ಖ್ಯಾತ ಹೂಡಿಕೆದಾರರೊಬ್ಬರು ಖರೀದಿಸಲಿದ್ದಾರೆ ಎಂಬ ಮಾಹಿತಿ ನನಗೆ ಇದೆ, ಅವರು ಖರೀದಿಸುವ ಮೊದಲು ನಾವು ಖರೀದಿಸೋಣ. ನಂತರ ಆ ಷೇರುಗಳನ್ನು ಹೆಚ್ಚಿನ ಬೆಲೆಗೆ ಆ ಖ್ಯಾತ ಹೂಡಿಕೆದಾರನಿಗೆ ಮಾರಾಟ ಮಾಡೋಣ' ಎಂದು ಎಸ್‌ಎಂಎಸ್ ಹೀರೊ ಹೇಳಿದ.

ಲಾಭದ ಕನಸನ್ನು ಕಾಣುತ್ತ, ಸಿಗುವ ಲಾಭದಲ್ಲಿ ಒಂದು ಮನೆ ಖರೀದಿಸುವ ಆಸೆಯೊಂದಿಗೆ ಅದಿತಿ ಮತ್ತು ಕುಮಾರ್ ನಿದ್ದೆಗೆ ಜಾರಿದರು. ಆದರೆ ಮಾರನೆಯ ದಿನ ಬೆಳಿಗ್ಗೆ, ಇಸ್ರೇಲ್ ದೇಶವು ನೆರೆ ದೇಶದ ಮೇಲೆ ಸಮರ ಸಾರಿತು. ಕಚ್ಚಾ ತೈಲದ ಬೆಲೆ ಜಿಗಿಯಿತು. ನಿಫ್ಟಿ ಸೂಚ್ಯಂಕ ಶೇ 5ರಷ್ಟು ಕುಸಿಯಿತು. ಮಾರ್ಜಿನ್ ಪಡೆದ ಮೊತ್ತಕ್ಕೆ ಬ್ರೋಕರ್‌ಗೆ ಶುಲ್ಕ ಕೊಡಬೇಕಿತ್ತು. ಅದಿತಿ ಮತ್ತು ಕುಮಾರ್ ಹೂಡಿಕೆಗಳು ಭಾರಿ ನಷ್ಟ ಕಂಡವು.

ಆತಂಕಕ್ಕೆ ಒಳಗಾದ ಅದಿತಿ ಮತ್ತು ಕುಮಾರ್, ಸೆಬಿ ನೋಂದಾಯಿತ ಹೂಡಿಕೆ ಸಲಹೆಗಾರರೊಬ್ಬರ ಬಳಿ ಅಳಲು ತೋಡಿಕೊಂಡರು. ಇವರ ಪರಿಸ್ಥಿತಿಯನ್ನು ತಿಳಿದ ಸಲಹೆಗಾರ, ಅವರಿಗೆ ಒಂದಿಷ್ಟು ಕಿವಿಮಾತು ಹೇಳಿದರು (ಕಿವಿಮಾತುಗಳನ್ನು ಪಕ್ಕದಲ್ಲಿ ಪಟ್ಟಿ ಮಾಡಿ ಕೊಡಲಾಗಿದೆ!)

ಈ ನಡುವೆ ಅದಿತಿ ಮತ್ತು ಕುಮಾರ್ ಅವರು, ಹೇಮಾ ಆಡಿದ್ದ ಎಚ್ಚರಿಕೆ ಮಾತು ಆಧರಿಸಿ ಹೂಡಿಕೆ ಮಾಡಿದ್ದ ಲಾರ್ಜ್‌ಕ್ಯಾಪ್ ಮ್ಯೂಚುವಲ್ ಫಂಡ್ ಶೇ 8ರವರೆಗೆ ಮಾತ್ರ ಕುಸಿತ ಕಂಡಿತ್ತು. ಆದರೆ ಭಾರತದ ಬೆಳವಣಿಗೆಯ ಅಂದಾಜನ್ನು ಪರಿಗಣಿಸಿ ಫಂಡ್ ಮ್ಯಾನೇಜರ್‌ಗಳು, ಮುಂದಿನ ಐದು ವರ್ಷಗಳವರೆಗೆ ವಾರ್ಷಿಕ ಶೇ 12ರಷ್ಟು ಲಾಭ ತಂದುಕೊಡುವ ಭರವಸೆಯಲ್ಲಿ ಇದ್ದಾರೆ.

(ಈ ಬರಹದಲ್ಲಿ ಉಲ್ಲೇಖವಾಗಿರುವ ಹೆಸರುಗಳು ಕಾಲ್ಪನಿಕ)

ಲೇಖಕ ಪ್ರಭುದಾಸ್ ಲೀಲಾಧರ್ ಕ್ಯಾಪಿಟಲ್ ಸಂಸ್ಥೆಯ ಹಿರಿಯ ಉಪಾಧ್ಯಕ್ಷ

ಸೆಬಿ ನೋಂದಾಯಿತ ಸಲಹೆಗಾರ ಹೇಳಿದ ಕಿವಿಮಾತುಗಳು

- ಸೆಬಿ ನೋಂದಾಯಿತ ಷೇರು ಬ್ರೋಕರ್ ಮೂಲಕ ಮಾತ್ರವೇ ಹೂಡಿಕೆ ಮಾಡಿ. ನಿಮ್ಮ 'ಎಸ್‌ಎಂಎಸ್ ಹೀರೊ' ಒಬ್ಬ ವಂಚಕ.
- ಅಲ್ಪಾವಧಿಯಲ್ಲಿ ಭಾರಿ ಲಾಭವನ್ನು ಯಾವತ್ತೂ ನಿರೀಕ್ಷಿಸಬೇಡಿ. ಕಳೆದ 34 ವರ್ಷಗಳಲ್ಲಿ ಸೂಚ್ಯಂಕವು ಶೇ 13ರಷ್ಟು ವಾರ್ಷಿಕ ಲಾಭ ನೀಡಿದೆ. ಕಳೆದ ಮೂರು ವರ್ಷಗಳಲ್ಲಿ ನಿಫ್ಟಿ ಶೇ 11ರಷ್ಟು ಲಾಭ ನೀಡಿದೆ. ಪ್ರತಿ ವರ್ಷವೂ ಭಾರಿ ಲಾಭ ಕೊಡಲು ಷೇರುಪೇಟೆಯು ಅಕ್ಷಯಪಾತ್ರೆ ಅಲ್ಲ.
- ಭವಿಷ್ಯಕ್ಕಾಗಿ ಹೂಡಿಕೆ ಮಾಡಿ. ಅಲ್ಪಾವಧಿಯ ವಹಿವಾಟುಗಳಿಗೆ ಅಲ್ಲ. ಮೊದಲ ಬಾರಿಗೆ ಹೂಡಿಕೆ ಮಾಡುವವರಾಗಿದ್ದರೆ ಮ್ಯೂಚುವಲ್ ಫಂಡ್‌ಗಳ ಮೂಲಕ ಹಣ ತೊಡಗಿಸಿ. ಅಲ್ಲಿ ವೃತ್ತಿಪರರು ಹೂಡಿಕೆಯನ್ನು ನಿರ್ವಹಿಸುತ್ತಾರೆ.
- ಅಲ್ಪಾವಧಿಯಲ್ಲಿ ಮಾರುಕಟ್ಟೆಗಳು ಚಂಚಲವಾಗಿಯೇ ಇರುತ್ತವೆ. ಯುದ್ಧಗಳು, ವಾಣಿಜ್ಯ ಸಮರ, ಮುಂಗಾರು ಮಳೆ, ಬಡ್ಡಿ ದರ, ನಿರುದ್ಯೋಗ, ಕಂಪನಿಗಳ ಲಾಭಗಳಿಕೆ, ಸಾಂಕ್ರಾಮಿಕಗಳು ಷೇರುಪೇಟೆಗಳ ಮೇಲೆ ಪ್ರಭಾವ ಬೀರುತ್ತಿರುತ್ತವೆ. ಆದರೆ ಭಯಪಡುವ ಅಗತ್ಯವಿಲ್ಲ. ನೀವು ಅನಾರೋಗ್ಯಕ್ಕೆ ತುತ್ತಾದಾಗ ವೈದ್ಯರನ್ನು ಸಂಪರ್ಕಿಸುವಂತೆ, ಹಣಕಾಸು ತಜ್ಞರ ಜೊತೆ ಮಾತನಾಡಿ. ಮಾರುಕಟ್ಟೆ ಮತ್ತು ಅರ್ಥವ್ಯವಸ್ಥೆಯ ಬಗ್ಗೆ ಅವರು ಸರಿಯಾಗಿ ಹೇಳುತ್ತಾರೆ.
- ಕಂಪನಿಯ ವಹಿವಾಟು ಏನು ಎಂಬುದು ಸರಿಯಾಗಿ ಗೊತ್ತಿರದಿದ್ದರೆ ಅದರ ಷೇರು ಖರೀದಿಸಬೇಡಿ.
- ಕಂಪನಿಗಳ ವಹಿವಾಟು, ಲಾಭ–ನಷ್ಟದ ವಿವರ, ವಲಯದ ಚಟುವಟಿಕೆಗಳು ಅರ್ಥವಾದಾಗ ಮಾತ್ರ ಷೇರು ಖರೀದಿಸಿ. ಎಸ್‌ಎಂಎಸ್ ಸೂಚನೆ, ಇನ್‌ಸ್ಟಾಗ್ರಾಂನಲ್ಲಿ ಸಿಗುವ ಸಲಹೆ, ಅನಧಿಕೃತ ಸಲಹೆಗಾರರ ಮಾತು ಆಧರಿಸಿ ಹೂಡಿಕೆ ಮಾಡಬೇಡಿ.
- ಷೇರುಗಳಲ್ಲಿ ಕನಿಷ್ಠ 5 ವರ್ಷಗಳ ನೇರ ಹೂಡಿಕೆ ಅನುಭವ ಇಲ್ಲದಿದ್ದರೆ ಸ್ಮಾಲ್‌ಕ್ಯಾಪ್ ಕಂಪನಿಗಳ ಷೇರು ಖರೀದಿಸಬೇಡಿ. ಸ್ಮಾಲ್‌ಕ್ಯಾಪ್ ಕಂಪನಿಗಳು ಒಳ್ಳೆಯ ಸ್ಥಿತಿಗೆ ಬರಲು ಸಾಮಾನ್ಯವಾಗಿ 9 ವರ್ಷ ಬೇಕು. ಸ್ಮಾಲ್‌ಕ್ಯಾಪ್ ಕಂಪನಿಗಳು ಮಿಡ್‌ಕ್ಯಾಪ್ ಕಂಪನಿಗಳಾಗಿ ಬೆಳವಣಿಗೆ ಕಾಣುವ ಪ್ರಮಾಣ ಶೇ 25ರಷ್ಟು ಮಾತ್ರ! ಮೊದಲ ಬಾರಿಗೆ ಷೇರು ಖರೀದಿಸುವವರಾಗಿದ್ದರೆ ಮಿಡ್‌ಕ್ಯಾಪ್ ಮತ್ತು ಲಾರ್ಜ್‌ಕ್ಯಾಪ್ ಷೇರುಗಳನ್ನು ಮಾತ್ರವೇ ಖರೀದಿಸಿ.
- ಒಟ್ಟು ಹೂಡಿಕೆಯಲ್ಲಿ ಶೇ 10–12ಕ್ಕಿಂತ ಹೆಚ್ಚಿನ ಪಾಲನ್ನು ಒಂದೇ ಕಂಪನಿಯಲ್ಲಿ ತೊಡಗಿಸಬೇಡಿ. ಒಂದೇ ವಲಯದ ಮೇಲೆ ಶೇ 25ಕ್ಕಿಂತ ಹೆಚ್ಚು ಹೂಡಿಕೆ ಬೇಡ.
- ಸಿಡಿಎಸ್‌ಎಲ್ ಕಡೆಯಿಂದ ಸಿಗುವ ಸಿಎಎಸ್ ವಿವರವನ್ನು ಮತ್ತೆ ಮತ್ತೆ ನೋಡುತ್ತಿರಿ.
- ಯಾವುದೇ ಷೇರಿನ ಮೌಲ್ಯದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಮೂರು ವರ್ಷಗಳ ಅವಧಿಯಲ್ಲಿ ಶೇ 12ಕ್ಕಿಂತ ಹೆಚ್ಚಿರುತ್ತದೆ ಎಂಬ ನಿರೀಕ್ಷೆ ಬೇಡ. ಯಾವುದೇ ಷೇರು ಉತ್ತಮ ಲಾಭ ಕೊಡದೆ ಇದ್ದರೆ, ಸೆಬಿ ನೋಂದಾಯಿತ ಸಲಹೆಗಾರರ ಜೊತೆ ಸಮಾಲೋಚಿಸಿ ಅದನ್ನು ಮಾರಾಟ ಮಾಡಿ.
- ಏನೂ ಅರ್ಥ ಆಗದೆ ಇದ್ದರೂ ಹೂಡಿಕೆ ಮಾಡಬೇಕು ಎಂದು ಬಯಸುತ್ತೀರಾ? ಹಾಗಾದರೆ ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಿ. ಅವು ಬಹಳ ಚೆನ್ನಾಗಿವೆ.

ಮ್ಯೂಚುವಲ್ ಫಂಡ್ಸ್ ಹೂಡಿಕೆಗೆ ಕ್ಯಾಲ್ಕುಲೇಟರ್‌ಗಳು

ಮಾಹಿತಿ ಕಣಜ



ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಆಲೋಚನೆ ಹೊಂದಿರುವವರು ಕೆಲವು ಸಂದರ್ಭಗಳಲ್ಲಿ ಏನಾದರೂ ಒಂದು ಕಾರಣ ಹುಡುಕಿ, ಹೂಡಿಕೆ ಆರಂಭಿಸುವುದನ್ನು ಮುಂದಕ್ಕೆ ಹಾಕುವುದಿದೆ. ಕೆಲವರು ನಿಜವಾದ ಸಮಸ್ಯೆಯ ಕಾರಣದಿಂದಾಗಿ ಹೂಡಿಕೆ ಆರಂಭಿಸುವುದನ್ನು ಮುಂದೂಡುತ್ತಾರೆ ಎಂಬುದೂ ದಿಟ.

ಕಾರಣಗಳು ಏನೇ ಇರಲಿ, ಹೂಡಿಕೆ ಆರಂಭಿಸುವುದನ್ನು ಮುಂದಕ್ಕೆ ಹಾಕಿದರೆ ಅದರಿಂದ ಒಂದಿಷ್ಟು ನಷ್ಟವಂತೂ ಆಗುತ್ತದೆ. ಹೂಡಿಕೆಯನ್ನು ಎಷ್ಟು ಬೇಗ ಆರಂಭಿಸುತ್ತಾರೋ ಹೂಡಿಕೆದಾರರಿಗೆ ಅಷ್ಟರಮಟ್ಟಿಗೆ ಒಳ್ಳೆಯದೇ ಆಗುತ್ತದೆ ಎಂಬುದು ಹಣಕಾಸು ತಜ್ಞರ ಅಭಿಮತ. ಅಲ್ಲದೆ, ಧರ್ಮೋ ರಕ್ಷತಿ ರಕ್ಷಿತಃ ಎನ್ನುವ ಮಾತನ್ನು ಕೆಲವು ಹಣಕಾಸು ತಜ್ಞರು ತುಸು ಬದಲಾಯಿಸಿ, 'ನೀವು ದುಡ್ಡನ್ನು ಕಾಪಾಡಿಕೊಂಡರೆ, ಅದು ನಿಮ್ಮನ್ನು ಕಾಪಾಡುತ್ತದೆ' ಎಂದು ಹೇಳುವುದಿದೆ.

ಅದಿರಲಿ, ಮ್ಯೂಚುವಲ್ ಫಂಡ್‌ಗಳಲ್ಲಿ ಎಸ್‌ಐಪಿ ಮೂಲಕ ಹೂಡಿಕೆ ಮಾಡುವುದನ್ನು ಎಷ್ಟು ತಡ ಮಾಡಿದರೆ ಎಷ್ಟು ನಷ್ಟ ಎಷ್ಟಾಗುತ್ತದೆ ಎಂಬುದನ್ನು ಲೆಕ್ಕಹಾಕಲು 'ಮ್ಯೂಚುವಲ್ ಫಂಡ್ ಸಹಿ ಹೈ' ವೆಬ್‌ಸೈಟ್‌ನಲ್ಲಿ (www.mutualfundssahihai.com) ಒಂದು ಕ್ಯಾಲ್ಕುಲೇಟರ್ ಲಭ್ಯವಿದೆ.

ಉದಾಹರಣೆಗೆ, ವ್ಯಕ್ತಿಯೊಬ್ಬ 25ನೆಯ ವರ್ಷದಲ್ಲಿ ₹1000 ಮೊತ್ತಕ್ಕೆ ಎಸ್‌ಐಪಿ ಆರಂಭಿಸುತ್ತಾನೆ ಎಂದು ಭಾವಿಸಿ. ವಾರ್ಷಿಕ ಶೇ 8ರಷ್ಟು ಲಾಭ ಆತನಿಗೆ ಸಿಗುತ್ತದೆ ಎಂಬ ಅಂದಾಜಿನಲ್ಲಿ ಈ ಕ್ಯಾಲ್ಕುಲೇಟರ್ ಬಳಸಿ ಲೆಕ್ಕಹಾಕಿದರೆ, ಆತ ತನ್ನ 35ನೇ ವಯಸ್ಸಿಗೆ ₹1,20,000 ಹೂಡಿಕೆ ಮಾಡಿ, ಲಾಭದ ಮೊತ್ತವಾಗಿ ₹62,946 ಪಡೆದಿರುತ್ತಾನೆ ಎಂಬುದು ಗೊತ್ತಾಗುತ್ತದೆ.

ಅದೇ ವ್ಯಕ್ತಿ ಅಷ್ಟೇ ಮೊತ್ತದ ಹೂಡಿಕೆಯನ್ನು ತನ್ನ 25ನೇ ವಯಸ್ಸಿಗೆ ಬದಲು 30ನೇ ವಯಸ್ಸಿಗೆ ಶುರುಮಾಡಿದರೆ ಆತನಿಗೆ 35 ವರ್ಷ ವಯಸ್ಸಾದಾಗ ₹60,000 ಹೂಡಿಕೆ ಆಗಿರುತ್ತದೆ, ಸಿಗುವ ಲಾಭವು ₹₹13,476 ಮಾತ್ರ ಆಗಿರುತ್ತದೆ.

ಇಂತಹ ಹಲವು ಕ್ಯಾಲ್ಕುಲೇಟರ್‌ಗಳು ಮ್ಯೂಚುವಲ್ ಫಂಡ್ಸ್ ಸಹಿ ಹೈ ವೆಬ್‌ಸೈಟ್‌ನಲ್ಲಿ ಲಭ್ಯವಿವೆ. ಈಗಿನ ವೆಚ್ಚವು ಹಣದುಬ್ಬರದ ಕಾರಣದಿಂದಾಗಿ ಮುಂದೆ ಎಷ್ಟಾಗುತ್ತದೆ, ನಿವೃತ್ತಿ ನಂತರದ ಜೀವನಕ್ಕೆ ಎಷ್ಟು ಹಣ ಬೇಕಾಗುತ್ತದೆ ಹಾಗೂ ಆ ಹಣವು ಹೂಡಿಕೆಗಳಿಂದ ಸಿಗುವಂತೆ ಆಗಲು ಯಾವ ಪ್ರಮಾಣದಲ್ಲಿ ಈಗ ಹೂಡಿಕೆ ಮಾಡಬೇಕಾಗುತ್ತದೆ ಸೇರಿದಂತೆ ಹಲವು ಹಣಕಾಸಿನ ಅಗತ್ಯಗಳಿಗೆ ಸಂಬಂಧಿಸಿದ ಕ್ಯಾಲ್ಕುಲೇಟರ್‌ಗಳು ಈ ವೆಬ್‌ಸೈಟ್‌ನಲ್ಲಿ ಲಭ್ಯವಿವೆ.

ಐನಾಕ್ಸ್ ವಿಂಡ್

ಬ್ರೋಕರೇಜ್ ಮಾತು



ಪ್ರಾತಿನಿಧಿಕ ಚಿತ್ರ

ಐನಾಕ್ಸ್ ವಿಂಡ್ ಕಂಪನಿಯ ಷೇರು ಮೌಲ್ಯವು ₹210ಕ್ಕೆ ತಲುಪಬಹುದು ಎಂದು ಮೋತಿಲಾಲ್ ಓಸ್ವಾಲ್ ಬ್ರೋಕರೇಜ್ ಕಂಪನಿ ಹೇಳಿದೆ. 2030ರ ವೇಳೆಗೆ ಪವನ ವಿದ್ಯುತ್ ಉತ್ಪಾದನೆಯನ್ನು ಎರಡು ಪಟ್ಟು ಹೆಚ್ಚು ಮಾಡಬೇಕು ಎಂದು ದೇಶವು ಹೊಂದಿರುವ ಗುರಿಯ ಪ್ರಯೋಜನವನ್ನು ಪಡೆದುಕೊಳ್ಳುವ ಅನುಕೂಲಕರ ಸ್ಥಿತಿಯಲ್ಲಿ ಈ ಕಂಪನಿಯು ಇದೆ ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ.

2024–25ನೇ ಹಣಕಾಸು ವರ್ಷದಿಂದ 2027–28ನೇ ಹಣಕಾಸು ವರ್ಷದವರೆಗಿನ ಅವಧಿಯಲ್ಲಿ ಕಂಪನಿಯ ವರಮಾನದ ವಾರ್ಷಿಕ ಸಂಯುಕ್ತ ಬೆಳವಣಿಗೆ ದರವು (ಸಿಎಜಿಆರ್) ಶೇಕಡ 48ರಷ್ಟು ಆಗಬಹುದು ಎಂದು ಮೋತಿಲಾಲ್ ಓಸ್ವಾಲ್ ಅಂದಾಜು ಮಾಡಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಈ ಕಂಪನಿಯ ಷೇರು ಮೌಲ್ಯವು ₹177.40 ಆಗಿತ್ತು.

(ಬ್ರೋಕರೇಜ್ ಸಂಸ್ಥೆಗಳು ನೀಡುವ ಮಾಹಿತಿ, ವಿವರಕ್ಕೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ದಿಕ್ಸೂಚಿ ನಿಮಗಿಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಇಂಗ್ಲಿಷ್

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ


Second Language ENGLISH

Unit-2 PROSE

There's a Girl by the Tracks!

Read and respond


Task 1 : Look at the picture- 1 in column 'A'. Some statements are made in column 'B' about the actions as seen in 'A'. Some of the statements are wrong, and some of them are right. If they are wrong, correct them.If they are right mark(√)



1. A woman is walking alone. right( )/wrong ( ).
2. Some children are playing cricket. right ( ) / wrong ( )
3. Three cows are seen in the picture. right ( ) / wrong ( ).
4. The window pane is broken. right ( ) / wrong ( )
5. A child is holding a tree. right ( ) / wrong ( ).
6. There is a river in the picture. right ( ) / wrong ( ).
7. In the background, there is a forest. right ( ) / wrong ( ).

Ans:-1. A woman is walking alone. Right()/ Wrong(√)
Expln- A woman is walking with a child.
2.Some children are playing cricket. Right(√)/ Wrong( )
3.Three cows are seen in the picture. Right( )/Wrong (√).
Expln: There are two cows seen in the picture.
4.The window pane is broken. Right(√) /Wrong ( )
5.A child is holding a tree. Right (√) / Wrong ( ).
6. There is a river in the picture. Right( ) /Wrong (√).
Expln: There is no river in the picture.
7. In the background, there is a forest. Right( ) /Wrong (√).
Expln: In the back ground there are buildings and huts.

Task 2: Look at the picture -2. Try to describe what you can see in the picture. Some clues are given. One is done for you.



a. There/ many/people/ picture.
There are many people in the picture.
b. some people / march procession.
c. child/ draw/ bow
d. two/ women/chat
e. some / children/ run.
f. a man/ sell/ balloons.

Ans:-
a. There/ many/people/ picture.
Ans:- There are many people in the picture.
b. some people / march procession.
Ans:- Some people are marching in a procession.
c. child/ draw/ bow
Ans:- A child has drawn a bow.
d. two/ women/chat
Ans:- Two women are engrossed in a chat.
e. some / children/ run.
Ans:- Some children are running down the road.
f. a man/ sell/ balloons.
Ans:- A man is selling balloons.

Practice writing

Task 1 : Read the following letter written by a resident of Bangalore about a public problem in Bangalore.

G. Manjunath
#32 5th Cross, 3rd Main
Rajajinagar Bengaluru
2nd July, 2025

To,
The Editor
English Daily, .Bangalore

Dear Sir,

Sub: Vehicles on roads.

The BBMP had done a good job by repairing the pavements and evicting vegetables vendors from the Gandhi Bazaar Road. However, some people have been parking their vehicles on the road now. The traffic authorities should take steps to prevent vehicles from being parked on the roadside.

Thank you

Yours faithfully
XXXXXXX

Task 2: Work in pairs and write a letter to the editor column focusing on the problems of your locality

S. Venkatesh
3, Veera Sadana
7th Cross, 12th Main
Vijaynagar Bangalore
2nd July, 2025

To,
The Editor
English Daily, Bangalore

(Contd…….)

REPRODUCTION

Human Reproduction

Short Answer type questions:-

1. A human female experiences two major changes, menarche and menopause during her life. Mention the significance of both the events.

Ans:- ***Menarche*** – is the first menstruation that occurs in the life of a young girl. It is the indication of the attainment of sexual maturity and beginning of fertile period.

Menopause- It is the cessation of menstruation in the life of a women that marks the end of fertile period due to non-release of ova.

2. Why do doctors recommend breast feeding during initial period of infant growth?

Ans:- Doctors recommend breast feeding during initial period of infant growth because
i) Mother's milk has antibodies (IgA, IgG) and several biochemicals for providing resistance against several pathogens.
(ii) Mother provides phagocytes to the baby for killing germs.
(iii) Breast feeding is a natural method for preventing another pregnancy soon after.
(iv) Mother's milk is a perfect diet for neonates and young infants.

3. What is foetal ejection reflex? Explain how it leads to parturition?

Ans:- Foetal ejection reflex is the origin of signals from the fully formed foetus and placenta. Mild uterine contractions develop. There is a positive feedback or cascade effect. Both mother and foetus secrete oxytocin. Uterine contractions become stronger and stronger. Head of the baby is pushed to cervix which gets dilated and stretched. A similar dilation occurs in vagina. Intensity of uterine and abdominal contractions increases. Amniotic membrane ruptures. Amniotic fluid passes out. Soon it is followed by expulsion of the baby.

4. Except endocrine function, What are the other functions of placenta?

Ans:- Placenta is foetomaternal connective that supports the foetus during its development. Its nonendocrine functions are –
(i) **Nutrition** or supply of nutrients by the mother to the foetus.
(ii) **Exchange of Gases** through placenta, the mother supplies O_2 to foetus and takes away Co_2 produced by the foetus.
(iii) **Excretion** - foetus eliminates its nitrogenous and other wastes through placenta.
(iv) **Antibodies** - Mother's antibodies enter foetal blood through placenta and protect it from several diseases.
(v) **Barrier** - Placenta does not allow passage of pathogens and toxins from entering the foetus.

Answer the following questions:-


1. Mention some of the differences between Sperm and Ovum.

Ans:-

	Sperm	*Ovum*
1	It is the male gamete.	It is the female gamete.
2	Produced inside the testes.	Ova develop inside the ovaries.
3	Maturation of sperms requires about 64 days.	Maturation of ova requires several years.
4	Millions of sperms are produced per day	Only one ovum matures every 28 days
5	It is dart-like.	Rounded outline.
6	60µm in length.	100µm in dia.
7	It is motile.	It is non-motile.
8	Reserve food is little.	Reserve food is sufficient.
9	contains special cap, acrosome.	Acrosome-like structure is absent.
10	Golgi complex is obliterated.	Golgi complex is present and functional.
11	It contains only a small amount of cytoplasm.	A large amount of cytoplasm is present.
12	Is differentiated into four parts.	Is not differen-tiated into parts.
13	Centrioles are present.	Centrioles are not distinct.
14	Flagellum present	Flagellum- absent
15	Nucleus has dense chromatin.	Nucleus contains dispersed chromatin
16	Extra coatings are absent.	Has 2 extra coatings, zona pellucida & corona radiate.
17	Mitochondria are spirally arranged in the area of middle piece.	Mitochondria are scattered throughout the cytoplasm.

2. Draw the structure of the Ovum.

Ans:-



(Contd….)

ಚಿಟಿಕೆ ಸುದ್ದಿ

18 ಕೋತಿಗಳ ಸಾವು ವಿಷಪ್ರಾಶನ ಶಂಕೆ



ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಕಂದೇಗಾಲ-ಕೊಡಸೋಗೆ ರಸ್ತೆಯಲ್ಲಿ 18 ಕೋತಿಗಳ ಕಳೇಬರ ಪತ್ತೆಯಾಗಿದ್ದು ವಿಷಪ್ರಾಶನ ಶಂಕೆ ವ್ಯಕ್ತವಾಗಿದೆ.

ಕಿಡಿಗೇಡಿಗಳು ಚೀಲಗಳಲ್ಲಿ ಕೋತಿಗಳ ಕಳೇಬರವನ್ನು ತಂದು ಬಿಸಾಡಿ ಹೋಗಿದ್ದಾರೆ. ಸುದ್ದಿತಿಳಿದ ಕೂಡಲೇ ಬಫರ್ ವಲಯದ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿನೀಡಿ ಪರಿಶೀಲಿಸಿದ್ದು ಬದುಕುಳಿದಿದ್ದ 2 ಕೋತಿಗಳ ಪಶುಸಂಗೋಪನಾ ಇಲಾಖೆಯ ವೈದ್ಯರ ಬಳಿ ಕೊಂಡೊಯ್ದು ಚಿಕಿತ್ಸೆ ಕೊಡಿಸಿದ್ದು ಚೇತರಿಸಿಕೊಳ್ಳುತ್ತಿವೆ.

ಮೇಲ್ನೋಟಕ್ಕೆ ವಿಷಪ್ರಾಶನವಾಗಿರಬಹುದು. ಮೃತ ಕೋತಿಗಳ ಅಂಗಾಂಗಗಳನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದ್ದು ವರದಿ ಬಂದ ನಂತರ ಸಾವಿಗೆ ಕಾರಣ ತಿಳಿಯಲಿದೆ ಎಂದು ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಕೆ.ಮಾದೇಶ್ ತಿಳಿಸಿದ್ದಾರೆ.

ಸ್ವಯಂ ನಿವೃತ್ತಿಗೆ ಎಎಸ್ಪಿ ಭರಮನಿ ಕೋರಿಕೆ

ಧಾರವಾಡ: ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಎಸ್ಪಿ) ಎನ್.ವಿ.ಭರಮನಿ ಅವರು ಸ್ವಯಂ ನಿವೃತ್ತಿ (ವಿಆರ್‌ಎಸ್) ಕೋರಿ ಗೃಹ ಇಲಾಖೆಗೆ ಒಂದು ತಿಂಗಳ ಹಿಂದೆ ಮನವಿ ಸಲ್ಲಿಸಿದ್ದಾರೆ. ಧಾರವಾಡ ಜಿಲ್ಲೆಗೆ ಈಚೆಗೆ ಸೃಜಿಸಿದ್ದ ಎಎಸ್ಪಿ ಹುದ್ದೆಯಲ್ಲಿ ಅವರು ಕರ್ತವ್ಯದಲ್ಲಿ ಇದ್ದಾರೆ.

'31 ವರ್ಷಗಳಿಂದ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಿವೃತ್ತಿಗೆ 4 ವರ್ಷ ಬಾಕಿ ಇದೆ. ಸ್ವಯಂ ನಿವೃತ್ತಿಗೆ ಮನವಿ ಸಲ್ಲಿಸಿದ್ದೇನೆ. ಇಲಾಖೆ ಇನ್ನೂ ನಿರ್ಧರಿಸಿಲ್ಲ' ಎಂದು ಎನ್.ವಿ.ಭರಮನಿ 'ಪ್ರಜಾವಾಣಿ'ಗೆ ತಿಳಿಸಿದರು.

ಬೆಳಗಾವಿಯಲ್ಲಿ ಕೆಲ ದಿನಗಳ ಹಿಂದೆ ನಡೆದಿದ್ದ ಕಾಂಗ್ರೆಸ್ ಸಮಾವೇಶದಲ್ಲಿ ಭದ್ರತೆ ವ್ಯವಸ್ಥೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಸಮಾಧಾನಗೊಂಡು, ಭರಮನಿ ಅವರಿಗೆ ಕೈ ಎತ್ತಿ ರೇಗಿದ್ದರು.

'ರವಿಕುಮಾರ್ ವಿರುದ್ಧ ಪ್ರಕರಣ ದಾಖಲಿಸಿ'

ಮೈಸೂರು: 'ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಇಲ್ಲಿನ 'ಒಡನಾಡಿ' ಸೇವಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪರಶುರಾಮ್ ಎಂ.ಎಲ್. ಮತ್ತು ಕಾರ್ಯದರ್ಶಿ ಸ್ಟ್ಯಾನ್ಲಿ ಕೆ.ವಿ. ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

'ಮುಖ್ಯ ಕಾರ್ಯದರ್ಶಿಯು ರಾತ್ರಿಯಿಡೀ ರಾಜ್ಯ ಸರ್ಕಾರಕ್ಕಾಗಿ ಹಾಗೂ ಇಡೀ ದಿನ ಮುಖ್ಯಮಂತ್ರಿಗಾಗಿ ಕೆಲಸ ಮಾಡುತ್ತಾರೆ' ಎಂಬ ಹೇಳಿಕೆಯನ್ನು ರವಿಕುಮಾರ್ ನೀಡಿದ್ದಾರೆ. 'ಅವರ ದ್ವಂದ್ವ ಅರ್ಥದ ಮಾತುಗಳು ಆಶ್ಚರ್ಯ ಹಾಗೂ ಅಸಹನೀಯವಾಗಿವೆ' ಎಂದು ಆರೋಪಿಸಿದ್ದಾರೆ.

ಅವರ ಹೇಳಿಕೆಯು ರಾಜ್ಯದಲ್ಲಿ ಉದ್ಯೋಗ ಮಾಡುತ್ತಿರುವ ಹೆಣ್ಣು ಮಕ್ಕಳ ಘನತೆಗೆ ಧಕ್ಕೆ ತರುವಂತಹ ಪರಿಸ್ಥಿತಿ ನಿರ್ಮಾಣವಾಗಲು ಕಾರಣ ವಾಗುತ್ತದೆ ಎಂದಿದ್ದಾರೆ.

ನಿಂಗಪ್ಪ ಪ್ರಕರಣ ಶೀಘ್ರ ವರದಿ

ಬೆಂಗಳೂರು: ಲೋಕಾಯುಕ್ತದ ಅಧಿಕಾರಿಗಳ ಹೆಸರಿನಲ್ಲಿ ಮಾಜಿ ಕಾನ್‌ಸ್ಟೆಬಲ್ ನಿಂಗಪ್ಪ ಸಾವಂತ ಅವರು ಸರ್ಕಾರದ ಇತರ ಇಲಾಖೆಗಳ ಅಧಿಕಾರಿಗಳಿಂದ ಹಣ ವಸೂಲಿ ಮಾಡಿದ್ದ ಪ್ರಕರಣ ದಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲು ಲೋಕಾಯುಕ್ತ ಸಂಸ್ಥೆಯು ಸಿದ್ಧತೆ ನಡೆಸಿದೆ.

'ಆರೋಪಿಯ ವಿವರಗಳು, ಕೃತ್ಯದ ಸ್ವರೂಪ, ಅದಕ್ಕೆ ಸಂಬಂಧಿಸಿದ ಸಾಕ್ಷ್ಯಗಳು, ಕೃತ್ಯದಲ್ಲಿ ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳು ಭಾಗಿಯಾಗಿದ್ದರ ಬಗ್ಗೆ ಮತ್ತು ಅವರ ಪಾತ್ರ ಕುರಿತ ವಿವರಗಳು ವರದಿಯಲ್ಲಿ ಇದೆ' ಎಂದು ಲೋಕಾಯುಕ್ತದ ಉನ್ನತ ಮೂಲಗಳು ತಿಳಿಸಿವೆ.

ಪ್ರಕರಣ ಒಂದು, ತನಿಖೆ ಮೂರು

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧೀಕ್ಷಕರಾಗಿದ್ದ ಚಂದ್ರಶೇಖರನ್ ಅವರು 2024ರ ಮೇ 26ರಂದು, ಶಿವಮೊಗ್ಗದ ತಮ್ಮ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರು ಬರೆದಿಟ್ಟಿದ್ದ ಮರಣ ಪತ್ರದಲ್ಲಿ, 'ಮೇಲಿನವರ ಆದೇಶದಂತೆ ನಿಗಮದ ಹಣವನ್ನು ಬೇರೆ-ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ' ಎಂದು ಆರೋಪಿಸಿದ್ದರು. ಅದರ ಬೆನ್ನಲ್ಲೇ, ನಿಗಮವು ನಡೆಸಿದ ಆಂತರಿಕ ಪರಿಶೀಲನೆಯಲ್ಲಿ ₹89.62 ಕೋಟಿ ಅಕ್ರಮವಾಗಿ ವರ್ಗಾವಣೆ ಆಗಿರುವುದು ಪತ್ತೆಯಾಯಿತು. ಅನಂತರದ ಬೆಳವಣಿಗೆಗಳ ವಿವರ ಈ ಮುಂದಿನಂತಿದೆ.

ಪ್ರಜಾವಾಣಿ ವಾರ್ತೆ

ನಿಗಮದಿಂದ ದೂರು, ಎಸ್‌ಐಟಿ ತನಿಖೆ

2024ರ ಮೇ 28-29: ನಿಗಮದ ಹಣವನ್ನು ಯೂನಿಯನ್ ಬ್ಯಾಂಕ್ ಅಧಿಕಾರಿಗಳು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ನಿಗಮದ ಪ್ರಧಾನ ವ್ಯವಸ್ಥಾಪಕ ಎ.ರಾಜಶೇಖರನ್ ಅವರಿಂದ ಹೈಗ್ರೌಂಡ್ ಪೊಲೀಸರಿಗೆ ದೂರು

ಮೇ 31: ಆರಂಭದಲ್ಲಿ ಹೈಗ್ರೌಂಡ್ ಪೊಲೀಸರು ತನಿಖೆ ಆರಂಭಿಸಿದರು. ರಾಜ್ಯ ಸರ್ಕಾರವು ಅಪರಾಧ ತನಿಖಾ ದಳದ (ಸಿಐಡಿ) ಆರ್ಥಿಕ ಅಪರಾಧಗಳ ವಿಭಾಗದ ಎಡಿಜಿಪಿ ಮನೀಶ್ ಖರ್ಬೀಕರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿತು

ಜೂನ್ 1-24: ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಜೆ.ಜಿ.ಪದ್ಮನಾಭ ಮತ್ತು ಲೆಕ್ಕಾಧಿಕಾರಿಯಾಗಿದ್ದ ಪರಶುರಾಮ್ ಜಿ. ದುರುಗಣ್ಣವರ್ ಬಂಧಿಸಿದ ಎಸ್‌ಐಟಿ. ಅಕ್ರಮಕ್ಕೆ ನೆರವಾಗಿದ್ದ ಆರೋಪದಲ್ಲಿ ಸತ್ಯನಾರಾಯಣ ವರ್ಮಾ, ಚಂದ್ರಮೋಹನ್ ಮತ್ತು ಸತ್ಯನಾರಾಯಣ ಸಹಚರ ಸಾಯಿತೇಜ್ ಬಂಧನ. ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಹಾಗೂ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರ ವಿಚಾರಣೆ


ನೆಕ್ಕಂಟಿ ನಾಗರಾಜ್

ಶಾಸಕ ನಾಗೇಂದ್ರ ಆಪ್ತ ನೆಕ್ಕಂಟಿ ನಾಗರಾಜ್ ಸೇರಿ ಒಟ್ಟು 12 ಮಂದಿ ಬಂಧನ

ಜೂನ್ 29: ಅಕ್ರಮವಾಗಿ ವರ್ಗಾವಣೆಯಾಗಿತ್ತು ಎನ್ನಲಾದ ₹94.5 ಕೋಟಿಯಲ್ಲಿ ಆರೋಪಿಗಳಿಂದ ₹28 ಕೋಟಿ ವಶಕ್ಕೆ. ವಿವಿಧ ಬ್ಯಾಂಕ್ ಖಾತೆಗಳಲ್ಲಿ ಇದ್ದ ₹45 ಕೋಟಿ ಮೊತ್ತದ ಠೇವಣಿ, ಸುಮಾರು ₹4 ಕೋಟಿ ಮೌಲ್ಯದ ಐಷಾರಾಮಿ ಕಾರುಗಳ ಮುಟ್ಟುಗೋಲು

ಆಗಸ್ಟ್ 5: ಎಸ್‌ಐಟಿಯಿಂದ ಆರೋಪ ಪಟ್ಟಿ ಸಲ್ಲಿಕೆ. ನಿಗಮದ ಪ್ರಧಾನ ವ್ಯವಸ್ಥಾಪಕ ಮತ್ತು ಇತರ ಅಧಿಕಾರಿಗಳಿಂದಲೇ ಕೃತ್ಯ ಎಂದ ಎಸ್‌ಐಟಿ

ಬ್ಯಾಂಕ್ ದೂರು, ಸಿಬಿಐ ತನಿಖೆ

2024ರ ಜೂನ್ 6ರಿಂದ 2025ರ ಜುಲೈ 1: ತಮ್ಮ ಬ್ಯಾಂಕ್‌ನ ಗ್ರಾಹಕರ ಖಾತೆಗಳಲ್ಲಿ ಇದ್ದ ₹89.62 ಕೋಟಿಯಷ್ಟು ಹಣವನ್ನು ಅಕ್ರಮವಾಗಿ ಬೇರೆ-ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ. ಇದರಲ್ಲಿ ಬ್ಯಾಂಕ್‌ನ ಅಧಿಕಾರಿಗಳು ಮತ್ತು ಕೆಲ ಅಪರಿಚಿತ ವ್ಯಕ್ತಿಗಳು ಭಾಗಿಯಾಗಿರುವ ಶಂಕೆ ಇದೆ. ಈ ಬಗ್ಗೆ ತನಿಖೆ ನಡೆಸಿ ಎಂದು ಯೂನಿಯನ್ ಬ್ಯಾಂಕ್‌ನ ಕೇಂದ್ರ ಕಚೇರಿಯಿಂದ ಸಿಬಿಐಗೆ ಪತ್ರ

ಯೂನಿಯನ್ ಬ್ಯಾಂಕ್‌ನ ದೂರಿನ ಆಧಾರದಲ್ಲಿ ಎಫ್‌ಐಆರ್ ದಾಖಲಿಸಿಕೊಂಡ ಸಿಬಿಐ, ಈ ಬಗ್ಗೆ ಆರ್‌ಬಿಐಗೆ ಮಾಹಿತಿ ನೀಡಿತ್ತು, ನಂತರ ಜಾರಿ ನಿರ್ದೇಶನಾಲಯಕ್ಕೂ (ಇ.ಡಿ) ಪತ್ರ ಬರೆಯಿತು. ಹತ್ತಾರು ಕೋಟಿ ರೂಪಾಯಿಗೂ ಹೆಚ್ಚು ಮೊತ್ತವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವ ಪ್ರಕರಣವಾದ್ದರಿಂದ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿಯೂ ತನಿಖೆಯ ಅಗತ್ಯವಿದೆ ಎಂದು ಇ.ಡಿಗೆ ತಿಳಿಸಿತ್ತು.

ಜತೆಗೆ, ಸಿಬಿಐ ತಾನೂ ತನಿಖೆ ಮುಂದುವರಿಸಿತ್ತು. ಆದರೆ ತನಿಖೆಯ ಅಂಶಗಳನ್ನು ಬಹಿರಂಗಪಡಿಸಿರಲಿಲ್ಲ. ಈಗ ರಾಜ್ಯ ಹೈಕೋರ್ಟ್‌ನ ಸೂಚನೆಯಂತೆ ತನಿಖೆಯ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ.

ಎಲ್ಲರ ಜಾಲಾಡಿದ ಇ.ಡಿ

ಜುಲೈ 10: ಸಿಬಿಐ ಬರೆದಿದ್ದ ಪತ್ರದ ಆಧಾರದಲ್ಲಿ ಪ್ರಕರಣ (ಇಸಿಐಆರ್) ದಾಖಲಿಸಿಕೊಂಡ ಇ.ಡಿ. ರಾಜ್ಯದ 20ಕ್ಕೂ ಹೆಚ್ಚು ಸ್ಥಳಗಳಲ್ಲಿ ದಾಳಿ. ಬಿ.ನಾಗೇಂದ್ರ ಮತ್ತು ಬಸನಗೌಡ ದದ್ದಲ್, ಅವರ ಆಪ್ತರು ಮತ್ತು ಸಂಬಂಧಿಕರ ಮನೆಗಳಲ್ಲಿ ತೀವ್ರ ವಿಚಾರಣೆ

ಜುಲೈ 12: ಇ.ಡಿ ಅಧಿಕಾರಿಗಳಿಂದ ಬಿ.ನಾಗೇಂದ್ರ ಅವರ ಬಂಧನ. ನಿಗಮದ ಖಾತೆಗಳಿಂದ ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದ್ದ ಹಣದಲ್ಲಿ ₹20 ಕೋಟಿಯಷ್ಟನ್ನು ಬಳ್ಳಾರಿ ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಬಳಕೆ ಮಾಡಿಕೊಳ್ಳಲಾಗಿದೆ ಎಂದು ಇ.ಡಿಯಿಂದ ಮಾಹಿತಿ

ಸೆಪ್ಟೆಂಬರ್ 9: ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಕೆ

ಅಕ್ಟೋಬರ್ 9: ಶಾಸಕ ಬಿ.ನಾಗೇಂದ್ರ, ನಿಗಮದ ನಿಧಿ ಅಕ್ರಮ ವರ್ಗಾವಣೆ ಹಗರಣದ ಸಂಚುಕೋರ. ಅವರ ಆಣತಿಯಂತೆಯೇ ನಿಗಮದ ಹಣವನ್ನು ಅಕ್ರಮವಾಗಿ ಹೈದರಾಬಾದ್‌ನ ಹಲವು ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಲಾಗಿತ್ತು' ಎಂದು ವಿಶೇಷ ನ್ಯಾಯಾಲಯಕ್ಕೆ ಮಾಹಿತಿ

ಅಕ್ಟೋಬರ್ 15: 'ನಿಗಮದಿಂದ ಅಕ್ರಮವಾಗಿ ವರ್ಗಾವಣೆ ಮಾಡಲಾಗಿದ್ದ ಹಣದಲ್ಲಿ ಬಳ್ಳಾರಿ ಲೋಕಸಭಾ ಕ್ಷೇತ್ರದ 7 ಲಕ್ಷಕ್ಕೂ ಹೆಚ್ಚು ಮತದಾರರಿಗೆ ₹14.80 ಕೋಟಿ ಹಂಚಲಾಗಿದೆ' ಎಂದು ವಿಶೇಷ ನ್ಯಾಯಾಲಯಕ್ಕೆ ಮಾಹಿತಿ

2025ರ ಜೂನ್ 11: ಕಾಂಗ್ರೆಸ್ ಸಂಸದ ಇ.ತುಕಾರಾಂ, ಶಾಸಕರಾದ ಬಿ.ನಾಗೇಂದ್ರ, ನಾರಾ ಭರತ್ ರಡ್ಡಿ, ಕಂಪ್ಲಿ ಗಣೇಶ್ ಮತ್ತು ಎನ್.ಟಿ.ಶ್ರೀನಿವಾಸ್ ಅವರ ಮನೆ ಹಾಗೂ ಕಚೇರಿಗಳು ಸೇರಿ ರಾಜ್ಯದ 18 ಕಡೆ ಇ.ಡಿ ಅಧಿಕಾರಿಗಳಿಂದ ಶೋಧ

ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ನಾಗೇಂದ್ರ



ಬಿ. ನಾಗೇಂದ್ರ

ಸರ್ಕಾರದ ವಿರುದ್ಧ ವಿಪಕ್ಷಗಳ ಟೀಕೆ ತೀವ್ರವಾದ ಬೆನ್ನಲ್ಲೇ, ಅಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ.ನಾಗೇಂದ್ರ ಅವರು 2024ರ ಜೂನ್ 6ರಂದು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಎಸ್‌ಐಟಿ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಿತು. ಇ.ಡಿ ಅವರನ್ನು ಜುಲೈ 12ರಂದು ಬಂಧಿಸಿತ್ತು. ಅ.14ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಜಾಮೀನು ನೀಡಿದ ನಂತರ ಅವರು ಬಿಡುಗಡೆಯಾದರು. ನಾಗೇಂದ್ರ ಅವರ ಆಪ್ತ ನೆಕ್ಕಂಟಿ ನಾಗರಾಜ್ ಅವರ ಖಾತೆಗಳಿಗೆ ನಿಗಮದ ಹಣ ವರ್ಗಾವಣೆಯಾಗಿದೆ ಎಂಬುದನ್ನು ಸಿಬಿಐ ಪತ್ತೆ ಮಾಡಿದೆ. ನಾಗೇಂದ್ರ, ನಿಗಮದ ವ್ಯವಸ್ಥಾಪಕರಾಗಿದ್ದ ಪದ್ಮನಾಭ, ಉದ್ಯಮಿ ಸತ್ಯನಾರಾಯಣ ನಡುವೆ ಮಾತುಕತೆಯನ್ನು ನೆಕ್ಕಂಟಿ ನಾಗರಾಜ್ ಏರ್ಪಡಿಸಿದ್ದ ಎಂಬುದು ತನಿಖೆಯಲ್ಲಿ ಪತ್ತೆಯಾಗಿತ್ತು.

ವರಿಷ್ಠರ ಭೇಟಿಗೆ ಬೊಮ್ಮಾಯಿ ಯತ್ನ

ಪ್ರಜಾವಾಣಿ ವಾರ್ತೆ



ನವದೆಹಲಿ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಕೆಲವೇ ದಿನಗಳಲ್ಲಿ ಚುನಾವಣಾ ಪ್ರಕ್ರಿಯೆ ನಡೆಯಲಿದೆ ಎಂದು ಸುದ್ದಿ ಹಬ್ಬಿರುವ ಹೊತ್ತಿನಲ್ಲಿ ಹಾವೇರಿ ಸಂಸದ ಬಸವರಾಜ ಬೊಮ್ಮಾಯಿ ಅವರು ವರಿಷ್ಠರ ಭೇಟಿಗೆ ಪ್ರಯತ್ನ ನಡೆಸಿದ್ದಾರೆ.

ಖಾಸಗಿ ಕೆಲಸದ ನಿಮಿತ್ತ ರಾಷ್ಟ್ರ ರಾಜಧಾನಿಗೆ ಬಂದಿರುವ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭೇಟಿಗೆ ಬುಧವಾರ ಕಾಲಾವಕಾಶ ಕೋರಿದರು. ನಡ್ಡಾ ಅವರು ಹಿಮಾಚಲ ಪ್ರದೇಶ ಹಾಗೂ ಸಿಂಗ್ ಅವರು ಬಿಹಾರ ಪ್ರವಾಸ ದಲ್ಲಿದ್ದಾರೆ. ಹೀಗಾಗಿ, ಅವರನ್ನು ಭೇಟಿ ಮಾಡಲು ಸಾಧ್ಯವಾಗಲಿಲ್ಲ.

ರಾಜ್ಯ ಘಟಕದ ಅಧ್ಯಕ್ಷರಾಗಿ ಮುಂದುವರಿಯಲು ಬಿ.ವೈ. ವಿಜಯೇಂದ್ರ ಎಲ್ಲ ರೀತಿಯ ಪ್ರಯತ್ನ ನಡೆಸಿದ್ದಾರೆ. ಕೇಂದ್ರ ಸಚಿವ ವಿ.ಸೋಮಣ್ಣ ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಶಾಸಕ ವಿ.ಸುನಿಲ್ ಕುಮಾರ್ ಅವರನ್ನು ಈ ಸ್ಥಾನಕ್ಕೆ ನೇಮಿಸಬೇಕೆಂಬುದು ತಟಸ್ಥ ಬಣದ ಲಾಬಿ. 'ಇನ್ನೊಂದೆಡೆ, ಮೂರು ಬಣಗಳ ತಿಕ್ಕಾಟ ತೀವ್ರವಾಗಿರುವುದರಿಂದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಮಣೆ ಹಾಕಬಹುದು ಎಂಬ ಚರ್ಚೆ ಇದ್ದು, ಇದನ್ನು ಜೋಶಿ ಅಲ್ಲಗಳೆದಿದ್ದಾರೆ.

ಲಿಂಗಾಯತ ಸಮುದಾಯದ ಪ್ರಬಲ ನಾಯಕ ಬಿ.ಎಸ್.ಯಡಿಯೂರಪ್ಪ ಮುನಿಸಿಗೆ ಕಾರಣವಾಗುವಂತಹ ಕಠಿಣ ತೀರ್ಮಾನ ವರಿಷ್ಠರು ತೆಗೆದುಕೊಳ್ಳುವ ಸಂಭವ ಕಡಿಮೆ ಎನ್ನಲಾಗುತ್ತಿದೆ.

ರಾಜ್ಯ ಘಟಕ ಅಧ್ಯಕ್ಷ ಸ್ಥಾನಕ್ಕೆ ಈ ವಾರಾಂತ್ಯದಲ್ಲಿ ಚುನಾವಣೆ ನಡೆಯಲಿದೆ ಎನ್ನಲಾಗಿತ್ತು. ರಾಜ್ಯದ ಚುನಾವಣಾ ಉಸ್ತುವಾರಿ ಶಿವರಾಜ ಸಿಂಗ್ ಚೌಹಾಣ್ ಅವರು ಇದೇ 3, 4ರಂದು ಜಮ್ಮು-ಕಾಶ್ಮೀರ ಪ್ರವಾಸದಲ್ಲಿರಲಿದ್ದಾರೆ. ಜತೆಗೆ, ಪ್ರಧಾನಿ ಮೋದಿ ವಿದೇಶ ಪ್ರವಾಸದಿಂದ ವಾಪಸಾಗುವುದು ಇದೇ 9ರಂದು. ಆ ಬಳಿಕವೇ ಚುನಾವಣಾ ಪ್ರಕ್ರಿಯೆ ನಡೆಯುವ ಸಾಧ್ಯತೆ ಇದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಜಿತೇಂದ್ರ ಕುಮಾರ್‌ಗೆ ಜೀವಣ್ಣ ಪದ್ಮಾವತಮ್ಮ ಪ್ರಶಸ್ತಿ



ಬೆಂಗಳೂರು: ಸಾಹಿತಿ ಮತ್ತು ಕರ್ನಾಟಕ ಜೈನ್ ಅಸೋಸಿಯೇಷನ್ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್ ಅವರಿಗೆ 2024ನೇ ಸಾಲಿನ 'ಕಂಬತ್ಹಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿ' ದೊರೆತಿದೆ. ₹25,000 ನಗದು ಹಾಗೂ ಪ್ರಶಸ್ತಿ ಫಲಕವನ್ನು ಪುರಸ್ಕಾರ ಒಳಗೊಂಡಿದೆ.

ಜೈನಧರ್ಮ ಮತ್ತು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಕೊಡುಗೆ ಹಾಗೂ ಸಮಾಜ ಸೇವೆ ಪರಿಗಣಿಸಿ ಜಿತೇಂದ್ರ ಕುಮಾರ್ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಬಿ.ಎಂ.ಶ್ರೀ ಪ್ರತಿಷ್ಠಾನ ತಿಳಿಸಿದೆ. ವೈ.ಎನ್. ಗುಂಡೂರಾವ್ ಮತ್ತು ಸ್ವಾಸ್ ಕೃಷ್ಣಮೂರ್ತಿ ಆಯ್ಕೆ ಸಮಿತಿಯಲ್ಲಿದ್ದ ಸದಸ್ಯರು. ಜುಲೈ 6ರಂದು ಎನ್. ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ ಸಭಾಂಗಣದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪದ್ಮರಾಜ್ ಎಸ್. ದೇಸಾಯಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಮುಖ್ಯಮಂತ್ರಿ ಗಾದಿಗಾಗಿ ಶಾಸಕರ ಖರೀದಿ ಸಾಧ್ಯತೆ'

ಪ್ರಜಾವಾಣಿ ವಾರ್ತೆ


ಬಿ.ವೈ. ವಿಜಯೇಂದ್ರ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಪಡೆದುಕೊಳ್ಳಲು ಭೂಮಿಕೆ ಸಿದ್ಧಪಡಿಸಲು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಕರ್ನಾಟಕಕ್ಕೆ ಬಂದಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಬದಲಾವಣೆ ಸಂಬಂಧ ಸುರ್ಜೇವಾಲಾ ಅವರು ಕಾಂಗ್ರೆಸ್ ಶಾಸಕರ ಅಭಿಪ್ರಾಯ ಪಡೆದುಕೊಂಡಿದ್ದಾರೆ. ಇದರಿಂದ ಮುಖ್ಯಮಂತ್ರಿ ಗಾದಿಗೆ ಪೈಪೋಟಿ ಹೆಚ್ಚಾಗಿದ್ದು, ಶಾಸಕರ ಖರೀದಿ ಸಾಧ್ಯತೆ ಹೆಚ್ಚಾಗಿದೆ ಎಂದರು.

ರಾಜ್ಯದಲ್ಲಿ ಆಡಳಿತಯಂತ್ರ ಕುಸಿದು ಹೋಗಿದೆ. ಭ್ರಷ್ಟಾಚಾರವೂ ಹೆಚ್ಚಾಗಿದೆ. ಹಗರಣಗಳ ಮೇಲೆ ಹಗರಣಗಳು ನಡೆಯುತ್ತಿವೆ. ಕಾಂಗ್ರೆಸ್ ಹೈಕಮಾಂಡ್‌ಗೆ ರಾಜ್ಯದ ಜನರ ಸಂಕಷ್ಟಗಳ ಬಗ್ಗೆ ಕಿಂಚಿತ್ತು ಕಾಳಜಿ ಇಲ್ಲವಾಗಿದೆ ಎಂದು ವಿಜಯೇಂದ್ರ ಹೇಳಿದರು.

ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಅವರು ಡಿ.ಕೆ.ಶಿವಕುಮಾರ್ ಅವರಿಗೆ 100 ಶಾಸಕರ ಬೆಂಬಲ ಇದೆ, ಅವರೇ ಮುಖ್ಯಮಂತ್ರಿ ಆಗಬೇಕು ಎಂದಿದ್ದಾರೆ. ಶಾಸಕರಾದ ಬಿ.ಆರ್. ಪಾಟೀಲ, ರಾಜು ಕಾಗೆ ಮತ್ತು ಇತರರು ಮುಖ್ಯಮಂತ್ರಿ ವಿರುದ್ಧ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಹೀಗಾಗಿ ಮುಖ್ಯಮಂತ್ರಿಯವರು ಶಾಸಕರ ವಿಶ್ವಾಸ ಕಳೆದುಕೊಂಡಿದ್ದಾರೆ. ಮುಖ್ಯಮಂತ್ರಿ ಆಕಾಂಕ್ಷಿಗಳಿಂದ ಶಾಸಕರ ಖರೀದಿ ನಡೆಯುವ ಸಾಧ್ಯತೆ ಇರುವುದರಿಂದ ರಾಜ್ಯಪಾಲರು ಈ ವಿದ್ಯಮಾನಗಳ ಬಗ್ಗೆ ಗಮನಹರಿಸಬೇಕು ಎಂದು ಮನವಿ ಮಾಡಿದರು.

ಹಾಸನಕ್ಕೆ ಮಾತ್ರ ಲಸಿಕೆ ನೀಡಲಾಗಿದೆಯೇ?: ಹಾಸನ ಜಿಲ್ಲೆಯಲ್ಲಿ ಹೃದಯಾಘಾತದಿಂದ 35ರಿಂದ 40 ಜನ ಸತ್ತಿದ್ದು, ಇದಕ್ಕೆ ಕೋವಿಡ್ ಲಸಿಕೆಯೂ ಕಾರಣ ಇರಬಹುದು ಎಂಬ ಮುಖ್ಯಮಂತ್ರಿಯವರ ಮಾತಿಗೆ ಪ್ರತಿಕ್ರಿಯಿಸಿದ ವಿಜಯೇಂದ್ರ, 'ಹಾಸನ ಜಿಲ್ಲೆಗೆ ಮಾತ್ರ ಕೋವಿಡ್ ಲಸಿಕೆ ನೀಡಲಾಗಿದೆಯೇ? ದೇಶದ ಕೋಟ್ಯಂತರ ಜನರಿಗೆ, ಜಗತ್ತಿನ ವಿವಿಧ ರಾಷ್ಟ್ರಗಳಿಗೆ ಕೋವಿಡ್ ಲಸಿಕೆ ರಫ್ತು ಮಾಡಲಾಗಿದೆ. ಮುಖ್ಯಮಂತ್ರಿಯವರದು ಬೇಜವಾಬ್ದಾರಿ ಹೇಳಿಕೆ. ಹಾಸನದ ಸಾವುಗಳ ಸಂಬಂಧ ರಾಜ್ಯ ಸರ್ಕಾರ ಎಚ್ಚೆತ್ತುಕೊಂಡು ಸಮರ್ಪಕ ತನಿಖೆ ನಡೆಸಬೇಕಾಗಿದೆ' ಎಂದು ಹೇಳಿದರು.

ಆರ್‌ಎಸ್‌ಎಸ್ ಅನ್ನು ನಿಷೇಧಿಸುತ್ತೇವೆ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಅದು ತಿರುಕನ ಕನಸು ಇದ್ದಂತೆ. ಕೇಂದ್ರದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುತ್ತದೆ ಎಂಬುದನ್ನು ಪ್ರಿಯಾಂಕ್ ಅವರ ತಂದೆ ಮಲ್ಲಿಕಾರ್ಜುನ ಖರ್ಗೆ ಅವರೇ ನಂಬುವುದಿಲ್ಲ. ರಾಹುಲ್ ಮತ್ತು ಸೋನಿಯಾಗಾಂಧಿ ಅವರೂ ನಂಬುವುದಿಲ್ಲ ಎಂದು ವಿಜಯೇಂದ್ರ ಹೇಳಿದರು.

'ನಮ್ಮ ಹೋರಾಟಕ್ಕೆ ಸಿಕ್ಕ ಗೆಲುವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವನ್ನು ಸಿಬಿಐಗೆ ವಹಿಸಬೇಕು ಎಂದು ನಾವು ಕೋರ್ಟ್ ಮೆಟ್ಟಿಲು ಹತ್ತಿದೆವು. ಅಂತಿಮವಾಗಿ ನಮ್ಮ ಹೋರಾಟಕ್ಕೆ ಗೆಲುವು ಸಿಕ್ಕಿದೆ' ಎಂದು ಅತೃಪ್ತರ ಬಣದಲ್ಲಿ ಗುರುತಿಸಿ ಕೊಂಡಿರುವ ಬಿಜೆಪಿ ನಾಯಕ ಕುಮಾರ್ ಬಂಗಾರಪ್ಪ ಹೇಳಿದ್ದಾರೆ.


ಕುಮಾರ್ ಬಂಗಾರಪ್ಪ

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಹಗರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಬಿಜೆಪಿ ಪರವಾಗಿ ಅರವಿಂದ ಲಿಂಬಾವಳಿ, ರಮೇಶ ಜಾರಕಿಹೊಳಿ, ಬಸನಗೌಡ ಪಾಟೀಲ ಯತ್ನಾಳ ಮತ್ತು ನಾನು ಸಹಿ ಮಾಡಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೆವು. ನಮ್ಮ ಹೋರಾಟಕ್ಕೆ ನ್ಯಾಯಾಲಯದ ಮನ್ನಣೆ ಸಿಕ್ಕಿದೆ' ಎಂದು ಅವರು ತಿಳಿಸಿದರು.

'ಪ್ರಕರಣವನ್ನು ಸಿಬಿಐಗೆ ಕೊಟ್ಟತಕ್ಷಣ ಎಲ್ಲವೂ ಮುಗಿದಿಲ್ಲ. ಈಗ ಆರಂಭ ಅಷ್ಟೇ, ವಾಲ್ಮೀಕಿ ಸಮುದಾಯಕ್ಕೆ ಸೇರಬೇಕಾದ ಜನರ ತೆರಿಗೆ ಹಣ ಮತ್ತು ದುಡಿಮೆಯ ಹಣ ದುರುಪಯೋಗ ಆಗಿದೆ. ನಿಗಮದ ಹಣ ಚುನಾವಣೆಗೆ ಬಳಕೆಯಾಗಿದೆ. ದುರುಪಯೋಗ ಮಾಡಿರುವ ಎಲ್ಲರಿಗೂ ತಕ್ಕ ಶಾಸ್ತಿ ಆಗಬೇಕು' ಎಂದರು.

'ಈ ಪ್ರಕರಣವನ್ನು ಮತ್ತಷ್ಟು ಉನ್ನತ ಮಟ್ಟಕ್ಕೆ ಒಯ್ಯಲು ಸಾಧ್ಯವಿತ್ತು. ಪಕ್ಷದೊಳಗಿನ ಗೊಂದಲದಿಂದ ಸಾಧ್ಯ ವಾಗಲಿಲ್ಲ' ಎಂದು ಹೇಳಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವನ್ನು ಸಿಬಿಐಗೆ ನೀಡಿರುವುದರಿಂದ ಬಿಜೆಪಿ ಹೋರಾಟಕ್ಕೆ ಜಯ ಸಿಕ್ಕಿದೆ. ಕೋರ್ಟ್ ನಮಗೆ ನಿಜವಾದ ನ್ಯಾಯ ನೀಡಿದೆ

ಆರ್.ಅಶೋಕ
ವಿರೋಧ ಪಕ್ಷದ ನಾಯಕ

ಸರ್ಕಾರಕ್ಕೆ ಕಪಾಳ ಮೋಕ್ಷ: ಶ್ರೀರಾಮುಲು

'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಕಪಾಳ ಮೋಕ್ಷ ಮಾಡಿದೆ' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ತಿಳಿಸಿದ್ದಾರೆ.

ಈ ಹಗರಣದ ತನಿಖೆಯನ್ನು ಹೈಕೋರ್ಟ್ ಸಿಬಿಐಗೆ ಒಪ್ಪಿಸಿದೆ. ಎಸ್‌ಐಟಿ ರಚನೆ ಮೂಲಕ ಸರ್ಕಾರ ಕ್ಲೀನ್ ಚಿಟ್ ಕೊಡುವ ಮೂಲಕ ಆಪಾದಿತರನ್ನು ರಕ್ಷಿಸಲು ಮುಂದಾಗಿತ್ತು' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಭ್ರಷ್ಟಾಚಾರ ನಡೆಸಿ, ತೆರಿಗೆದಾರರ ಹಣವನ್ನು ಚುನಾವಣೆಗೆ ಬಳಸಿಕೊಂಡಿದ್ದರು. ಈ ಹಗರಣಕ್ಕೆ ಹಣಕಾಸು ಇಲಾಖೆ ನಿರ್ವಹಿಸುವ ಮುಖ್ಯಮಂತ್ರಿಯವರೇ ನೇರ ಜವಾಬ್ದಾರರು. ಬಳ್ಳಾರಿ ಸಂಸದ ತುಕಾರಾಂ, ಶಾಸಕರಾದ ನಾಗೇಂದ್ರ, ಗಣೇಶ್, ಶ್ರೀನಿವಾಸ್, ನಾರಾ ಭರತ್ ರೆಡ್ಡಿ ಅವರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿದರು.

ಹೃದ್ರೋಗ ಪತ್ತೆಗೆ 7.49 ಲಕ್ಷ ಇಸಿಜಿ

ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆಯಡಿ ಪರೀಕ್ಷೆ • 7 ಸಾವಿರಕ್ಕೂ ಅಧಿಕ ತೀವ್ರ ಹೃದಯಾಘಾತ ಪ್ರಕರಣ ಪತ್ತೆ

• ವರುಣ ಹೆಗಡೆ

ಬೆಂಗಳೂರು: ಚಿಕ್ಕ ವಯಸ್ಸಿನಲ್ಲಿಯೇ ಹೃದಯಾಘಾತಕ್ಕೆ ಒಳಗಾಗಿ ಮೃತಪಡುತ್ತಿರುವ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚುತ್ತಿರುವ ಕಾರಣ 'ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆಯಡಿ' ಹೃದ್ರೋಗ ಪತ್ತೆಗೆ ಆದ್ಯತೆ ನೀಡಿದ್ದು, ಎರಡು ವರ್ಷಗಳಲ್ಲಿ 7.49 ಲಕ್ಷ ಮಂದಿಗೆ ಇಸಿಜಿ ಪರೀಕ್ಷೆ (ಎಲೆಕ್ಟ್ರೋಕಾರ್ಡಿಯೋಗ್ರಾಮ್) ಮಾಡಲಾಗಿದೆ.

ವ್ಯಕ್ತಿಗೆ ಹೃದಯಾಘಾತ ಸಂಭವಿಸಿದ ಒಂದು ಗಂಟೆ ನಿರ್ಣಾಯಕವಾಗಿರುತ್ತದೆ. ಆದ್ದರಿಂದ ಈ ಅವಧಿಯಲ್ಲಿ ತಾಲ್ಲೂಕು ಮಟ್ಟದಲ್ಲಿಯೇ ಚಿಕಿತ್ಸೆ ಒದಗಿಸುವ ಉದ್ದೇಶದಿಂದ 'ಸ್ಟೆಮಿ' (ಹೃದಯ ಸ್ನಾಯುವಿನ ಸೋಂಕು ನಿವಾರಣೆ) ಕಾರ್ಯಕ್ರಮದಡಿ ಈ ಯೋಜನೆ ಪ್ರಾರಂಭಿಸಲಾಗಿದೆ. ಹಾಸನ ಸೇರಿದಂತೆ ರಾಜ್ಯದ ವಿವಿಧೆಡೆ ಹೃದಯಾಘಾತದಿಂದ ಮೃತಪಡುತ್ತಿರುವ ಪ್ರಕರಣಗಳು ವರದಿಯಾಗುತ್ತಿರುವ ಕಾರಣ, ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಹೃದ್ರೋಗ ಸಮಸ್ಯೆ ಇರುವವರಿಗೆ ಆಯ್ದ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಇಸಿಜಿ ನಡೆಸಿ, ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ತೃತೀಯ ಹಂತದ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗುತ್ತಿದೆ.



ಹೃದಯಾಘಾತದಿಂದ ಸಂಭವಿಸುವ ಸಾವು ತಡೆಗೆ ಯೋಜನೆ ಸಹಕಾರಿಯಾಗಿದೆ. ಹೃದಯ, ಎದೆ ನೋವಿನ ಸಂಬಂಧ ತಾಲ್ಲೂಕು ಆಸ್ಪತ್ರೆಗೆ ಬಂದವರಿಗೆ ಇಸಿಜಿ ನಡೆಸಿ, ಚಿಕಿತ್ಸೆ ಒದಗಿಸಲಾಗುತ್ತಿದೆ
ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ



ಹೃದಯಾಘಾತದ ಬಗ್ಗೆ ಅನಗತ್ಯವಾಗಿ ಗೊಂದಲಕ್ಕೆ ಒಳಗಾಗಬಾರದು. ಉತ್ತಮ ಜೀವನಶೈಲಿ ಅಳವಡಿಸಿಕೊಳ್ಳಬೇಕು. ಹಾಸನದ ಪ್ರಕರಣಗಳ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ
ಡಾ.ಕೆ.ಎಸ್.ರವೀಂದ್ರನಾಥ್, ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ


ಈ ಯೋಜನೆಯಡಿ 7,239 ತೀವ್ರ ಹೃದಯಾಘಾತ ಪ್ರಕರಣಗಳನ್ನು ಪತ್ತೆ ಮಾಡಿ, ಚಿಕಿತ್ಸೆ ನೀಡಲಾಗಿದೆ. ಹೃದಯಾಘಾತದಿಂದ ಸಂಭವಿಸುತ್ತಿರುವ ಮರಣ ಪ್ರಕರಣಗಳನ್ನು ತಡೆಯುವುದು ಯೋಜನೆಯ ಉದ್ದೇಶವಾಗಿದೆ.

ಹೃದಯ ಸ್ತಂಭನದಿಂದ ಮೃತಪಟ್ಟ ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ 2023ರ ಮಾರ್ಚ್‌ನಲ್ಲಿ ಮೊದಲ ಹಂತದಲ್ಲಿ ಯೋಜನೆಯನ್ನು ಪ್ರಾರಂಭಿಸಲಾಗಿತ್ತು. 2024ರ ಮಾರ್ಚ್‌ನಲ್ಲಿ ಎರಡನೇ ಹಂತದಲ್ಲಿ ರಾಜ್ಯದಾದ್ಯಂತ ಯೋಜನೆಯನ್ನು ವಿಸ್ತರಿಸಲಾಗಿದೆ.

ಹಬ್ ಮತ್ತು ಸ್ಪೋಕ್ ಮಾದರಿ: ಯೋಜನೆಯಡಿ ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗಳ ಜತೆಗೆ ಖಾಸಗಿ ಆಸ್ಪತ್ರೆಗಳನ್ನೂ ಒಳಗೊಂಡ ಜಾಲವನ್ನು ರೂಪಿಸಲಾಗಿದೆ. 'ಹಬ್ ಮತ್ತು ಸ್ಪೋಕ್' ಮಾದರಿಯಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಹೃದಯಾಘಾತಕ್ಕೆ ಒಳಗಾದವರಿಗೆ ಯೋಜನೆಯಡಿ ನೋಂದಾಯಿತ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಒದಗಿಸಿ, ಹೃದಯ ನಾಳದ ಬ್ಲಾಕ್ ತೆರವುಗೊಳಿಸಲು ಚುಚ್ಚುಮದ್ದನ್ನು ನೀಡಲಾಗುತ್ತಿದೆ. ಬಳಿಕ ಕ್ಯಾಥ್‌ಲ್ಯಾಬ್ ಇರುವ ಆಸ್ಪತ್ರೆಗಳಿಗೆ ಕಳಿಸಲಾಗುತ್ತಿದೆ. ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಬೆಂಗಳೂರು, ಮೈಸೂರು ಹಾಗೂ ಕಲಬುರಗಿ ಘಟಕವನ್ನು ಕಾರ್ಯಾಚರಣೆಯ ಕೇಂದ್ರಗಳನ್ನಾಗಿ ಬಳಸಿಕೊಂಡು, ಸೇವೆ ನೀಡಲಾಗುತ್ತಿದೆ.

'ವೇಗದ ಚಿಕಿತ್ಸೆಗೆ ಯೋಜನೆಯಡಿ ಆಂಬುಲೆನ್ಸ್ ಹಾಗೂ ಟೆಲಿ ಐಸಿಯು ಬಳಸಿಕೊಳ್ಳಲಾಗುತ್ತಿದೆ. ತಾಲ್ಲೂಕು, ಜಿಲ್ಲಾ ಆಸ್ಪತ್ರೆಗಳಲ್ಲಿ ನಡೆಸುವ ಇಸಿಜಿಯನ್ನು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ನೆರವಿನಿಂದ ಪರಿಶೀಲಿಸಿ, ಅಪಾಯ ಇದ್ದಲ್ಲಿ ತಜ್ಞ ವೈದ್ಯರಿಗೆ ಶಿಫಾರಸು ಮಾಡಲಾಗುತ್ತದೆ. ತಜ್ಞ ವೈದ್ಯರು ರೋಗಿಯ ಚಿಕಿತ್ಸೆ ಬಗ್ಗೆ ನಿರ್ಧರಿಸುತ್ತಾರೆ. ಈ ಪ್ರಕ್ರಿಯೆ ಕೇವಲ ಹತ್ತು ನಿಮಿಷಗಳಲ್ಲಿ ನಡೆಯಲಿದೆ' ಎಂದು ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

817 ಮಂದಿಗೆ ನೆರವಾದ ಚುಚ್ಚುಮದ್ದು



ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆಯಡಿ 70 ತಾಲ್ಲೂಕು ಆಸ್ಪತ್ರೆಗಳು ಹಾಗೂ 16 ಜಿಲ್ಲಾ ಆಸ್ಪತ್ರೆಗಳಲ್ಲಿ ಹೃದಯ ಸಂಬಂಧಿ ಸಮಸ್ಯೆಗೆ ಚಿಕಿತ್ಸೆ ನೀಡಲಾಗಿದೆ. ಈ ಆಸ್ಪತ್ರೆಗಳಲ್ಲಿ 'ಸ್ಟೆಮಿ ಕಿಟ್'ಗಳನ್ನು ಅಳವಡಿಸಲಾಗಿದೆ. ತೀವ್ರ ಹೃದಯಾಘಾತ ಪ್ರಕರಣಗಳಲ್ಲಿ ವ್ಯಕ್ತಿಯನ್ನು ಪ್ರಾಣಾಪಾಯದಿಂದ ಪಾರು ಮಾಡಲು ಈ ಆಸ್ಪತ್ರೆಗಳಲ್ಲಿ 'ಟೆನೆಕ್ಟ್ ಪ್ಲಸ್' ಚುಚ್ಚುಮದ್ದುಗಳನ್ನು ಒದಗಿಸಲಾಗುತ್ತಿದೆ. ಎರಡು ವರ್ಷಗಳಲ್ಲಿ ಈ ಚುಚ್ಚುಮದ್ದಿನ ನೆರವಿನಿಂದ 817 ಮಂದಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಚುಚ್ಚುಮದ್ದಿನ ಒಂದು ಬಾಟಲಿಗೆ ₹30 ಸಾವಿರ ದರ ಇದೆ. ಹೃದಯಾಘಾತಕ್ಕೆ ಒಳಗಾದವರಿಗೆ ಇಸಿಜಿ ಪರೀಕ್ಷೆ ನಡೆಸಿ, ಚುಚ್ಚುಮದ್ದು ಅಗತ್ಯವಿದ್ದಲ್ಲಿ ಉಚಿತವಾಗಿ ಒದಗಿಸಲಾಗುತ್ತಿದೆ.

ಹೃದಯಾಘಾತ: ಪರಿಶೀಲನೆ ಆರಂಭಿಸಿದ ವೈದ್ಯರು

ಹಾಸನ: ಜಿಲ್ಲೆಯಲ್ಲಿ ಹೃದಯಾಘಾತದಿಂದ ಸಂಭವಿಸುತ್ತಿರುವ ಸಾವಿನ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಅನಿಲ್ ಎಚ್. ನೇತೃತ್ವದ ತಂಡ ಪರಿಶೀಲನೆ ಆರಂಭಿಸಿದೆ.

ಮಂಗಳವಾರದಿಂದ ಮೃತರ ಮನೆಗಳಿಗೆ ಭೇಟಿ ನೀಡುತ್ತಿರುವ ಅಧಿಕಾರಿಗಳು ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಹೃದಯಾಘಾತದಿಂದ ನಿಧನರಾದ ತಾಲ್ಲೂಕಿನ ಚಿಕ್ಕಕೊಂಡಗುಳ ಗ್ರಾಮದ ಸತೀಶ್ ಅವರ ಮನೆಗೆ ಭೇಟಿ ನೀಡಿದ ತಂಡ, ಸತೀಶ್ ಅವರ ಪತ್ನಿ, ತಾಯಿಯಿಂದ ಮಾಹಿತಿ ಪಡೆಯಿತು.

ಆರ್‌ಸಿಎಚ್ ಅಧಿಕಾರಿ ಡಾ.ಚೇತನ್, ಔಷಧ ವಿಭಾಗದ ಡಾ.ಬಿಂದು ಅವರನ್ನು ಒಳಗೊಂಡ ತಂಡ, ಸತೀಶ್ ಅವರ ಆರೋಗ್ಯ ಸ್ಥಿತಿ ಹೇಗಿತ್ತು, ಆಹಾರ ಪದ್ಧತಿ ಹೇಗಿತ್ತು ಎಂಬಿತ್ಯಾದಿ ವಿವರಗಳನ್ನು ಕಲೆ ಹಾಕಿದೆ.

'ಇದುವರೆಗಿನ ಹೃದಯಾಘಾತದ ಸಾವುಗಳ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಎಲ್ಲರ ಮನೆಗೆ ಭೇಟಿ ನೀಡಿ, ಮೃತರಿಗೆ ಸಂಬಂಧಿಸಿದ ವಿವರಗಳನ್ನು ಸಂಗ್ರಹಿಸಲಾಗುವುದು. ನಂತರ ಸಾವಿಗೆ ನಿಖರ ಕಾರಣ ಪತ್ತೆ ಮಾಡಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು' ಎಂದು ಡಿಎಚ್‌ಒ ಡಾ.ಅನಿಲ್ ತಿಳಿಸಿದ್ದಾರೆ.

ರೈತ ಸಾವು: ಹಾಸನ ತಾಲ್ಲೂಕಿನ ಮುಟ್ಟನಹಳ್ಳಿ ಗ್ರಾಮದ ರೈತ ಸಣ್ಣಪ್ಪಶೆಟ್ಟಿ (52) ಬುಧವಾರ ಹೃದಯಾಘಾತದಿಂದ ಮೃತಪಟ್ಟರು.

ಸುದ್ದಿ 2 ನಿಮಿಷ

ಎಚ್‌ಸಿಜಿ ವೈದ್ಯಕೀಯ ಪ್ರಯೋಗ ಪರಿಶೀಲನೆಗೆ ಸಮಿತಿ

ಬೆಂಗಳೂರು: ನಗರದ ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್‌ನಲ್ಲಿ (ಎಚ್‌ಸಿಜಿ) ನಿಯಮ ಬಾಹಿರ ವೈದ್ಯಕೀಯ ಪ್ರಯೋಗದ ಆರೋಪಕ್ಕೆ ಸಂಬಂಧಿಸಿದಂತೆ, ಪರಿಶೀಲನೆ ನಡೆಸಿ ವರದಿ ನೀಡಲು ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯು (ಸಿಡಿಎಸ್‌ಸಿಒ) ತಜ್ಞರ ಸಮಿತಿ ರಚಿಸಿ ಆದೇಶ ಹೊರಡಿಸಿದೆ.

ಕೇಂದ್ರ ಸಹಾಯಕ ಔಷಧ ನಿಯಂತ್ರಕ ಡಾ. ಬಿಕಾಶ್ ರಾಯ್, ಸಿಡಿಎಸ್‌ಸಿಒ ಬೆಂಗಳೂರು ವಲಯ ಕಚೇರಿ ಔಷಧ ನಿರೀಕ್ಷಕಿ ಸುನಿತಾ ಜೋಶಿ, ಸಿಡಿಎಸ್‌ಸಿಒ ನವದೆಹಲಿಯ ಪ್ರಧಾನ ಕಚೇರಿ ಅಧಿಕಾರಿಗಳು ಮತ್ತು ವಿಷಯ ತಜ್ಞರನ್ನು ಸಮಿತಿ ಒಳಗೊಂಡಿದೆ. ಈ ಸಮಿತಿಯು ಇದೇ 3 ರಿಂದ 5ರವರೆಗೆ ಎಚ್‌ಸಿಜಿ ಆಸ್ಪತ್ರೆಯಲ್ಲಿ ಪರಿಶೀಲನೆ ನಡೆಸಲಿದೆ.

'ಎಚ್‌ಸಿಜಿ ಆಸ್ಪತ್ರೆಯಲ್ಲಿ ನಿಯಮ ಬಾಹಿರ ವೈದ್ಯಕೀಯ ಪ್ರಯೋಗ ನಡೆಸಲಾಗುತ್ತಿದೆ' ಎಂದು ಎಚ್‌ಸಿಜಿಯ ಸಾಂಸ್ಥಿಕ ನೀತಿ ಸಮಿತಿಯ ಮುಖ್ಯಸ್ಥರಾಗಿದ್ದ ನಿವೃತ್ತ ನ್ಯಾಯಮೂರ್ತಿ ಪಿ.ಕೃಷ್ಣ ಭಟ್ ಅವರು ಆರೋಪಿಸಿ, ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈ ಆರೋಪದ ಅನುಸಾರ ಸೂಕ್ತ ತನಿಖೆ ನಡೆಸುವಂತೆ ಆರೋಗ್ಯ ಇಲಾಖೆ ಆಯುಕ್ತರು ಭಾರತೀಯ ಪ್ರಧಾನ ಔಷಧ ನಿಯಂತ್ರಕರಿಗೆ ಪತ್ರ ಬರೆದು, ಮನವಿ ಮಾಡಿದ್ದರು.

ಹೃದಯ ತಪಾಸಣೆಗೆ ದಾಂಗುಡಿ



ಕಲಬುರಗಿ: ಹಾಸನದಲ್ಲಿ ಹೃದಯಾಘಾತ ಪ್ರಕರಣಗಳು ಹೆಚ್ಚಾಗಿವೆ ಎಂಬ ಸುದ್ದಿಯ ಬೆನ್ನಲ್ಲೇ, ಇಲ್ಲಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಹೃದಯ ಸಂಬಂಧಿತ ತಪಾಸಣೆಗಾಗಿ ಬರುವವರ ಸಂಖ್ಯೆಯಲ್ಲಿ ಭಾರಿ ಏರಿಕೆಯಾಗಿದೆ.

'ಮಾಧ್ಯಮಗಳಲ್ಲಿನ ಸುದ್ದಿ ನೋಡಿದ ಜನರು ಗ್ಯಾಸ್ಟ್ರಿಕ್‌ನಿಂದ ಎದೆಯುರಿಯಾದರೂ ಆತಂಕದಿಂದ ಆಸ್ಪತ್ರೆಗೆ ಬರುತ್ತಿದ್ದಾರೆ. ಎರಡು ವಾರಗಳ ಹಿಂದೆ ನಿತ್ಯದ ಒಪಿಡಿ ಸಂಖ್ಯೆ 400ರ ಆಸುಪಾಸಿನಲ್ಲಿತ್ತು. ಈಗ 650ರ ಗಡಿ ದಾಟಿದೆ' ಎಂದು ಹೃದ್ರೋಗ ತಜ್ಞ, ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ (ಪ್ರಭಾರ) ಡಾ.ವೀರೇಶ ಪಾಟೀಲ ಹೇಳಿದರು.

ಒಪಿಡಿ ಸಂಖ್ಯೆಯಲ್ಲಿ ಏರಿಕೆಯಾದಂತೆ ಹೃದಯ ಸಂಬಂಧಿತ ಇಸಿಜಿ, 2ಡಿ ಇಕೊ, ಟಿಎಂಟಿ, ಬಯೋ ಕೆಮಿಸ್ಟ್ರಿ, ಪ್ಯಾಥಾಲಜಿ ತಪಾಸಣೆಗೆ ಒಳಗಾಗುವರ ಸಂಖ್ಯೆಯೂ ಹೆಚ್ಚಾಗಿದೆ. ಐದೂವರೆ ತಿಂಗಳಲ್ಲಿ 2,196 ಜನರು ಹೃದಯಾಘಾತಕ್ಕೆ ಒಳಗಾಗಿ ಜಯದೇವ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರಲ್ಲಿ 104 ಮಂದಿ ಮೃತಪಟ್ಟಿದ್ದಾರೆ.

ರೈತ ಹೋರಾಟಕ್ಕೆ ಹೊಟ್ಟೆಗೆ ಅನ್ನ ತಿನ್ನುವವರ ಹೋರಾಟ ಇದು: ರಹಮತ್ ತರೀಕೆರೆ

ಸಾಹಿತಿಗಳು, ಸಿನಿಮಾ ಕಲಾವಿದರ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿಯಲ್ಲಿ 13 ಹಳ್ಳಿಗಳ ರೈತರ 1,777 ಎಕರೆ ಜಮೀನು ಸ್ವಾಧೀನ ಮಾಡಿಕೊಳ್ಳುವುದನ್ನು ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟಕ್ಕೆ ಬುಧವಾರ ಸಾಹಿತಿಗಳು, ಕನ್ನಡ ಚಿತ್ರರಂಗದ ಕಲಾವಿದರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಸಾಹಿತಿ ರಹಮತ್ ತರೀಕೆರೆ ಮಾತನಾಡಿ, 'ರೈತರು ಭೂಮಿ ಕೊಡುವುದಿಲ್ಲ ಎಂದಾಗ ಸರ್ಕಾರ ಕಿತ್ತುಕೊಳ್ಳುವ ಕೆಲಸ ಮಾಡಬಾರದು. ಇದು ರೈತರ ಹೋರಾಟ ಮಾತ್ರವಲ್ಲ, ಎಲ್ಲ ಕನ್ನಡಿಗರ, ಹೊಟ್ಟೆಗೆ ಅನ್ನ ತಿನ್ನುವವರ ಹೋರಾಟ' ಎಂದು ಸಾಹಿತಿ ರಹಮತ್ ತರೀಕೆರೆ ತಿಳಿಸಿದರು.

ರೈತರು ಈಗಾಗಲೇ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸರ್ಕಾರಗಳು ಈ ಬಗ್ಗೆ ಚರ್ಚೆ ಮಾಡದೇ, ಭೂಮಿ ಹೇಗೆ ಕಿತ್ತುಕೊಳ್ಳಬೇಕೆಂದು ಯೋಚಿಸುತ್ತಿದೆ. ಜುಲೈ 4ರಂದು ರೈತರ ಪರವಾಗಿ ತೀರ್ಮಾನವಾಗಬೇಕು ಎಂದು ಆಗ್ರಹಿಸಿದರು.

ನಟ ಕಿಶೋರ್ ಕುಮಾರ್ ಮಾತನಾಡಿ, 'ಅಭಿವೃದ್ಧಿ ಹೆಸರಲ್ಲಿ ರಿಯಲ್ ಎಸ್ಟೇಟ್ ದಂಧೆ ನಡೆಯುತ್ತಿದೆ. ನಮ್ಮ ಅನ್ನದ ಮೇಲೆ ದಾಳಿ ನಡೆಯುತ್ತಿದೆ. ಸಣ್ಣ ರೈತರ ಕೈಯಲ್ಲಿರುವ ಭೂಮಿಯನ್ನು ಕಿತ್ತುಕೊಳ್ಳಲಾಗುತ್ತಿದೆ. ರೈತರು ಹೊಲ, ಗದ್ದೆಗಳಲ್ಲಿ ಮಾಡುವ ಕೌಶಲಪೂರ್ಣ ಕೆಲಸಗಳನ್ನು ಕಾರ್ಖಾನೆಗಳಿಂದ ಕೊಡಲು ಸಾಧ್ಯವಿಲ್ಲ. ಕಾರ್ಖಾನೆಗಳಲ್ಲಿ ಅನ್ನ ಬೆಳೆಯಲು ಸಾಧ್ಯವಿಲ್ಲ' ಎಂದು ಹೇಳಿದರು.

ಚಿತ್ರ ಸಾಹಿತಿ ಕವಿರಾಜ್ ಮಾತನಾಡಿ, 'ರೈತರ ಭೂಮಿಯನ್ನು ಕಿತ್ತುಕೊಳ್ಳುವ ಮೂಲಕ ಇಡೀ ಸಮಾಜದ ಅನ್ನವನ್ನು ಕಸಿಯಲಾಗುತ್ತಿದೆ. ಕಾರ್ಪೊರೇಟ್ ಲಾಬಿ ನಮ್ಮನ್ನು ಆಳುತ್ತಿದೆ. ಇದರ ವಿರುದ್ಧ ಸಮಗ್ರ ಹೋರಾಟ ಮಾಡಬೇಕು' ಎಂದರು.

ಚಿತ್ರ ನಿರ್ದೇಶಕರ ನಂಜುಂಡೇಗೌಡ ಮಾತನಾಡಿ, 'ಅನ್ನ ನೀಡುವ ರೈತರ ಹೋರಾಟವನ್ನು ಚಿತ್ರರಂಗ ಸದಾ ಬೆಂಬಲಿಸುತ್ತದೆ. ನೆಲ, ಜಲ, ಆಹಾರ, ಭಾಷೆ ಮೇಲಿನ ದಾಳಿಗಳನ್ನು ಸಹಿಸುವುದಿಲ್ಲ' ಎಂದು ತಿಳಿಸಿದರು.

ನಿರ್ದೇಶಕರಾದ ರಾಜೇಂದ್ರಸಿಂಗ್ ಬಾಬು, ಟಿ.ಎನ್. ಸೀತಾರಾಮ್, ನಾಗತೀಹಳ್ಳಿ ಚಂದ್ರಶೇಖರ್, ವಿಜಯಲಕ್ಷ್ಮಿ ಸಿಂಗ್, ಗಿರೀಶ್ ಕಾಸರವಳ್ಳಿ, ಪಿ.ಶೇಷಾದ್ರಿ, ಬಹುಭಾಷಾ ನಟ ಪ್ರಕಾಶ್ ರಾಜ್, ನಟಿ ಅಕ್ಷತಾ ಪಾಂಡವಪುರ ಹೋರಾಟದಲ್ಲಿ ಪಾಲ್ಗೊಂಡರು.

ಹೋರಾಟಗಾರರಾದ ಶಿವಸುಂದರ್, ಸಾಹಿತಿ ಕೆ.ಪಿ. ಸುರೇಶ್, ವೀರಸಂಗಯ್ಯ, ಬಿ.ಟಿ. ಲಲಿತಾ ನಾಯಕ್, ನೂರ್ ಶ್ರೀಧರ್, ವಿ. ನಾಗರಾಜ್, ಗುರುಪ್ರಸಾದ್ ಕೆರೆಗೋಡು, ಇಂದೂಧರ ಹೊನ್ನಾಪುರ, ಬಡಗಲಪುರ ನಾಗೇಂದ್ರ, ಕೆ.ವಿ. ಭಟ್ ಉಪಸ್ಥಿತರಿದ್ದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುತ್ತಿರುವ 'ದೇವನಹಳ್ಳಿಯಲ್ಲಿ ನಮ್ಮನ್ನು ಬದುಕಲು ಬಿಡಿ' ಪ್ರತಿಭಟನೆಯಲ್ಲಿ ನಡೆಯಿತು

ಉಪವಾಸ ಸತ್ಯಾಗ್ರಹ

ಸಂಯುಕ್ತ ಹೋರಾಟ-ಕರ್ನಾಟಕದ ಡಿ.ಎಚ್. ಪೂಜಾರಿ, ಯಶವಂತ, ಚುಕ್ಕಿ ನಂಜುಂಡಸ್ವಾಮಿ, ಎಸ್.ವರಲಕ್ಷ್ಮೀ, ದೇವಿ, ಲಕ್ಷ್ಮಣ ಮಂಡಲಗೇರಾ, ಮಲ್ಲಿಗೆ ಸಿರಿಮನೆ ಮತ್ತು ಪ್ರಭಾ ಬೆಳವಂಗಲ ಬುಧವಾರ ಉಪವಾಸ ಸತ್ಯಾಗ್ರಹ ನಡೆಸಿದರು.

ಚಿಟಿಕೆ ಸುದ್ದಿ

ಬಿಡಿಎಯಿಂದ ಒತ್ತುವರಿ ತೆರವು

ಬೆಂಗಳೂರು: ಎಚ್‌ಆರ್‌ಬಿಆರ್ ಬಡಾವಣೆ ಹಾಗೂ ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯಲ್ಲಿನ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿ, ಆಸ್ತಿಯನ್ನು ಬಿಡಿಎ ಮರುವಶಪಡಿಸಿಕೊಂಡಿದೆ.

ಬಾಣಸವಾಡಿ ಗ್ರಾಮದ ಸರ್ವೆ ನಂ. 286/2, ಎಚ್‌ಆರ್‌ಬಿಆರ್ ಬಡಾವಣೆ, 1ನೇ ಬ್ಲಾಕ್‌ನಲ್ಲಿ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಿ, ಪ್ರಾಧಿಕಾರಕ್ಕೆ ಸೇರಿದ ಸುಮಾರು ₹25 ಕೋಟಿ ಮೌಲ್ಯದ 18 ಗುಂಟೆ ಪ್ರದೇಶವನ್ನು ವಶಕ್ಕೆ ಪಡೆಯಲಾಗಿದೆ.

ವಿಶ್ವೇಶ್ವರಯ್ಯ ಬಡಾವಣೆಯ 6ನೇ ಬ್ಲಾಕ್‌ನಲ್ಲಿ ಯಶವಂತಪುರ ಹೋಬಳಿ, ಉಲ್ಲಾಳು ಗ್ರಾಮದ ಸರ್ವೆ ನಂ. 27/1ರಲ್ಲಿ ಸುಮಾರು 6,400 ಚದರ ಅಡಿ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಶೆಡ್ ತೆರವುಗೊಳಿಸಿ, ಸುಮಾರು ₹7 ಕೋಟಿ ಮೌಲ್ಯದ ಭೂಮಿಯನ್ನು ಬಿಡಿಎ ಸಿಬ್ಬಂದಿ ಬುಧವಾರ ವಶಪಡಿಸಿಕೊಂಡಿದ್ದಾರೆ.

ಕುಲಪತಿ ನೇಮಕ: ರಾಜ್ಯಪಾಲರ ಜೊತೆ ಸಿ.ಎಂ ಚರ್ಚೆ

ಬೆಂಗಳೂರು: ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ರಾತ್ರಿ ರಾಜಭವನದಲ್ಲಿ ಭೇಟಿ ಮಾಡಿ ಕೆಲಹೊತ್ತು ಚರ್ಚೆ ನಡೆಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮತ್ತು ಮುಖ್ಯಮಂತ್ರಿಯ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಅವರು ಮುಖ್ಯಮಂತ್ರಿ ಜೊತೆಗಿದ್ದರು. ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳ ನೇಮಕದ ವಿಚಾರವಾಗಿ ಚರ್ಚಿಸಲು ರಾಜ್ಯಪಾಲರನ್ನು ಮುಖ್ಯಮಂತ್ರಿ ಭೇಟಿ ಮಾಡಿದರು ಎಂದು ಗೊತ್ತಾಗಿದೆ.

ಡಿಸಿಇಟಿ ಸೀಟು ಹಂಚಿಕೆ ಇಂದಿನಿಂದ

ಬೆಂಗಳೂರು: ಡಿಸಿಇಟಿ ಬರೆದ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ 2ನೇ ವರ್ಷಕ್ಕೆ ನೇರ ಪ್ರವೇಶ ಪಡೆಯಲು ಮೊದಲ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಜುಲೈ 3ರಿಂದ ಆರಂಭವಾಗಲಿದೆ.

ಅಭ್ಯರ್ಥಿಗಳು ಕೋರ್ಸ್ ಹಾಗೂ ಕಾಲೇಜುಗಳನ್ನು ಆಯ್ಕೆ ಮಾಡಿಕೊಂಡು, ಆದ್ಯತಾ ಕ್ರಮದಲ್ಲಿ ದಾಖಲಿಸಲು ಜುಲೈ 5ರಂದು ಬೆಳಿಗ್ಗೆ 11ರವರೆಗೆ ಅವಕಾಶ ನೀಡಲಾಗಿದೆ. ಜುಲೈ 7ರಂದು ಅಣಕು ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗುತ್ತದೆ. ಬಳಿಕ ಜುಲೈ 8ರಂದು ಸಂಜೆ 4ರವರೆಗೆ ಅಭ್ಯರ್ಥಿಗಳು ತಮ್ಮ ಇಚ್ಛೆ, ಆಯ್ಕೆಗಳನ್ನು ಬದಲಿಸಿಕೊಳ್ಳಬಹುದು. ಜುಲೈ 9ರಂದು ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಹೇಳಿದ್ದಾರೆ.

ಸೀಟು ಹಂಚಿಕೆಯಾದ ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡ ಕೋರ್ಸ್, ಕಾಲೇಜುಗಳಿಗೆ ಪ್ರವೇಶ ಪಡೆಯುವ, ನಿರಾಕರಿಸುವ ಆಯ್ಕೆ (ಚಾಯ್ಸ್) ನಮೂದಿಸಲು ಜುಲೈ 10ರಿಂದ 13ರವರೆಗೆ ಅವಕಾಶ ಇರುತ್ತದೆ. ಆಯ್ಕೆ–1 ನಮೂದಿಸಿದ ವಿದ್ಯಾರ್ಥಿಗಳು ಚಲನ್ ಡೌನ್‌ಲೋಡ್ ಮಾಡಿಕೊಂಡು, ಶುಲ್ಕ ಪಾವತಿಸಬೇಕು. ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು ಜುಲೈ 16ರ ಒಳಗೆ ಕಾಲೇಜುಗಳಿಗೆ ಪ್ರವೇಶ ಪಡೆಯಬೇಕು ಎಂದು ಮಾಹಿತಿ ನೀಡಿದ್ದಾರೆ.

ವಾಲ್ಮೀಕಿ ಹಗರಣ – ಮಂತ್ರಿಗಳು ಭಾಗಿ

ಒಂದನೇ ಪುಟದಿಂದ...

'ನಿಗಮದ ಹಣ ದುರ್ಬಳಕೆ ಪ್ರಕರಣದಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಇತರರು ಭಾಗಿಯಾಗಿರುವುದು ಮೇಲ್ನೋಟಕ್ಕೆ ಪತ್ತೆಯಾಗಿದೆ. ₹89.63 ಕೋಟಿಯನ್ನು ವಾಲ್ಮೀಕಿ ನಿಗಮದಿಂದ 700 ಖಾತೆಗಳಿಗೆ ವರ್ಗಾಯಿಸಿ, ದಾಖಲೆಗಳನ್ನು ತಿರುಚಿ, ಅದನ್ನು ಅಲ್ಲಿಂದ ಬೇರೆ ಖಾತೆಗಳಿಗೆ ವರ್ಗಾಯಿಸಿ, ಐಷಾರಾಮಿ ಕಾರುಗಳನ್ನು ಖರೀದಿಸಲು ಬಳಕೆ ಮಾಡಿರುವುದು ತನಿಖೆಯಿಂದ ಬಯಲಾಗಿದೆ' ಎಂಬ ಅಂಶವನ್ನು ನ್ಯಾಯಪೀಠ ಆದೇಶದಲ್ಲಿ ಉಲ್ಲೇಖಿಸಿದೆ.



ಅರ್ಜಿದಾರರ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ ಹಾಗೂ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದ್ದಾರೆ.

ಹಗರಣದ ಹಿಂದಿನ ಹೆಜ್ಜೆಗಳು

ಒಂದನೇ ಪುಟದಿಂದ

ಈ ಅರ್ಜಿಯ ವಿಚಾರಣೆ ನಡೆಸುತ್ತಿರುವ ನ್ಯಾ.ನಾಗಪ್ರಸನ್ನ ಅವರ ಪೀಠವು, 'ಪ್ರಕರಣಕ್ಕೆ ಸಂಬಂಧಿಸಿದಂತೆ ವಸ್ತುಸ್ಥಿತಿ ವರದಿ ಸಲ್ಲಿಸಿ' ಎಂದು ಸಿಬಿಐಗೆ ನಿರ್ದೇಶಿಸಿತ್ತು.

ಈ ಹಿನ್ನೆಲೆಯಲ್ಲಿ ಸಿಬಿಐ ತನಿಖೆಯ ವಸ್ತುಸ್ಥಿತಿ ವರದಿಗಳನ್ನು ಮುಚ್ಚಿದ ಲಕೋಟೆಯಲ್ಲಿ ನಾಲ್ಕು ಕಂತುಗಳಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿತ್ತು. ಅಂತೆಯೇ, ಮಧ್ಯಂತರ ಅರ್ಜಿಯಲ್ಲಿ, 'ರಾಜ್ಯ ಸರ್ಕಾರದ ಅಧೀನದಲ್ಲಿ ನಡೆಯುತ್ತಿರುವ ತನಿಖಾ ಸಂಸ್ಥೆಗಳ ಸುಪರ್ದಿಯಲ್ಲಿ ಕೆಲವು ಮಹತ್ವದ ದಾಖಲೆಗಳಿದ್ದು ಅವುಗಳನ್ನು ನಮ್ಮ ವಶಕ್ಕೆ ಒಪ್ಪಿಸುವಂತೆ ನಿರ್ದೇಶಿಸಬೇಕು' ಎಂದು ಕೋರಿತ್ತು.

ಸ್ನೇಹಿತರ ಸಂಭ್ರಮ...

ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.



ಕೆಆರ್‌ಎಸ್ ಜಲಾಶಯದಿಂದ ನೀರು ಬಿಟ್ಟಿರುವುದರಿಂದ ಧುಮ್ಮಿಕ್ಕಿ ಹರಿಯುತ್ತಿರುವ ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ದುದ್ದಘಟ್ಟದ ಕೋಡಿಬಾಯಿಕಟ್ಟೆ (ಚಿಕ್ಕದೇವರಾಯಸಾಗರ ಅಣೆಕಟ್ಟೆ) ವೀಕ್ಷಿಸಲು ಬುಧವಾರ ಬಂದಿದ್ದ ಯುವಕರು ಖುಷಿಯಿಂದ ಫೋಟೊ ತೆಗೆಸಿಕೊಂಡ ದೃಶ್ಯ

'ರವಿಕುಮಾರ್ ವಿರುದ್ಧ ಪ್ರಕರಣ ದಾಖಲಿಸಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಇಲ್ಲಿನ 'ಒಡನಾಡಿ' ಸೇವಾ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪರಶುರಾಮ್ ಎಂ.ಎಲ್. ಕಾರ್ಯದರ್ಶಿ ಸ್ಟ್ಯಾನ್ಲಿ ಕೆ.ವಿ. ಪೊಲೀಸ್ ಮಹಾನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.


'ಮುಖ್ಯ ಕಾರ್ಯದರ್ಶಿಯು ರಾತ್ರಿಯಿಡೀ ರಾಜ್ಯ ಸರ್ಕಾರಕ್ಕಾಗಿ ಹಾಗೂ ಇಡೀ ದಿನ ಮುಖ್ಯಮಂತ್ರಿಗಾಗಿ ಕೆಲಸ ಮಾಡುತ್ತಾರೆ' ಎಂಬ ಹೇಳಿಕೆಯನ್ನು ರವಿಕುಮಾರ್ ನೀಡಿದ್ದಾರೆ. 'ಅವರ ದ್ವಂದ್ವ ಮಾತುಗಳು ಆಶ್ಚರ್ಯ ಹಾಗೂ ಅಸಹನೀಯವಾಗಿವೆ' ಎಂದು ಆರೋಪಿಸಿದ್ದಾರೆ.

'ಅವರ ಹೇಳಿಕೆಯು ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ವಿಚಾರದಲ್ಲಿ ಸತ್ಯಾಸತ್ಯತೆ ಪರಿಶೀಲಿಸಲು ಎಫ್‌ಐಆರ್ ದಾಖಲಿಸಬೇಕು' ಎಂದು ಮನವಿ ಮಾಡಿದ್ದಾರೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.74	15,180	15,941
ಹಾರಂಗಿ	2,859	2,852.61	3,688	1,500
ಕಬಿನಿ	2,284.00	2,277.46	7,496	5,729
ಹೇಮಾವತಿ	2,922	2,917.47	1,3521	1,1910
ಲಿಂಗನಮಕ್ಕಿ	1,819	1,786.05	20,620	5645
ಸೂಪಾ (ಮೀ)	564	538.04	20,299	4,818.50
ಮಾಣಿ	595	583.46	2,961	820
ತುಂಗಭದ್ರಾ	1,633	1,625.20	32,767	10,400
ಮಲಪ್ರಭಾ	2,079.50	2,062.65	5,704	194
ಘಟಪ್ರಭಾ	2175	2,148.55	12,458	1,453
ಭದ್ರಾ *	186	164.00	11,875	3,391
ಆಲಮಟ್ಟಿ (ಮೀ)	519.60	517.26	85,537	80,000
ನಾರಾಯಣಪುರ (ಮೀ)	492.25	490.68	80,000	76,330

* ನೆಲಮಟ್ಟದಿಂದ



ಚಿಕ್ಕಮಗಳೂರು: ಧಾರಾಕಾರ ಮಳೆ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಮಳೆ ಮತ್ತೆ ಚುರುಕು ಪಡೆದಿದ್ದು, ಮಲೆನಾಡು ಭಾಗದಲ್ಲಿ ಬುಧವಾರ ಧಾರಾಕಾರವಾಗಿ ಸುರಿಯಿತು. ಮೂಡಿಗೆರೆ, ಶೃಂಗೇರಿ, ಕಳಸ, ಕುದುರೆಮುಖ, ಕೊಟ್ಟಿಗೆಹಾರ, ಕೊಪ್ಪ, ನರಸಿಂಹರಾಜಪುರ, ಬಾಳೆಹೊನ್ನೂರು ಸುತ್ತಮುತ್ತ ಜೋರು ಮಳೆ ಸುರಿಯಿತು. ಚಿಕ್ಕಮಗಳೂರು ನಗರ, ಮುಳ್ಳಯ್ಯನಗಿರಿ ಸುತ್ತಮುತ್ತ ಆಗಾಗ ಮಳೆಯಾಯಿತು.

ಬಯಲು ಸೀಮೆಯ ಕಡೂರು, ತರೀಕೆರೆಯಲ್ಲೂ ಸಾಧಾರಣ ಮಳೆ ಸುರಿಯಿತು. ಮಂಗಳೂರು ನಗರದಲ್ಲಿ ಸಂಜೆ ಜೋರು ಗಾಳಿಯೊಂದಿಗೆ ಮಳೆ ಸುರಿಯಿತು.

ಕೊಡಗಿನ ಕೆಲವೆಡೆ ಬಿರುಸಿನ ಮಳೆ(ಮಡಿಕೇರಿ ವರದಿ): ಕೊಡಗು ಜಿಲ್ಲೆಯ ಮಡಿಕೇರಿ, ಸುಂಟಿಕೊಪ್ಪ, ವಿರಾಜಪೇಟೆ ಭಾಗಗಳಲ್ಲಿ ಬುಧವಾರ ಬಿರುಸಿನಿಂದ ಮಳೆ ಸುರಿದಿದೆ. ಇನ್ನುಳಿದ ಕಡೆಗಳಲ್ಲಿ ಸಾಧಾರಣ ಮಳೆಯಾಗಿದೆ.

ಹವಾಮಾನ ಇಲಾಖೆ ಕೊಡಗು ಜಿಲ್ಲೆಗೆ ಆರೆಂಜ್ ಅಲರ್ಟ್ ನೀಡಿದೆ. ಸೋಮವಾರಪೇಟೆ ತಾಲ್ಲೂಕಿನ ಶಾಂತಳ್ಳಿಯಲ್ಲಿ 7 ಸೆಂ.ಮೀ., ಪೊನ್ನಂಪೇಟೆ ತಾಲ್ಲೂಕಿನ ಶ್ರೀಮಂಗಲದಲ್ಲಿ 6 ಸೆಂ.ಮೀ., ಸೋಮವಾರಪೇಟೆಯಲ್ಲಿ 3 ಸೆಂ.ಮೀ., ಮಡಿಕೇರಿ ತಾಲ್ಲೂಕಿನ ಭಾಗಮಂಡಲ, ಸಂಪಾಜೆ ಮತ್ತು ಸೋಮವಾರಪೇಟೆ ತಾಲ್ಲೂಕಿನ ಶನಿವಾರ ಸಂತೆಯಲ್ಲಿ 2.5 ಸೆಂ.ಮೀ. ಮಳೆಯಾಗಿದೆ.

'ಮರಣೋತ್ತರ ಬಸವಶ್ರೀ ನೀಡಲಿ'

ಫ.ಗು.ಹಳಕಟ್ಟಿ ಕಾರ್ಯ ಶ್ಲಾಘಿಸಿದ ಎಚ್‌.ಕೆ.ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಚನ ಸಾಹಿತ್ಯದ ರಕ್ಷಣೆ, ವಚನಗಳ ಸಂಗ್ರಹ ಮತ್ತು ಪ್ರಚಾರ ಕಾರ್ಯಕ್ಕೆ ಸಂಬಂಧಿಸಿದಂತೆ ಫ.ಗು. ಹಳಕಟ್ಟಿ ಅವರಿಗೆ ಮರಣೋತ್ತರವಾಗಿ 'ಬಸವಶ್ರೀ ಪ್ರಶಸ್ತಿ' ನೀಡಿ ಗೌರವಿಸಬೇಕು' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಮತ್ತು ಶಂಕರ ಬಿದರಿ ಫೌಂಡೇಷನ್ ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಚನ ಪಿತಾಮಹ ಫ.ಗು.ಹಳಕಟ್ಟಿ ಅವರ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ಫ.ಗು. ಹಳಕಟ್ಟಿ ಅವರು ವಚನ ಪಿತಾಮಹ ಎಂದೇ ಖ್ಯಾತರಾಗಿದ್ದಾರೆ. ಅವರು ಸ್ಥಾಪಿಸಿರುವ ಸಂಘ, ಸಂಸ್ಥೆಗಳು ಇಂದಿಗೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಜನಮನ್ನಣೆ ಪಡೆದಿವೆ. ಅವರ ಕಾರ್ಯಕ್ಷೇತ್ರ ವಿಸ್ತಾರವಾಗಿತ್ತು. ಅವರು ಯೋಜಿಸದ, ಸಾಧಿಸದ ಸಾರ್ವಜನಿಕ ಕ್ಷೇತ್ರವಿಲ್ಲ. ಹಸಿವಿನಿಂದ ಬಳಲುವ ಜನರಿಗೆ ನೆರವಾಗಲು ಬರನಿರೋಧಕ ಸಮಿತಿ ಸ್ಥಾಪಿಸಿದ್ದರು' ಎಂದು ಸ್ಮರಿಸಿಕೊಂಡರು.

'ವಚನ ಸಾಹಿತ್ಯವನ್ನು ಶೋಧಿಸಿ, ಅನ್ವೇಷಿಸಿ ಪ್ರಕಟಿಸುವ ಮೂಲಕ ಸಂಶೋಧನಾ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ. ದಕ್ಷಿಣ ಕರ್ನಾಟಕ ಭಾಗದಲ್ಲಿ ಇವರ ಕಾರ್ಯಗಳು ಹೆಚ್ಚು ಪ್ರಚಾರವಾಗಬೇಕು. ಮರಾಠಿ ಪ್ರದೇಶದೊಳಗೆ ಕನ್ನಡ ಶಾಲೆಗಳನ್ನು ಕಟ್ಟಿಸಿದ್ದನ್ನು ಮರೆಯುವಂತಿಲ್ಲ. ಹಳಕಟ್ಟಿ ಅವರ ಮೂಲ ಪುಸ್ತಕಗಳನ್ನು ಡಾ.ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದಲ್ಲಿ ಸಂರಕ್ಷಿಸಲಾಗಿದೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ವೂಡೇ ಪಿ. ಕೃಷ್ಣ, ಚಂದ್ರಕಾಂತ ಬೆಲ್ಲದ, ಎಚ್‌.ಕೆ. ಪಾಟೀಲ, ಶಂಕರ ಬಿದರಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ಸಿ. ಸೋಮಶೇಖರ್ ಅವರು ಫ.ಗು. ಹಳಕಟ್ಟಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

ಪ್ರಜಾವಾಣಿ ಚಿತ್ರ

ಕೊಲ್ಹಾಪುರಿ ಚಪ್ಪಲಿ ತಮ್ಮದೆಂದು ಪ್ರದರ್ಶಿಸಿರುವ ಇಟಲಿಯ ಕಂಪನಿ

ಪ್ರಾಡಾ ವಿರುದ್ಧ ಕಾನೂನು ಹೋರಾಟ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ₹500 ಕೋಟಿ ಪರಿಹಾರ ಕೋರಿ ಮೊಕದ್ದಮೆ ಹೂಡಲು ಸಿದ್ಧತೆ
- ಕೊಲ್ಹಾಪುರಿ ಚಪ್ಪಲಿ: ಜಿಐ ನೋಂದಣಿ ಹೊಂದಿರುವ ಲಿಡ್ಕರ್

ಬೆಂಗಳೂರು: 'ಕರ್ನಾಟಕ ಮತ್ತು ಮಹಾರಾಷ್ಟ್ರದ ಪಾರಂಪರಿಕ ಕೊಲ್ಹಾಪುರಿ ಚಪ್ಪಲಿಗಳನ್ನು ತಮ್ಮದೆಂದು ಪ್ರದರ್ಶಿಸಿರುವ ಇಟಲಿಯ 'ಪ್ರಾಡಾ' ಕಂಪನಿಯ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು' ಎಂದು ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ತಿಳಿಸಿದೆ.

'ಕೊಲ್ಹಾಪುರಿ ಚಪ್ಪಲಿಗಳ ವಿನ್ಯಾಸಕ್ಕೆ ಕರ್ನಾಟಕದ ಲಿಡ್ಕರ್ ಮತ್ತು ಮಹಾರಾಷ್ಟ್ರದ ಲಿಡ್‌ಕಾಂ ಸಂಸ್ಥೆಗಳು ಜಂಟಿಯಾಗಿ ಭೌಗೋಳಿಕ ಗುರುತು (ಜಿಯಾಗ್ರಾಫಿಕಲ್ ಇಂಡಿಕೇಷನ್–ಜಿಐ) ನೋಂದಣಿ ಹೊಂದಿವೆ. ಈ ಚಪ್ಪಲಿಗಳು ಪ್ರಪಂಚದಾದ್ಯಂತ 'ಕೊಲ್ಹಾಪುರಿ ಚಪ್ಪಲ್' ಎಂದೇ ಖ್ಯಾತವಾಗಿವೆ' ಎಂದು ನಿಗಮವು ಬುಧವಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

'ಇಟಲಿಯ ಮಿಲಾನೋದಲ್ಲಿ ಈಚೆಗೆ ನಡೆದ ಫ್ಯಾಷನ್ ಷೋನಲ್ಲಿ, ಅಲ್ಲಿನ ಪ್ರಾಡಾ ಕಂಪನಿಯ ರೂಪದರ್ಶಿಗಳು ಕೊಲ್ಹಾಪುರಿ ಚಪ್ಪಲಿಗಳನ್ನು ಪ್ರದರ್ಶಿಸಿದ್ದಾರೆ. ಕಂಪನಿಯು ಇದನ್ನು 'ಪುರುಷರ ಚರ್ಮದ ಚಪ್ಪಲಿ' ಎಂದು ಕರೆದಿದೆ. ಜತೆಗೆ ಅವುಗಳಿಗೆ ₹1.20 ಲಕ್ಷ ಬೆಲೆ ನಿಗದಿ ಮಾಡಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ಕೊಲ್ಹಾಪುರಿ ಚಪ್ಪಲಿಗಳನ್ನು ಹೆಸರಿಸದೇ, ಅವುಗಳ ವಿನ್ಯಾಸ ಕದಿಯಲಾಗಿದೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತವಾಗಿದೆ' ಎಂದು ವಿವರಿಸಿದೆ.

'ಕೊಲ್ಹಾಪುರಿ ಚಪ್ಪಲಿಗಳಿಗೆ ನಾವು 2018ರಲ್ಲೇ ಜಿಐ ನೋಂದಣಿ ಮಾಡಿಸಿದ್ದೇವೆ. ಅನುಮತಿ ಪಡೆಯದೇ ಆ ವಿನ್ಯಾಸವನ್ನು ಬಳಸಿಕೊಂಡಿರುವುದು ಜಿಐ ನಿಯಮಗಳ ಉಲ್ಲಂಘನೆ. ಈ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆಯಲಾಗಿದೆ. ₹500 ಕೋಟಿ ಪರಿಹಾರ ಕೋರಿ ಪ್ರಾಡಾ ಕಂಪನಿಯ ವಿರುದ್ಧ ಮೊಕದ್ದಮೆ ದಾಖಲಿಸಲಾಗುವುದು' ಎಂದು ನಿಗಮವು ಹೇಳಿದೆ.



ಬೆಳಗಾವಿಯ ಮದಭಾವಿಯಲ್ಲಿ ಕೊಲ್ಹಾಪುರಿ ಚಪ್ಪಲಿ ತಯಾರಿಕೆಯಲ್ಲಿ ತೊಡಗಿದ್ದ ಮಹಿಳೆ

‘ಹಳೆಯ ಯಂತ್ರ ಬದಲಿಸದ ಕಂಪನಿ’

ಸಿಗಾಚಿ ಔಷಧ ಕಾರ್ಖಾನೆ ಸ್ಫೋಟ ಮೃತರ ಸಂಖ್ಯೆ 40ಕ್ಕೆ ಏರಿಕೆ

ಸಂಗಾರೆಡ್ಡಿ (ತೆಲಂಗಾಣ) (ಪಿಟಿಐ): ಇಲ್ಲಿನ ಸಿಗಾಚಿ ಫಾರ್ಮಾ ಕಂಪನಿಯು ಹಳೆಯ ಯಂತ್ರೋಪಕರಣಗಳನ್ನೇ ಬಳಸಿ ಕಾರ್ಯನಿರ್ವಹಿಸುತ್ತಿತ್ತು ಎಂದು ಕಂಪನಿಯ ಆಡಳಿತ ಮಂಡಳಿಯ ವಿರುದ್ಧ ದಾಖಲಾದ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಪಾಶಮೈಲಾರಂ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯ ರಿಯಾಕ್ಟರ್‌ನಲ್ಲಿ ಸೋಮವಾರ ಸ್ಫೋಟ ಸಂಭವಿಸಿತ್ತು. ದುರಂತದಲ್ಲಿ 40 ಮಂದಿ ಮೃತಪಟ್ಟಿದ್ದಾರೆ ಎಂದು ಕಂಪನಿ ಬುಧವಾರ ಹೇಳಿದೆ. ಆದರೆ ಜಿಲ್ಲಾಡಳಿತವು ಮೃತರ ಸಂಖ್ಯೆ 38 ಎಂದು ತಿಳಿಸಿದೆ.

ಸಂತ್ರಸ್ತರಲ್ಲಿ ಒಬ್ಬರ ಕುಟುಂಬದ ಸದಸ್ಯರು ನೀಡಿದ ದೂರಿನಂತೆ ಸಂಗಾರೆಡ್ಡಿ ಪೊಲೀಸರು ಕಾರ್ಖಾನೆಯ ಆಡಳಿತ ಮಂಡಳಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿದ್ದರು.

‘ಯಂತ್ರೋಪಕರಣಗಳು ತುಂಬಾ ಹಳೆಯದಾಗಿದ್ದು, ಅವುಗಳನ್ನೇ ಬಳಸಿದರೆ ಅಪಾಯ ಉಂಟಾಗುವ ಎಲ್ಲ ಸಾಧ್ಯತೆಗಳಿವೆ ಎಂದು ದೂರುದಾರರ ತಂದೆ ಮತ್ತು ಸಿಗಾಚಿ ಕಂಪನಿಯ ಇತರ ಉದ್ಯೋಗಿಗಳು ಕಂಪನಿಯ ಆಡಳಿತ ಮಂಡಳಿಗೆ ಹಲವು ಬಾರಿ ಮನವಿ ಮಾಡಿದ್ದರು’ ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ.

‘ಆದರೆ ಉದ್ಯೋಗಿಗಳ ಮನವಿಗೆ ಸ್ಪಂದಿಸದ ಆಡಳಿತ ಮಂಡಳಿಯು ಹಳೆಯ ಯಂತ್ರಗಳನ್ನೇ ಬಳಸುವುದನ್ನು ಮುಂದುವರಿಸಿತು. ಇದರ ಪರಿಣಾಮ ಸ್ಫೋಟ ಸಂಭವಿಸಿದೆ’ ಎಂದು ಹೇಳಿದೆ. ಯಶವಂತ್ ರಾಜನಾಲ ಎಂಬವರು ಕಂಪನಿಯ ಆಡಳಿತ ಮಂಡಳಿ ವಿರುದ್ಧ ದೂರು ನೀಡಿದ್ದಾರೆ. ಯಶವಂತ್ ಅವರ ತಂದೆ ರಾಜನಾಲ ವೆಂಕಟ ಜಗನ್ ಮೋಹನ್ ಅವರು ಸ್ಫೋಟದಲ್ಲ ಮೃತಪಟ್ಟಿದ್ದಾರೆ. ಅವರು 20 ವರ್ಷಗಳಿಂದಲೂ ಇಲ್ಲಿ ಕೆಲಸ ಮಾಡುತ್ತಿದ್ದರು.

ಕಂಪನಿಯು ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣ ಪ್ರಮಾಣಪತ್ರ (ಎನ್‌ಒಸಿ) ಪಡೆದಿರಲಿಲ್ಲ ಎಂದು ತೆಲಂಗಾಣ ಅಗ್ನಿಶಾಮಕ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ‘ಕಂಪನಿಯು ಎನ್‌ಒಸಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿರಲಿಲ್ಲ. ಆದ್ದರಿಂದ ಪ್ರಮಾಣಪತ್ರ ನೀಡಿರಲಿಲ್ಲ’ ಎಂದಿದ್ದಾರೆ.

ಸಮಿತಿ ರಚನೆ: ದುರಂತದ ಕಾರಣ ಪತ್ತೆ ಹಚ್ಚಲು ತೆಲಂಗಾಣ ಸರ್ಕಾರ ಬುಧವಾರ ತಜ್ಞರ ಸಮಿತಿಯನ್ನು ನೇಮಿಸಿದೆ. ಸಮಿತಿಯು ಒಂದು ತಿಂಗಳಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ.


ಸ್ಫೋಟದ ಜಾಗದಲ್ಲಿ ಅವಶೇಷಗಳು ಬಿದ್ದಿರುವುದು —ಪಿಟಿಐ ಚಿತ್ರ

ಅಧಿಕಾರಿಗಳ ಸಾವು: ತನಿಖೆಗೆ ಹಿನ್ನಡೆ?

ಕಂಪನಿಯ ಮೂವರು ಅಧಿಕಾರಿಗಳು ದುರಂತದಲ್ಲಿ ಮೃತಪಟ್ಟಿರುವುದರಿಂದ ಪ್ರಕರಣದ ತನಿಖೆಗೆ ಹಿನ್ನಡೆಯಾಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ‘ಕಾರ್ಖಾನೆಯ ವ್ಯವಸ್ಥಾಪಕ, ಉಪ ಪ್ರಧಾನ ವ್ಯವಸ್ಥಾಪಕ (ಉತ್ಪಾದನೆ) ಮತ್ತು ನಿರ್ವಾಹಕರು ಮೃತಪಟ್ಟಿದ್ದಾರೆ. ಇದರಿಂದ ದುರಂತದ ಬಗ್ಗೆ ನಿರ್ಣಾಯಕ ಮಾಹಿತಿ ಕಲೆಹಾಕುವ ಪ್ರಕ್ರಿಯೆಗೆ ಹಿನ್ನಡೆಯಾಗಿದೆ’ ಎಂದು ತನಿಖಾ ತಂಡದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ತಲಾ ₹1 ಕೋಟಿ ಪರಿಹಾರ ಘೋಷಣೆ

ದುರಂತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹1 ಕೋಟಿ ಪರಿಹಾರ ನೀಡುವುದಾಗಿ ಸಿಗಾಚಿ ಕಂಪನಿಯ ಆಡಳಿತ ಮಂಡಳಿ ಬುಧವಾರ ಘೋಷಿಸಿದೆ.

‘ಸ್ಫೋಟದಲ್ಲಿ ನಾವು 40 ಸಿಬ್ಬಂದಿಯನ್ನು ಕಳೆದುಕೊಂಡಿದ್ದೇವೆ. 33 ಮಂದಿ ಗಾಯಗೊಂಡಿದ್ದಾರೆ. ಮೃತರ ಕುಟುಂಬಗಳಿಗೆ ತಲಾ ₹1 ಕೋಟಿ ಪರಿಹಾರ ನೀಡಲಾಗುವುದು. ಗಾಯಾಳುಗಳ ಚಿಕಿತ್ಸೆಯ ವೆಚ್ಚವನ್ನು ಕಂಪನಿಯೇ ಭರಿಸಲಿದೆ’ ಎಂದು ಪ್ರಕಟಣೆ ತಿಳಿಸಿದೆ.

ಕಂಪನಿಯಿಂದ ತಲಾ ₹1 ಕೋಟಿ ಪರಿಹಾರ ಒದಗಿಸಲು ಕ್ರಮವಹಿಸಲಾಗುವುದು ಎಂದು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಮಂಗಳವಾರ ಹೇಳಿದ್ದರು.

ಪಿಂಚಣಿ ಆಡಳಿತಕ್ಕೆ ವ್ಯವಸ್ಥಿತ ಸುಧಾರಣೆ ಅಗತ್ಯ: ಸಚಿವ

ನವದೆಹಲಿ (ಪಿಟಿಐ): ಪಿಂಚಣಿ ಆಡಳಿತ ವ್ಯವಸ್ಥೆಗೆ ತುರ್ತಾಗಿ ಸಾಂಸ್ಥಿಕ ಸಂಯೋಜನೆ ಮತ್ತು ವ್ಯವಸ್ಥಿತ ಸುಧಾರಣೆಯ ಅಗತ್ಯವಿದೆ ಎಂದು ಕೇಂದ್ರ ಸಿಬ್ಬಂದಿ ಖಾತೆಯ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಬುಧವಾರ ಪ್ರತಿಪಾದಿಸಿದರು.

ಪಿಂಚಣಿ ಮತ್ತು ಪಿಂಚಣಿದಾರರ ಕಲ್ಯಾಣ ಇಲಾಖೆಯು ಪಿಂಚಣಿ ವ್ಯಾಜ್ಯಗಳ ಕುರಿತು ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ ರಾಷ್ಟ್ರಮಟ್ಟದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.


ಜಿತೇಂದ್ರ ಸಿಂಗ್

ಪ್ರಸ್ತುತ ಕೇಂದ್ರ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ಒಟ್ಟು ಸಿಬ್ಬಂದಿಗೂ ಹೆಚ್ಚಿನ ಸಂಖ್ಯೆಯಲ್ಲಿ ಪಿಂಚಣಿದಾರರು ಇದ್ದಾರೆ. ಹೀಗಾಗಿ ಪಿಂಚಣಿ ಆಡಳಿತ ವ್ಯವಸ್ಥೆಯಲ್ಲಿ ಗಣನೀಯ ಸುಧಾರಣೆಗಳು ಆಗಬೇಕಿವೆ ಎಂದು ಅವರು ಹೇಳಿದರು.

ಪಿಂಚಣಿ ಸಂಬಂಧಿತ ಕಾನೂನು ವಿವಾದಗಳನ್ನು ಕಡಿಮೆಗೊಳಿಸುವ ಮತ್ತು ತ್ವರಿತವಾಗಿ ನ್ಯಾಯ ದೊರಕಿಸುವುದನ್ನು ಖಾತರಿಪಡಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಅಲ್ಲದೆ ಹಿರಿಯ ನಾಗರಿಕರಿಗೆ ಅನಗತ್ಯ ಕಿರಿಕಿರಿ ತಪ್ಪಿಸಿ, ಪರಿಣಾಮಕಾರಿಯಾಗಿ ಸೇವೆ ದೊರೆಯುವಂತೆ ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ 60 ಲಕ್ಷಕ್ಕೂ ಹೆಚ್ಚು ಪಿಂಚಣಿದಾರರು ಇದ್ದಾರೆ ಎಂದು ಮಾಹಿತಿ ನೀಡಿದ ಸಚಿವರು, ಕಾನೂನನ್ನು ತಪ್ಪಾಗಿ ಅರ್ಥೈಸುವುದರಿಂದ ಮತ್ತು ಕುಂದುಕೊರತೆಗಳನ್ನು ಪರಿಹರಿಸುವಲ್ಲಿನ ವಿಳಂಬದಿಂದಾಗಿ ಹಿರಿಯ ನಾಗರಿಕರಿಗೆ ಕಿರಿಕಿರಿ ಆಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಸ್ತುತ ವಿವಿಧ ವೇದಿಕೆಗಳಲ್ಲಿ ಪಿಂಚಣಿ ಸಂಬಂಧ 300ಕ್ಕೂ ಹೆಚ್ಚು ಪ್ರಕರಣಗಳು ಬಾಕಿಯಿವೆ. ಇದರಲ್ಲಿ ಕೇಂದ್ರೀಯ ಆಡಳಿತ ನ್ಯಾಯ ಮಂಡಳಿ (ಸಿಎಟಿ)ಯಲ್ಲಿಯೇ ಶೇ 70ರಷ್ಟು ಪ್ರಕರಣ ಗಳಿವೆ ಎಂದು ಅವರು ಅಂಕಿ ಅಂಶ ನೀಡಿದರು.

‘ವ್ಯಾಜ್ಯವು ಯಾವಾಗಲೂ ಕೊನೆಯ ಮಾರ್ಗವಾಗಬೇಕೇ ಹೊರತು, ಮೊದಲಿನದ್ದಲ್ಲ’ ಎಂದ ಸಚಿವರು, ಪಿಂಚಣಿದಾರರ ದೂರು, ಕುಂದುಕೊರತೆಗಳನ್ನು ಎಚ್ಚರದಿಂದ ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕು ಎಂದು ಸೂಚಿಸಿದರು.

ಕಾರ್ಯಾಗಾರಕ್ಕೆ ವರ್ಚುವಲ್ ಆಗಿ ಹಾಜರಾಗಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು, ‘2028ರ ವೇಳೆಗೆ ಪಿಂಚಣಿ ಸಂಬಂಧಿತ ಯಾವುದೇ ವ್ಯಾಜ್ಯ ಇಲ್ಲದಂತೆ ಆಡಳಿತಾತ್ಮಕ ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಬೇಕು’ ಎಂದು ಹೇಳಿದರು.

ಚಿಟಿಕೆ ಸುದ್ದಿ

ಆಫ್ರಿಕಾದ ಹಂದಿ ಜ್ವರ ಪತ್ತೆ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ಲೋಂಗ್ದಿಂಗ್ ಜಿಲ್ಲೆಯ ಲುಯಾಕ್‌ಸಿಮ್ ಗ್ರಾಮದಲ್ಲಿ ಆಫ್ರಿಕಾದ ಹಂದಿ ಜ್ವರ (ಎಎಸ್‌ಎಫ್) ಪ್ರಕರಣ ಬುಧವಾರ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಪಶು ವೈದ್ಯಕೀಯ ಇಲಾಖೆಯು, ಎಎಸ್‌ಎಫ್ ವ್ಯಾಪಿಸುವುದನ್ನು ತಡೆಯಲು ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದೆ.

ಜಿಲ್ಲಾ ಪಶು ವೈದ್ಯಕೀಯ ಅಧಿಕಾರಿ ಡಾ.ಒಜುಲಿ ಮೊಯೋಂಗ್ ಅವರು, ಪ್ರಮಾಣೀಕೃತ ಕಾರ್ಯಾಚರಣೆ ವಿಧಾನಕ್ಕೆ (ಎಸ್‌ಒಪಿ) ಅನುಗುಣವಾಗಿ ಗ್ರಾಮದಿಂದ ಒಂದು ಕಿಲೋ ಮೀಟರ್ ಪ್ರದೇಶವನ್ನು ‘ಸೋಂಕಿತ ವಲಯ’ ಎಂದು ಘೋಷಿಸಿದ್ದಾರೆ. 10 ಕಿ.ಮೀ ವ್ಯಾಪ್ತಿಯ ಪ್ರದೇಶವನ್ನು ‘ಕಣ್ಗಾವಲು ವಲಯ’ ಎಂದು ಘೋಷಿಸಿದ್ದಾರೆ.

ಇಲ್ಲಿ ಹಂದಿಗಳ ಓಡಾಟ ಮತ್ತು ಹಂದಿ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ.

ಟಿಎಂಸಿ ಶಾಸಕನ ವಿರುದ್ಧ ಆರೋಪಪಟ್ಟಿ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ 2021ರಲ್ಲಿ ನಡೆದಿದ್ದ ಚುನಾವಣೋತ್ತರ ಹಿಂಸಾಚಾರದಲ್ಲಿ ಬಿಜೆಪಿ ನಾಯಕನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಟಿಎಂಸಿ ಶಾಸಕ ಪರೇಶ್ ಪೌಲ್ ಮತ್ತು ನಗರ ಪಾಲಿಕೆ ಸದಸ್ಯರಾದ ಸಮದ್ದರ್ ಮತ್ತು ಪಪಿಯಾ ಘೋಷ್ ಅವರ ವಿರುದ್ಧ ಸಿಬಿಐ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಿದೆ.

ಪ್ರಕರಣಕ್ಕೆ ಸಂಬಂಧಿಸಿ ಎರಡನೇ ಹೆಚ್ಚುವರಿ ದೋಷಾರೋಪ ಪಟ್ಟಿಯನ್ನು ಹೆಚ್ಚುವರಿ ಮುಖ್ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಸಿಬಿಐ ಸಲ್ಲಿಸಿದ್ದು, ಒಟ್ಟು 18 ಮಂದಿಯ ಹೆಸರನ್ನು ಉಲ್ಲೇಖಿಸಿದೆ.

ಪಶ್ಚಿಮ ಬಂಗಾಳ ಚುನಾವಣಾ ಫಲಿತಾಂಶ ಘೋಷಣೆಯಾದ ಬಳಿಕ 2021 ಮೇ 2ರಂದು ಕಂಕುರಗಚಿ ಪ್ರದೇಶದಲ್ಲಿ ಬಿಜೆಪಿ ನಾಯಕ ಅವಿಜಿತ್ ಸರ್ಕಾರ್ ಅವರ ಹತ್ಯೆ ನಡೆದಿತ್ತು.

ಬೆಂಗಳೂರು ವಿಮಾನ ನಿಲ್ದಾಣಕ್ಕೆ 10 ಜಾಗತಿಕ ಪ್ರಶಸ್ತಿ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆತಿಥ್ಯ ಕ್ಷೇತ್ರದಲ್ಲಿ ಒಟ್ಟು ಹತ್ತು ಜಾಗತಿಕ ಪ್ರಶಸ್ತಿ ದೊರೆತಿವೆ.

ಸ್ಪೇನ್‌ನ ಬಾರ್ಸಿಲೋನಾದಲ್ಲಿ ಈಚೆಗೆ ನಡೆದ ‘ವಿಮಾನ ನಿಲ್ದಾಣ ಆಹಾರ, ಪಾನೀಯ (ಎಫ್ ಆ್ಯಂಡ್ ಬಿ) ಹಾಗೂ ಆತಿಥ್ಯ ಕ್ಷೇತ್ರ’ದ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರು ವಿಮಾನ ನಿಲ್ದಾಣದ ಟರ್ಮಿನಲ್ 1 ಹಾಗೂ 2ರಲ್ಲಿರುವ ದೇಶೀಯ ಹಾಗೂ ಅಂತರರಾಷ್ಟ್ರೀಯ ಲಾಂಜ್‌ಗಳಲ್ಲಿಯ ಪ್ರಯಾಣಿಕರ ಸ್ನೇಹಿ ವಾತಾವರಣ, ರೆಸ್ಟೋರೆಂಟ್ ವಿನ್ಯಾಸ ಹಾಗೂ ಇಲ್ಲಿ ಪೂರೈಸುವ ಆಹಾರ ಮತ್ತು ಪಾನೀಯಗಳ ಗುಣಮಟ್ಟಕ್ಕೆ ಒಟ್ಟು ಹತ್ತು ಜಾಗತಿಕ ಪ್ರಶಸ್ತಿ ಲಭಿಸಿವೆ.

ವಿವಿಧ ವಿಭಾಗಗಳಲ್ಲಿ ಏಕಕಾಲಕ್ಕೆ ಇಷ್ಟೊಂದು ಪ್ರಶಸ್ತಿ ಮುಡಿಗೇರಿಸಿಕೊಂಡ ವಿಮಾನ ನಿಲ್ದಾಣಗಳ ಪೈಕಿ ಬೆಂಗಳೂರು ವಿಮಾನ ನಿಲ್ದಾಣ ಕೂಡ ಒಂದಾಗಿದೆ.

ಸಂಗ್ರಹ ಹೆಚ್ಚಿಸಲು ಪಾಕ್ ನಿರ್ಧಾರ

ಇಸ್ಲಾಮಾಬಾದ್ (ಪಿಟಿಐ): ಭಾರತವು ಸಿಂಧೂ ಜಲ ಒಪ್ಪಂದವನ್ನು (ಐಡಬ್ಲ್ಯುಟಿ) ಅಮಾನತಿನಲ್ಲಿರಿಸಿದ ಕಾರಣ ನೀರಿನ ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ ಎಂದು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದರು.

ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯ ನಂತರ ಪಾಕಿಸ್ತಾನಕ್ಕೆ ಪ್ರತ್ಯುತ್ತರ ನೀಡುವ ಉದ್ದೇಶದಿಂದ 1960ರ ಸಿಂಧೂ ಜಲ ಒಪ್ಪಂದವನ್ನು ಭಾರತವು ಅಮಾನತಿನಲ್ಲಿರಿಸಿತು.

ಪಾಕಿಸ್ತಾನದ ಕೃಷಿ ಕ್ಷೇತ್ರವು ಸಿಂಧೂ, ಝೇಲಂ ಹಾಗೂ ಚಿನಾಬ್ ನದಿಗಳ ನೀರನ್ನೇ ಅವಲಂಬಿಸಿದೆ.

ರಾಷ್ಟ್ರೀಯ ತುರ್ತುಸ್ಥಿತಿ ಕಾರ್ಯಾಚರಣೆ ಕೇಂದ್ರಕ್ಕೆ ಶೆಹಬಾಜ್ ಮಂಗಳವಾರ ಭೇಟಿ ನೀಡಿದ್ದರು. ಈ ವೇಳೆ ಅವರು ನೀರಿನ ಸಮಸ್ಯೆ ಕುರಿತು ಮಾತನಾಡಿದರು ಎಂದು ಸರ್ಕಾರಿ ಸುದ್ದಿಸಂಸ್ಥೆ ತಿಳಿಸಿದೆ.

ಸಂಸದಗೆ ಬೆದರಿಕೆ ಎಫ್‌ಐಆರ್

ಬಿಜ್ನೂರ್/ಯುಪಿ (ಪಿಟಿಐ): ಸಂಸದ ಚಂದ್ರಶೇಖರ್ ಅಜಾದ್ ಅವರಿಗೆ ವಾಟ್ಸ್‌ಆ್ಯಪ್ ಮೂಲಕ ಜೀವ ಬೆದರಿಕೆಯೊಡ್ಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಾಗಿದೆ.

‘ಹತ್ತು ದಿನಗಳ ಒಳಗಾಗಿ ಚಂದ್ರಶೇಖರ್ ಅವರನ್ನು ಕೊಲ್ಲುವುದಾಗಿ ಪಕ್ಷದ ವಾಟ್ಸ್‌ಆ್ಯಪ್ ಸಹಾಯವಾಣಿಗೆ ಸಂದೇಶ ಬಂದಿದೆ’ ಎಂದು ಅವರ ಆಪ್ತ ಶೇಖ್ ಪರ್ವೇಜ್ ಠಾಣೆಗೆ ದೂರು ನೀಡಿದ್ದಾರೆ.

ರಸಗೊಬ್ಬರ ಕೊರತೆ ನೀಗಿಸಲು ಕ್ರಮ ಇಲ್ಲ: ರಾಹುಲ್

‘ರೈತರ ನೆರವಿಗೆ ನಿಲ್ಲದ ಸರ್ಕಾರ’

ನವದೆಹಲಿ (ಪಿಟಿಐ): ಯೂರಿಯಾ ಮತ್ತು ಡಿಎಪಿ ಒಳಗೊಂಡಂತೆ ಅಗತ್ಯ ರಸಗೊಬ್ಬರಗಳ ಕೊರತೆ ಅನುಭವಿಸುತ್ತಿರುವ ರೈತರಿಗೆ ನೆರವಾಗಲು ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.


ರಾಹುಲ್ ಗಾಂಧಿ

ಚೀನಾದಿಂದ ಆಮದು ಮಾಡಿಕೊಳ್ಳುವ ರಸಗೊಬ್ಬರಗಳ ಪೂರೈಕೆ ನಿಂತಿರುವುದರಿಂದ ಕೊರತೆ ಎದುರಾಗಿದೆ ಎಂದು ಹೇಳಿದ್ದಾರೆ.


‘ಒಂದೆಡೆ, ಪ್ರಧಾನಿ ನರೇಂದ್ರ ಮೋದಿ ಅವರು ರಸಗೊಬ್ಬರ ಚೀಲಗಳ ಮೇಲೆ ತಮ್ಮ ಫೋಟೋ ಮುದ್ರಿಸುತ್ತಿದ್ದರೆ, ಮತ್ತೊಂದೆಡೆ, ರೈತರು ‘ಮೇಡ್ ಇನ್ ಚೀನಾ’ ರಸಗೊಬ್ಬರದ ಮೇಲೆ ಅವಲಂಬಿತರಾಗುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದ್ದಾರೆ.

‘ಭಾರತವು ಕೃಷಿ ಪ್ರಧಾನ ದೇಶವಾಗಿದ್ದು, ರೈತರು ನಮ್ಮ ಆರ್ಥಿಕತೆಯ ಬೆನ್ನೆಲುಬು. ಆದರೆ, ವಿದೇಶಗಳ ಮೇಲಿನ ಅವಲಂಬನೆಯಿಂದಾಗಿ ಈ ಬೆನ್ನೆಲುಬು ಬಾಗುತ್ತಿದೆ. ಭಾರತವು ಚೀನಾದಿಂದ ಶೇ 80ರಷ್ಟು ರಸಗೊಬ್ಬರ ಆಮದು ಮಾಡಿಕೊಳ್ಳುತ್ತದೆ. ಇದೀಗ ಚೀನಾ ಪೂರೈಕೆ ನಿಲ್ಲಿಸಿದೆ’ ಎಂದು ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

‘ಚೀನಾದಿಂದ ಯಾವುದೇ ಸಮಯದಲ್ಲಿ ಪೂರೈಕೆ ನಿಲ್ಲಬಹುದು ಎಂಬುದನ್ನು ತಿಳಿದಿದ್ದರೂ, ಸರ್ಕಾರ ಸೂಕ್ತ ಸಿದ್ಧತೆ ಮಾಡಿಕೊಳ್ಳಲಿಲ್ಲ. ನಮ್ಮಲ್ಲೇ ಉತ್ಪಾದನೆಯನ್ನು ಉತ್ತೇಜಿಸುವ ಅವಕಾಶವಿದ್ದರೂ, ಯಾವುದೇ ನೀತಿ ಅಥವಾ ಯೋಜನೆಯನ್ನು ರೂಪಿಸಲಿಲ್ಲ’ ಎಂದು ರಾಹುಲ್ ಟೀಕಿಸಿದ್ದಾರೆ.

ಮಲತಾಯಿ ಧೋರಣೆ: ಖರ್ಗೆ ಟೀಕೆ

ಕೇಂದ್ರ ಸರ್ಕಾರವು ಹಿಮಾಚಲ ಪ್ರದೇಶದ ಬಗ್ಗೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ಆರೋಪಿಸಿದ್ದಾರೆ.



ಕಳೆದ ಕೆಲ ವರ್ಷಗಳಿಂದ ರಾಜ್ಯಕ್ಕೆ ಬಾಕಿ ಇರುವ ಪ್ರಕೃತಿ ವಿಪತ್ತು ಪರಿಹಾರ ನಿಧಿಯನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಒತ್ತಾಯಿಸಿದ್ದಾರೆ.

‘₹9 ಸಾವಿರ ಕೋಟಿ ಪರಿಹಾರ ಬಿಡುಗಡೆ ಮಾಡುವಂತೆ ಹಿಮಾಚಲ ಪ್ರದೇಶ ಸರ್ಕಾರ ಈ ಬಾರಿಯ ಮಳೆಗೂ ಮುನ್ನ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ. 2023ರಲ್ಲಿ ದುರಂತ ನಡೆದಾಗ ರಾಜ್ಯದ ಕಾಂಗ್ರೆಸ್ ಸರ್ಕಾರ ₹4,500 ಕೋಟಿ ವಿಶೇಷ ಪರಿಹಾರ ಬಿಡುಗಡೆ ಮಾಡಿತ್ತು. ಆದರೆ, ಕೇಂದ್ರ ಸರ್ಕಾರ ಕೇವಲ ₹ 433 ಕೋಟಿ ಬಿಡುಗಡೆ ಮಾಡಿದೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.



> ಹಿಮಾಚಲ ಪ್ರದೇಶದ ಕಾಂಗ್ರೆಸ್ ಸರ್ಕಾರವು ಕೇಂದ್ರದಿಂದ ಬಿಡುಗಡೆಯಾದ ಹಣವನ್ನು ಖರ್ಚು ಮಾಡದೆ ಜನರಿಗೆ ಅನ್ಯಾಯ ಮಾಡುತ್ತಿದೆ
> **ಜೆ.ಪಿ. ನಡ್ಡಾ,** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಬಿಜೆಪಿ ವಿರುದ್ಧ ಮೇಧಾ ಕಿಡಿ

ನವದೆಹಲಿ (ಪಿಟಿಐ): ‘ದಲಿತರು, ಆದಿವಾಸಿಗಳು, ರೈತರು ಮತ್ತು ಕಾರ್ಮಿಕರ ಪರ ಕೆಲಸ ಮಾಡುವುದು ದೇಶದ್ರೋಹ ಎನಿಸುವುದೇ’ ಎಂದು ಪ್ರಶ್ನಿಸುವ ಮೂಲಕ ಸಾಮಾಜಿಕ ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರು ಬಿಜೆಪಿ ವಿರುದ್ಧ ಹರಿಹಾಯ್ದಿದ್ದಾರೆ.


ಮೇಧಾ ಪಾಟ್ಕರ್

ಭೂಸ್ವಾಧೀನ ಕಾನೂನಿನ ಅನುಷ್ಠಾನದ ಕುರಿತು ಪರಿಶೀಲಿಸುತ್ತಿದ್ದ ಸಂಸದೀಯ ಸಮಿತಿ ಸಭೆಗೆ ಬಹುಭಾಷಾ ನಟ ಪ್ರಕಾಶ್ ರಾಜ್ ಹಾಗೂ ಮೇಧಾ ಪಾಟ್ಕರ್ ಅವರನ್ನು ಕರೆಸಿದ್ದಕ್ಕೆ ಬಿಜೆಪಿ ಸಂಸದರು ಆಕ್ಷೇಪ ವ್ಯಕ್ತಪಡಿಸಿ ಹೊರನಡೆದಿದ್ದರು. ಮಂಗಳವಾರ ಇಲ್ಲಿ ನಡೆಯಬೇಕಿದ್ದ ಸಭೆ ದಿಢೀರ್ ಆಗಿ ರದ್ದಾಗಿತ್ತು. ಸಭೆಯಿಂದ ಹೊರನಡೆಯುವಾಗ ಬಿಜೆಪಿಯ ಕೆಲವು ಸದಸ್ಯರು ಮೇಧಾ ಅವರನ್ನು ‘ರಾಷ್ಟ್ರ ವಿರೋಧಿ’ ಎಂದು ಕರೆದಿದ್ದರು.

ಬುಧವಾರ ಈ ಬಗ್ಗೆ ಪ್ರತಿಕ್ರಿಯಿಸಿದ ಮೇಧಾ, ‘ರಾಷ್ಟ್ರವಿರೋಧಿ ಎಂಬ ಆರೋಪದ ಅರ್ಥವೇನು? ದಲಿತರು, ಆದಿವಾಸಿಗಳು ಮತ್ತು ರೈತರ ಹಕ್ಕುಗಳನ್ನು ಕಾನೂನು ಹಾಗೂ ಸಂವಿಧಾನದ ಅಡಿಯಲ್ಲಿ ರಕ್ಷಿಸಲು ಹೋರಾಡುವುದು ದೇಶದ್ರೋಹವೆ?’ ಎಂದು ಕಿಡಿಕಾರಿದ್ದಾರೆ.

ಲೈಂಗಿಕ ದೌರ್ಜನ್ಯ: ಶಿಕ್ಷಕಿ ವಿರುದ್ಧ ಪ್ರಕರಣ

ಮುಂಬೈ (ಪಿಟಿಐ): 10ನೇ ತರಗತಿ ವಿದ್ಯಾರ್ಥಿಯೊಬ್ಬನ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಮುಂಬೈನ ಪ್ರತಿಷ್ಠಿತ ಶಾಲೆಯೊಂದರ ಇಂಗ್ಲಿಷ್ ಭಾಷಾ ಶಿಕ್ಷಕಿಯನ್ನು (40) ಪೊಲೀಸರು ಬಂಧಿಸಿದ್ದಾರೆ.


ದೌರ್ಜನ್ಯಕ್ಕೊಳಗಾದ ವಿದ್ಯಾರ್ಥಿಯು 2023ರಲ್ಲಿ ಶಾಲಾ ವಾರ್ಷಿಕೋತ್ಸವದ ಸಂದರ್ಭದಲ್ಲಿ ಆರೋಪಿ ಶಿಕ್ಷಕಿಯತ್ತ ಆಕರ್ಷಿತನಾಗಿದ್ದ. ಈ ಅವಕಾಶ ಬಳಸಿಕೊಂಡ ಶಿಕ್ಷಕಿಯು ಹಲವು ಬಾರಿ ವಿದ್ಯಾರ್ಥಿಯನ್ನು ಐಷರಾಮಿ ಹೋಟೆಲ್‌ಗಳಿಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದರು. ಆತಂಕಕ್ಕೆ ಒಳಗಾಗಿದ್ದ ವಿದ್ಯಾರ್ಥಿಗೆ ಮದ್ಯಪಾನ ಮಾಡಿಸಿ, ಆತಂಕ ನಿವಾರಕ ಮಾತ್ರೆಗಳನ್ನು ನೀಡಿ ಕೃತ್ಯಕ್ಕೆ ಬಳಸಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ವಿದ್ಯಾರ್ಥಿಯು ಖಿನ್ನತೆಗೆ ಒಳಗಾಗಿದ್ದ. ಪೋಷಕರು ವಿದ್ಯಾರ್ಥಿಯ ವರ್ತನೆಯಲ್ಲಿ ಆಗಿರುವ ಬದಲಾವಣೆ ಗಮನಿಸಿದ್ದರು. ಆದರೆ, 10ನೇ ತರಗತಿ ಪರೀಕ್ಷೆ ಮುಗಿಯಲಿ ಎಂದು ಸುಮ್ಮನಿದ್ದರು. ಪರೀಕ್ಷೆ ಮುಗಿದು ಶಾಲೆ ತೊರೆದ ಬಳಿಕವೂ ಶಿಕ್ಷಕಿಯು ವಿದ್ಯಾರ್ಥಿಯೊಂದಿಗೆ ಸಂಬಂಧ ಮುಂದುವರಿಸಲು ಪ್ರಯತ್ನಿಸಿದ್ದರು. ಪೋಷಕರು ಪ್ರಶ್ನಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ ಎಂದು ಹೇಳಿದ್ದಾರೆ.

ಶಿಕ್ಷಕಿಯೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಳ್ಳಲು ವಿದ್ಯಾರ್ಥಿಗೆ ಪ್ರೋತ್ಸಾಹ ನಿಡಿದ ಆರೋಪದಲ್ಲಿ, ಶಿಕ್ಷಕಿಯ ಸ್ನೇಹಿತೆಯ ವಿರುದ್ಧವೂ ಪ್ರಕರಣ ದಾಖಲಾಗಿದೆ. ಶಿಕ್ಷಕಿಯ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ, ಭಾರತೀಯ ನ್ಯಾಯ ಸಂಹಿತೆ ಮತ್ತು ಬಾಲ ನ್ಯಾಯ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಸಂಬಂಧ ಹಾಳು ಮಾಡಲು ಯತ್ನ’

ಬೆಂಗಳೂರು: ‘ಸಿದ್ದರಾಮಯ್ಯ ಮತ್ತು ನನ್ನ ನಡುವಿನ ಆತ್ಮೀಯ ಸಂಬಂಧವನ್ನು ಹಾಳು ಮಾಡಲು ಕೆಲವರು ಉದ್ದೇಶಪೂರ್ವಕವಾಗಿ ಪ್ರಯತ್ನಿಸುತ್ತಿದ್ದಾರೆ’ ಎಂದು ಆಳಂದ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ಹೇಳಿದ್ದಾರೆ.


ಬಿ.ಆರ್‌.ಪಾಟೀಲ

ತಮ್ಮ ಫೇಸ್‌ಬುಕ್ ಖಾತೆಯಲ್ಲಿ ವಿಡಿಯೊ ಹಂಚಿಕೊಂಡಿರುವ ಅವರು, ‘ನನ್ನ ಹೇಳಿಕೆಯನ್ನು ತಿರುಚಿ, ತೇಜೋವಧೆ ಮಾಡುತ್ತಿರುವುದು ಸರಿಯಲ್ಲ’ ಎಂದಿದ್ದಾರೆ.

‘ಕೆ.ಆರ್. ಪೇಟೆಯಲ್ಲಿ ಆತ್ಮೀಯರ ಜೊತೆ ಮಾತನಾಡುವಾಗ ಸಿದ್ದರಾಮಯ್ಯ ಅವರ ವಿಷಯ ಪ್ರಸ್ತಾಪ ಆದಾಗ, ನಾನು ಅವರ ಬಗ್ಗೆ ಮಾತನಾಡಿದ್ದೇನೆ. ಅವರು ಲಕ್ಕಿ. ಲಾಟರಿ ಹೊಡೆದು ಮುಖ್ಯಮಂತ್ರಿಯಾದರು ಎಂದಿದ್ದೆ. ನಾನೇ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡಿಸಿದ್ದು ಅನ್ನೋದು ಸಂಪೂರ್ಣ ತಪ್ಪು. ಸಿದ್ದರಾಮಯ್ಯ ಅವರು ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡುವಾಗ ನಾನೂ ಹೋಗಿದ್ದೆ. ಸಿದ್ದರಾಮಯ್ಯ ಅವರು ಈ ಸಲ ಸೋನಿಯಾ ಗಾಂಧಿ ಅವರನ್ನು ಭೇಟಿ ಮಾಡುವುದು ಬೇಡ ಅಂದಿದ್ದರು. ಆದರೆ, ನಾನೇ ಭೇಟಿ ಮಾಡುವಂತೆ ಒತ್ತಾಯ ಮಾಡಿದಾಗ ಹೋಗಿದ್ದಾರೆ’ ಎಂದು ಸ್ಪಷ್ಟನೆ ನೀಡಿದ್ದಾರೆ.

‘ಸಿದ್ದರಾಮಯ್ಯ ಒಬ್ಬ ಜನನಾಯಕ. ನಾವು ಒಂಬತ್ತು ಮಂದಿ ಶಾಸಕರು ಜೆಡಿಎಸ್ ಬಿಟ್ಟು ಅವರ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದ್ದೇವೆ. ಕಾಂಗ್ರೆಸ್ ಕೂಡ ಅವರಿಗಿರುವ ಜನ ಬೆಂಬಲ ನೋಡಿ ಮುಖ್ಯಮಂತ್ರಿಯಾಗಿ ಮಾಡಿದೆಯೇ ಹೊರತು, ನಾವು ಹೇಳಿದ್ದರಿಂದ ಮಾಡಿಲ್ಲ. ನನಗಂತೂ ಅವರನ್ನು ಮುಖ್ಯಮಂತ್ರಿ ಮಾಡಲು ಸಾಧ್ಯವಿಲ್ಲ. ಈ ಮಧ್ಯೆ, ನಮ್ಮ ನಡುವಿನ ಆತ್ಮೀಯ ಸಂಬಂಧವನ್ನು ಹಾಳು ಮಾಡಲು ಕೆಲವರು ಪ್ರಯತ್ನ ಮಾಡುತ್ತಿದ್ದಾರೆ. ಇದು ಸರಿಯಲ್ಲ’ ಎಂದಿದ್ದಾರೆ.

ಲಕ್ಷ್ಮೀದೇವಿಯರ ಜಾತ್ರೆ

ಪ್ರಜಾವಾಣಿ ಚಿತ್ರ


ಬೆಳಗಾವಿ ಜಿಲ್ಲೆಯ ಗೋಕಾಕನಲ್ಲಿ ಬುಧವಾರ ನಡೆದ ಲಕ್ಷ್ಮೀದೇವಿಯರ ಜಾತ್ರೆಯಲ್ಲಿ ಹೊನ್ನಾಟ ನೋಡಲು ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು

40 ಶಾಸಕರಿಂದ ಅಭಿಪ್ರಾಯ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷ ಸಂಘಟನೆ ಮತ್ತು ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮೂರು ದಿನಗಳಿಂದ ಬೆಂಗಳೂರು ಮತ್ತು ಮೈಸೂರು ವಿಭಾಗದ 40 ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಿದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಬುಧವಾರ ದೆಹಲಿಗೆ ವಾಪಾಸಾದರು. ಬೆಳಗಾವಿ ವಿಭಾಗದ ಪಕ್ಷದ ಶಾಸಕರಿಂದ ಅಭಿಪ್ರಾಯ ಪಡೆಯಲು ಇದೇ 7ರಂದು ಮತ್ತೆ ರಾಜ್ಯಕ್ಕೆ ಬರಲಿದ್ದಾರೆ.

ಶಾಸಕರ ಭೇಟಿಗೆ ನಿಗದಿಪಡಿಸಿದ್ದ ವೇಳಾಪಟ್ಟಿಯ ಪ್ರಕಾರ 42 ಶಾಸಕರ ಜೊತೆ ಸುರ್ಜೇವಾಲಾ ಅವರ ಚರ್ಚೆ ನಡೆಸಬೇಕಿತ್ತು. ಆದರೆ, ಪಿ.ಎಂ. ನರೇಂದ್ರಸ್ವಾಮಿ ಮತ್ತು ಕಾಂಗ್ರೆಸ್ ಸಹ ಸದಸ್ಯರಾಗಿರುವ ಸರ್ವೋದಯ ಪಕ್ಷದ ದರ್ಶನ್ ಪುಟ್ಟಣ್ಣಯ್ಯ ಅವರು ವಿದೇಶ ಪ್ರವಾಸದಲ್ಲಿರುವುದರಿಂದ ಭೇಟಿ ಸಾಧ್ಯವಾಗಲಿಲ್ಲ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಶಾಸಕರಾದ ಗಣೇಶ್ ಹುಕ್ಕೇರಿ, ನಯನಾ ಮೋಟಮ್ಮ, ಕೆ.ಎಂ. ಶಿವಲಿಂಗೇಗೌಡ, ಜಿ.ಎಚ್. ಶ್ರೀನಿವಾಸ್, ಕೆ.ಎಸ್. ಆನಂದ್, ಎ.ಎಸ್. ಪೊನ್ನಣ್ಣ, ಕದಲೂರು ಉದಯ್ ಮುಂತಾದವರ ಜೊತೆ ಸುರ್ಜೇವಾಲಾ ಅವರು ಬುಧವಾರ ಪ್ರತ್ಯೇಕವಾಗಿ ಚರ್ಚೆ ನಡೆಸಿದರು.

‘ನನ್ನ ಕ್ಷೇತ್ರಕ್ಕೆ ಅನುದಾನದ ಸಮಸ್ಯೆ ಸ್ವಲ್ಪ ಇದೆ. ಗ್ಯಾರಂಟಿಗಳ ಅನುಷ್ಠಾನ ಚೆನ್ನಾಗಿಯೇ ಆಗಿದೆ’ ಎಂದು ಅಭಿಪ್ರಾಯ ಹಂಚಿಕೊಂಡ ಶಿವಲಿಂಗೇಗೌಡ, ಶಾಸಕರ ಗೊಂದಲದ ಹೇಳಿಕೆಗಳಿಗೆ ಕಡಿವಾಣ ಹಾಕುವಂತೆ ಮನವಿ ಮಾಡಿದ್ದಾರೆ ಎಂದು ಗೊತ್ತಾಗಿದೆ.

‘ಮುಖ್ಯಮಂತ್ರಿ ಬದಲಾವಣೆ ವಿಚಾರ ಪದೇ ಪದೇ ಚರ್ಚೆಯಾಗುತ್ತಿದೆ. ಇದು ಸರ್ಕಾರಕ್ಕೆ ಒಳ್ಳೆಯದಲ್ಲ. ಸಿದ್ದರಾಮಯ್ಯ ಉತ್ತಮವಾಗಿ ಸರ್ಕಾರ ನಡೆಸುತ್ತಿದ್ದು, ಎಲ್ಲ ಶಾಸಕರು ಅವರ ಪರ ಇದ್ದಾರೆ. ಅವರಿಲ್ಲದೆ ಸರ್ಕಾರ ಸುಭದ್ರವಾಗಿ ನಡೆಯುವುದು ಕಷ್ಟ. ಅವರನ್ನೇ ಮುಂದುವರಿಸಬೇಕು’ ಎಂದೂ ಅವರು ಹೇಳಿದ್ದಾರೆ ಎಂದೂ ಗೊತ್ತಾಗಿದೆ.

ಸುರ್ಜೇವಾಲಾ ಭೇಟಿಯ ಬಳಿಕ ಮಾತನಾಡಿದ ಪೊನ್ನಣ್ಣ, ‘ಕ್ಷೇತ್ರದ ಅಭಿವೃದ್ಧಿ ಕೆಲಸ, ಪಕ್ಷ ಸಂಘಟನೆ, ಗ್ಯಾರಂಟಿ ಯೋಜನೆಗಳ ಬಗ್ಗೆ ಚರ್ಚೆ ಮಾಡಿದ್ದೇನೆ. ಅದು ಬಿಟ್ಟು ಬೇರೆ ಏನೂ ಚರ್ಚೆ ಆಗಿಲ್ಲ’ ಎಂದರು.

‘ನನ್ನ ಕ್ಷೇತ್ರದಲ್ಲಿ ಕೆಲವು ಇಲಾಖೆಗಳ ಮೂಲಕ ಏನು ಕೆಲಸ ಆಗಬೇಕೆಂಬ ಬಗ್ಗೆ ಮಾಹಿತಿ ಕೊಟ್ಟಿದ್ದೇನೆ. ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ್ದಾರೆ’ ಎಂದು ಕದಲೂರು ಉದಯ್ ತಿಳಿಸಿದರು.

‘ಪಕ್ಷ ಬಲವರ್ಧನೆಗೆ ಸಲಹೆ ನೀಡಿದ್ದೇನೆ’

‘ಸುರ್ಜೇವಾಲಾ ಅವರು ಕಾಂಗ್ರೆಸ್ ಉಸ್ತುವಾರಿ. ಹೀಗಾಗಿ, ನಾನು ಸೌಹಾರ್ದಯುತವಾಗಿ ಭೇಟಿ ಮಾಡಿದ್ದೇನೆ. ಪಕ್ಷ ಸಂಘಟನೆ, ಬಲವರ್ಧನೆ ಕುರಿತಂತೆ ಸಲಹೆ ನೀಡಿದ್ದೇನೆ’ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಅವರು, ‘ಸರ್ಕಾರ ಉತ್ತಮವಾಗಿ ಆಡಳಿತ ನೀಡುತ್ತಿದೆ. ಗ್ಯಾರಂಟಿ ಯೋಜನೆಗಳನ್ನೂ ಅನುಷ್ಠಾನ ಮಾಡುತ್ತಿದೆ. ಕೊಟ್ಟ ಭರವಸೆಗಳನ್ನೂ ಈಡೇರಿಸುತ್ತಿದೆ ಎಂದು ತಿಳಿಸಿದ್ದೇನೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಆಡಳಿತ ನೀಡುವ ಭರವಸೆ ನೀಡಿದ್ದೇನೆ’ ಎಂದರು.

ಎಂಎಂ ಹಿಲ್ಸ್ ವನ್ಯಜೀವಿ ವಿಭಾಗದ ಹೊರಗುತ್ತಿಗೆ ನೌಕರರರ ಸಂಕಷ್ಟ

4 ತಿಂಗಳಿಂದ ಬಾರದ ವೇತನ

● ಬಾಲಚಂದ್ರ ಎಚ್.

ಚಾಮರಾಜನಗರ: ಐದು ಹುಲಿಗಳ ಹತ್ಯೆ ನಡೆದ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದಲ್ಲಿ ಹೊರಗುತ್ತಿಗೆ ನೌಕರರಾಗಿ ದುಡಿಯುತ್ತಿರುವ 110ಕ್ಕೂ ಹೆಚ್ಚು ಸಿಬ್ಬಂದಿಗೆ ನಾಲ್ಕು ತಿಂಗಳುಗಳಿಂದ ವೇತನ ಬಿಡುಗಡೆಯಾಗಿಲ್ಲ.

ಅರಣ್ಯದೊಳಗೆ ಕಳ್ಳಬೇಟೆ, ಮರಗಳವು, ಅತಿಕ್ರಮ ಪ್ರವೇಶದಂತಹ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯುವಲ್ಲಿ ಶ್ರಮಿಸುತ್ತಿರುವ ಕಳ್ಳಬೇಟೆ ತಡೆ ಶಿಬಿರದ ವಾಚರ್‌ಗಳು, ಕಂಪ್ಯೂಟರ್ ಆಪರೇಟರ್‌ಗಳು ವೇತನ ಬಾರದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಗಟ್ಟಿಯಾಗಿ ಪ್ರಶ್ನಿಸಲಾಗದೆ ಅಸಹಾಯಕರಾಗಿದ್ದಾರೆ.

ಮಲೆ ಮಹದೇಶ್ವರ ವನ್ಯಜೀವಿ ವಿಭಾಗ 949 ಚದರ ಕಿ.ಮೀ ವಿಸ್ತೀರ್ಣ ಹೊಂದಿದ್ದು ಹೂಗ್ಯಂ, ಪಾಲಾರ್, ಎಂ.ಎಂ ಹಿಲ್ಸ್, ರಾಮಾಪುರ, ಪಿ.ಜಿ ಪಾಳ್ಯ, ಕೊಳ್ಳೇಗಾಲ ಹಾಗೂ ಹನೂರು ಬಫರ್ ವಲಯಗಳನ್ನು ಒಳಗೊಂಡಿದೆ. 7 ವಲಯಗಳಲ್ಲಿ 30ಕ್ಕೂ ಹೆಚ್ಚು ಕಳ್ಳಬೇಟೆ ತಡೆ ಶಿಬಿರಗಳಿದ್ದು 120ಕ್ಕೂ ಹೆಚ್ಚು ವಾಚರ್‌ಗಳು ಹಾಗೂ ಕಂಪ್ಯೂಟರ್ ಆಪರೇಟರ್‌ಗಳು ಹೊರಗುತ್ತಿಗೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮೈಸೂರಿನ ರಂಗನಾಥ ಎಲೆಕ್ಟ್ರಿಕಲ್ಸ್ ಕಂಪನಿಯು ಹೊರಗುತ್ತಿಗೆ ನೌಕರರಿಗೆ ವೇತನ ಪಾವತಿಯ ಟೆಂಡರ್ ಪಡೆದಿದ್ದು ಮಾರ್ಚ್‌ನಿಂದ ಜೂನ್‌ವರೆಗಿನ ವೇತನ ಪಾವತಿಸಿಲ್ಲ. 8 ತಿಂಗಳುಗಳಿಂದ 16ಸಾವಿರ ಸಂಕಷ್ಟ ಪರಿಹಾರ ಭತ್ಯೆಯನ್ನೂ ನೀಡಿಲ್ಲ ಎಂದು ನೌಕರರು ದೂರಿದ್ದಾರೆ.

ವೇದನೆ ತಿಳಿಯುತ್ತಿಲ್ಲ: ‘ಹೂಗ್ಯಂ ವಲಯದಲ್ಲಿ ಈಚೆಗೆ 5 ಹುಲಿಗಳ ಸಾವಿನ ಪ್ರಕರಣದಲ್ಲಿ ಅರಣ್ಯ ಇಲಾಖೆಯ ಕೆಳಹಂತದ ಸಿಬ್ಬಂದಿಯ ಕರ್ತವ್ಯ ನಿರ್ಲಕ್ಷ್ಯದತ್ತ ಬೊಟ್ಟು ಮಾಡಲಾಗುತ್ತಿದೆ. 4 ತಿಂಗಳಿನಿಂದ ವೇತನವಿಲ್ಲದೆ ದುಡಿಯುತ್ತಿರುವ ಸಿಬ್ಬಂದಿಯ ಮಾನಸಿಕ ವೇದನೆ ಯಾರಿಗೂ ತಿಳಿಯುತ್ತಿಲ್ಲ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಸಿಬ್ಬಂದಿಯೊಬ್ಬರು ಕಣ್ಣೀರು ಹಾಕಿದರು.

‘ಕಳ್ಳಬೇಟೆ ತಡೆ ಶಿಬಿರದ ವಾಚರ್‌ಗಳು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರತಿ ಸಿಬ್ಬಂದಿಯೂ ಕಾಡಿನೊಳಗೆ ನಿತ್ಯ ಕನಿಷ್ಠ 15 ಕಿ.ಮೀ. ನಡೆಯುತ್ತಾ ಕಳ್ಳಬೇಟೆ ತಡೆ, ಪತ್ತೆ ಸಹಿತ ಅಕ್ರಮ ಚಟುವಟಿಕೆಗಳ ಮೇಲೆ ನಿಗಾ ಇರಿಸಬೇಕು. ಅರಣ್ಯದೊಳಗೆ ಕಂಡುಬರುವ ವಿದ್ಯಮಾನಗಳನ್ನು ಹಿರಿಯ ಅಧಿಕಾರಿಗಳಿಗೆ ವರದಿ ಮಾಡಬೇಕು’ ಎಂದು ಅವರು ತಿಳಿಸಿದರು.

ಸಮಯದ ಮಿತಿ ಇಲ್ಲದೆ ದುಡಿದರೂ ತಿಂಗಳಿಗೆ 26ದಿನಗಳ ವೇತನ ನೀಡಲಾಗುತ್ತಿದೆ. ಪ್ರತಿ ತಿಂಗಳು ಸಾಲ ಮಾಡುವ ಪರಿಸ್ಥಿತಿ ಎದುರಾಗಿದೆ. ಬೇಸಿಗೆಯಲ್ಲಿ ದಟ್ಟಾರಣ್ಯದೊಳಗೆ ಬೆಂಕಿ ರೇಖೆಗಳ ನಿರ್ಮಾಣ, ಕಾಲುದಾರಿಗಳನ್ನು ಸ್ವಚ್ಛಗೊಳಿಸುವುದು ಸೇರಿದಂತೆ ಶ್ರಮದಾಯಕ ಕೆಲಸ ಮಾಡಿದರೂ ಸಮಯಕ್ಕೆ ಸರಿಯಾಗಿ ವೇತನ ಸಿಗುತ್ತಿಲ್ಲ’ ಎಂದು ಅಳಲು ತೋಡಿಕೊಂಡರು.

ಬಿಆರ್‌ಟಿ ಸಿಬ್ಬಂದಿಗೂ ವೇತನವಿಲ್ಲ: ಬಿಆರ್‌ಟಿ ಹುಲಿ ಸಂರಕ್ಷಿತ ಅರಣ್ಯ ವ್ಯಾಪ್ತಿಯ ಯಳಂದೂರು, ಕೊಳ್ಳೇಗಾಲ, ಬೈಲೂರು ವನ್ಯಜೀವಿ ವಲಯಗಳಲ್ಲಿ ಕಾರ್ಯನಿರ್ವಹಿಸುವ 120 ಹೊರಗುತ್ತಿಗೆ ನೌಕರರಿಗೆ 3 ತಿಂಗಳ ವೇತನ ಬಾಕಿ ಹಾಗೂ 10 ತಿಂಗಳು ಪಿಎಫ್, ಇಎಸ್‌ಐ ಬಾಕಿ ಇರುವ ದೂರುಗಳಿವೆ.

ವೇತನ ಪಾವತಿಗೆ ಟೆಂಡರ್ ಪಡೆದಿರುವ ಸಂಸ್ಥೆಗೆ, ಮೇನಲ್ಲೇ ಅಧಿಕಾರಿಗಳು ಶೋಕಾಸ್ ನೋಟಿಸ್ ಜಾರಿಗೊಳಿಸಿದ್ದರೂ ಇದುವರೆಗೂ ಸ್ಪಂದನೆ ದೊರೆತಿಲ್ಲ ಎನ್ನಲಾಗಿದೆ.

ಮುಖ್ಯಾಂಶಗಳು

- ಕಳ್ಳಬೇಟೆ ತಡೆ ಶಿಬಿರದಲ್ಲಿ 110ಕ್ಕೂ ಹೆಚ್ಚು ಹೊರಗುತ್ತಿಗೆ ಸಿಬ್ಬಂದಿ
- ಮೂಲಸೌಕರ್ಯಗಳ ಕೊರತೆ ಮಧ್ಯೆಯೂ ಕರ್ತವ್ಯ
- ಬಾಕಿ ವೇತನಕ್ಕಾಗಿ ಅಂಗಲಾಚಿದರೂ ಸಿಗದ ಸ್ಪಂದನೆ

‘ಬಾಕಿ ವೇತನ ಸಮಸ್ಯೆ ಬಗೆಹರಿದಿದೆ’

‘ಮೈಸೂರಿನ ಆರ್‌.ಸಿ ಬ್ಯುಸಿನೆಸ್ ಸಲ್ಯೂಷನ್ಸ್ ಸಂಸ್ಥೆಯು ವೇತನ ಪಾವತಿಯ ಟೆಂಡರ್ ಪಡೆದಿದ್ದು ವೇತನ ಪಾವತಿಯಲ್ಲಿ ವಿಳಂಬವಾಗಿತ್ತು. ತಾಂತ್ರಿಕ ಸಮಸ್ಯೆ ಹಾಗೂ ಗೊಂದಲಗಳು ಬಗೆಹರಿದಿದ್ದು ಹೊರಗುತ್ತಿಗೆ ನೌಕರರ ಖಾತೆಗೆ ಬಾಕಿ ವೇತನ ಜಮೆ ಮಾಡಲಾಗುತ್ತಿದೆ’ ಎಂದು ಬಿಆರ್‌ಟಿ ಹುಲಿ ಸಂರಕ್ಷಿತ ವಲಯದ ನಿರ್ದೇಶಕ ಶ್ರೀಪತಿ ತಿಳಿಸಿದ್ದಾರೆ.

> ಪ್ರಶ್ನಿಸಿದವರಿಗೆ ಮಾತ್ರ ಪಿಎಫ್, ಇಎಸ್‌ಐ ವಂತಿಗೆ ಪಾವತಿಸಲಾಗಿದೆ. ಬಹಳಷ್ಟು ಮಂದಿ ಎರಡೂ ಸೌಲಭ್ಯಗಳಿಂದ ವಂಚಿತರಾಗಿದ್ದೇವೆ
> **ಹೊರಗುತ್ತಿಗೆ ಸಿಬ್ಬಂದಿ**

> ಮಾರ್ಚ್ ಹಾಗೂ ಏಪ್ರಿಲ್ ವೇತನವನ್ನು ತಕ್ಷಣ ನೌಕರರ ಖಾತೆಗೆ ನೇರವಾಗಿ ಶೀಘ್ರದಲ್ಲೇ ಜಮಾ ಮಾಡಲಾಗುವುದು
> **ರಂಗನಾಥ,** ಟೆಂಡರ್‌ದಾರ

ಕುಲಪತಿ ಸೇರಿ 18 ಮಂದಿಗೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಹಣ ದುರ್ಬಳಕೆ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯಪಾಲರ ವಿಶೇಷ ಕರ್ತವ್ಯಾಧಿಕಾರಿ, ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಸೇರಿದಂತೆ 18 ಪ್ರತಿವಾದಿಗಳಿಗೆ ಹೈಕೋರ್ಟ್ ಜೂನ್ 26ರಂದು ನೋಟಿಸ್ ಜಾರಿಗೊಳಿಸಿದೆ.

ಕೆಎಸ್‌ಒಯು ಹಿಂದಿನ ಕುಲಪತಿಯಾಗಿದ್ದ, ಪ್ರಸ್ತುತ ವಿಟಿಯು ಕುಲಪತಿ ಆಗಿರುವ ಎಸ್.ವಿದ್ಯಾಶಂಕರ್, ಹಿಂದಿನ ಹಣಕಾಸು ಅಧಿಕಾರಿ ಸುಮತಿ ಆರ್. ಗೌಡ, ಹಿಂದಿನ ಕುಲಸಚಿವರಾದ ಖಾದರ್ ಪಾಷಾ, ಕೆ.ಎಲ್.ಎನ್. ಮೂರ್ತಿ, ಕೆ.ಬಿ. ಪ್ರವೀಣ, ವಿಶ್ವವಿದ್ಯಾಲಯದ ಹಣಕಾಸು ಇಲಾಖೆ, ರಾಜ್ಯ ಲೆಕ್ಕಪತ್ರ ಹಾಗೂ ಲೆಕ್ಕ ತಪಾಸಣಾ ಇಲಾಖೆ, ಲೋಕಾಯುಕ್ತ ಎಡಿಜಿಪಿ, ಬ್ಯಾಂಕ್ ಅಧಿಕಾರಿಗಳಿಗೂ ನೋಟಿಸ್ ನೀಡಲಾಗಿದೆ.

‘ವಿದ್ಯಾಶಂಕರ್ ತಮ್ಮ ಅವಧಿಯಲ್ಲಿ ಅನಧಿಕೃತ ಬ್ಯಾಂಕ್ ಖಾತೆ ತೆರೆದು ಸಂಸ್ಥೆಯ ಹಣ ದುರ್ಬಳಕೆ ಮಾಡಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕು’ ಎಂದು ಕೋರಿ ಕೆಎಸ್‌ಒಯುನಿಂದ ಅಮಾನತುಗೊಂಡಿರುವ ಸಹಾಯಕ ಪ್ರಾಧ್ಯಾಪಕ ಎಚ್. ಕೆ.ಜಗದೀಶ್ ಬಾಬು 2023ರ ಸೆ. 15ರಂದು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು.

‘ಭ್ರಷ್ಟಾಚಾರ ನಿಗ್ರಹ ಕಾಯ್ದೆ ಸೆಕ್ಷನ್ 17ಎ ಅಡಿ ಈ ಪ್ರಕರಣದ ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿ ಲೋಕಾಯುಕ್ತ ಅಧಿಕಾರಿಗಳು ಸಲ್ಲಿಸಿದ್ದ ಮನವಿಯನ್ನು ವಿಶ್ವವಿದ್ಯಾಲಯದ ಕುಲಾಧಿಪತಿಯೂ ಆದ ರಾಜ್ಯಪಾಲರು ತಿರಸ್ಕರಿಸಿದ್ದರು. ರಾಜ್ಯಪಾಲರ ನಡೆ ಪ್ರಶ್ನಿಸಿ ಹಾಗೂ ತನಿಖೆಗೆ ಅನುಮತಿ ಕೋರಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ಪ್ರತಿವಾದಿಗಳಿಗೆ ನೋಟಿಸ್ ನೀಡಿದೆ’ ಎಂದು ದೂರುದಾರ ಜಗದೀಶ ಬಾಬು ತಿಳಿಸಿದರು.

ಮುಖ್ಯಾಂಶಗಳು

- ಕರ್ನಾಟಕ ರಾಜ್ಯ ಮುಕ್ತ ವಿ.ವಿಯಲ್ಲಿ ಹಣ ದುರ್ಬಳಕೆ ಆರೋಪ
- ದೂರುದಾರರಿಂದ ತನಿಖೆಗೆ ಅನುಮತಿ ಕೋರಿ ರಿಟ್ ಅರ್ಜಿ

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in



ಸುಭಾಷಿತ

ದ್ವೇಷವನ್ನು ದ್ವೇಷದಿಂದಲೇ ಮುಗಿಸಲು ಹೊರಟರೆ ಪ್ರಪಂಚವೇ ಕುರುಡಾಗುತ್ತದೆ.

–ಮಹಾತ್ಮ ಗಾಂಧಿ

ಸಂಪಾದಕೀಯ

ಜನಸಂದಣಿ ನಿರ್ವಹಣೆಯ ಸವಾಲು ಪೊಲೀಸರಿಗೆ ಜನರ ಸಹಕಾರ ಅಗತ್ಯ

ಸಾರ್ವಜನಿಕ ಸಮಾರಂಭಗಳಲ್ಲಿ ಜನಸಂದಣಿ ನಿಯಂತ್ರಣಕ್ಕಾಗಿ ಪೊಲೀಸ್ ಇಲಾಖೆ ಹೊಸ 'ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ'ವನ್ನು (ಎಸ್‌ಒಪಿ) ರೂಪಿಸಿರುವುದು ತೀರಾ ಅಗತ್ಯವಾಗಿದ್ದ ಕ್ರಮ. 'ಐಪಿಎಲ್' ಟಿ-20 ಕ್ರಿಕೆಟ್ ಟೂರ್ನಿಯ ಹದಿನೆಂಟನೇ ಆವೃತ್ತಿಯಲ್ಲಿ 'ರಾಯಲ್ ಚಾಲೆಂಜರ್ಸ್ ಬೆಂಗಳೂರು' ತಂಡ ಚಾಂಪಿಯನ್ ಆದುದನ್ನು ಸಂಭ್ರಮಿಸುವ ವಿಜಯೋತ್ಸವ ಆಚರಣೆಯ ಸಂದರ್ಭದಲ್ಲಿ, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ ಹನ್ನೊಂದು ಮಂದಿ ಸಾವಿಗೀಡಾಗಿದ್ದರು. ಆ ದುರಂತದ ಹಿನ್ನೆಲೆಯಲ್ಲಿ ಜಾಗೃತಗೊಂಡಿರುವ ಪೊಲೀಸ್ ಇಲಾಖೆ ಹೊಸ 'ಎಸ್‌ಒಪಿ' ರಚಿಸಿದೆ. ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವ ಬೃಹತ್ ಕಾರ್ಯಕ್ರಮಗಳು, ಸಭೆ ಹಾಗೂ ವಿಜಯೋತ್ಸವದಂಥ ಕಾರ್ಯಕ್ರಮಗಳಲ್ಲಿ ಸಂಭವಿಸಬಹುದಾದ ಅಹಿತಕರ ಘಟನೆಗಳನ್ನು ತಡೆಗಟ್ಟುವ ಉದ್ದೇಶದಿಂದ ಹೊಸ 'ಎಸ್‌ಒಪಿ' ರಚಿಸುವುದಾಗಿ ಗೃಹ ಸಚಿವರು ತಿಳಿಸಿದ್ದರು. ಹಬ್ಬಗಳು, ರ‍್ಯಾಲಿಗಳು, ಕ್ರೀಡೆಗಳು ಮುಂತಾದ ಬೃಹತ್ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಜನಸಂದಣಿಯನ್ನು ನಿರ್ವಹಿಸುವುದು ಸುಲಭವಲ್ಲ. ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಕೊಂಚ ಏರುಪೇರಾದರೂ ಅಪಾಯ ಸಂಭವಿಸುವ ಸಾಧ್ಯತೆಯಿರುತ್ತದೆ. ಜನಸಂದಣಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದರೊಂದಿಗೆ ಸಂಭಾವ್ಯ ಅಪಾಯಗಳನ್ನು ತಪ್ಪಿಸುವುದು ಹೊಸ 'ಎಸ್‌ಒಪಿ'ಯ ಉದ್ದೇಶವಾಗಿದೆ.


ಸುರಕ್ಷತಾ ಕ್ರಮಗಳ ಪರಿಶೀಲನೆಯಲ್ಲಿ ಸೂಕ್ತವೆಂದು ಕಂಡುಬಾರದ ಸ್ಥಳಗಳಲ್ಲಿ ಬೃಹತ್ ಕಾರ್ಯಕ್ರಮಗಳ ಆಯೋಜನೆಗೆ ನಿರಾಕರಣೆ, ಬೆಂಕಿ ಮತ್ತು ಕಾಲ್ತುಳಿತದಂತಹ ಅವಘಡಗಳ ನಿಯಂತ್ರಣಕ್ಕೆ ತುರ್ತು ಸಿದ್ಧತೆ ಮಾಡಿಕೊಳ್ಳುವುದು, ಜನಸಮೂಹದ ವರ್ತನೆಯ ಪರಿಶೀಲನೆ, ಜನಸಂದಣಿ ನಿರ್ವಹಣೆಗೆ ಪೂರ್ವ ತಯಾರಿ, ಆಯೋಜಕರೊಂದಿಗೆ ಸಮನ್ವಯ ಸೇರಿದಂತೆ, ಜನಸಂದಣಿ ನಿರ್ವಹಣೆಗೆ ಅಗತ್ಯವಾದ ಅನೇಕ ಅಂಶಗಳನ್ನು ಮಾರ್ಗಸೂಚಿ ಒಳಗೊಂಡಿದೆ. ತುರ್ತು ಸಂದರ್ಭದಲ್ಲಿ ವ್ಯಕ್ತಿಯ ಜೀವ ಉಳಿಸಲು 'ಕಾರ್ಡಿಯೊ ಪಲ್ಮನರಿ ರಿಸಸಿಟೇಶನ್' (ಸಿಪಿಆರ್) ಕುರಿತು ಪೊಲೀಸರಿಗೆ ತರಬೇತಿ ನೀಡಲು ಇಲಾಖೆ ಉದ್ದೇಶಿಸಿದೆ. ಇದರಿಂದಾಗಿ ತುರ್ತು ಸನ್ನಿವೇಶದಲ್ಲಿ ವ್ಯಕ್ತಿಯ ಜೀವ ಉಳಿಸಲು ಅಗತ್ಯವಾದ ಪ್ರಥಮ ಚಿಕಿತ್ಸೆಯನ್ನು ನೀಡಲು ಪೊಲೀಸರಿಗೆ ಸಾಧ್ಯವಾಗಲಿದೆ.



ಜನಸಂದಣಿ ನಿರ್ವಹಣೆಗೆ ಪೊಲೀಸ್ ಇಲಾಖೆ 'ಎಸ್‌ಒಪಿ' ರೂಪಿಸಿರುವುದು ಸ್ವಾಗತಾರ್ಹ. ಹೆಚ್ಚು ಜನ ಸೇರುವ ಸಂದರ್ಭಗಳು ಹೆಚ್ಚಾಗುತ್ತಿದ್ದು, ಅವುಗಳ ನಿರ್ವಹಣೆಗೆ ಹೊಸ 'ಎಸ್‌ಒಪಿ' ಅನುಕೂಲಕರ.

ಭಾರಿ ಜನಸಂದಣಿ ಸೇರುವ ಸಂದರ್ಭದಲ್ಲಿ ಅಹಿತಕರ ಘಟನೆಗಳು ಹಾಗೂ ಸಾವುನೋವಿಗೆ ಕಾರಣವಾಗಬಹುದಾದ ಕಾಲ್ತುಳಿತ ಸಂಭವಿಸುವುದು ಇತ್ತೀಚೆಗೆ ಹೆಚ್ಚಾಗಿದೆ. ವಿವಿಧ ಉದ್ದೇಶಗಳಿಂದ ನಡೆಯುವ ಸಮಾವೇಶಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನ ಸೇರುವುದಿದೆ. ಲಕ್ಷಾಂತರ ಮಂದಿ ಸೇರುವ ಜಾತ್ರೆಗಳು ನಾಡಿನ ವಿವಿಧ ಭಾಗಗಳಲ್ಲಿ ನಡೆಯುತ್ತವೆ. ಇಂಥ ಸಂದರ್ಭಗಳಲ್ಲಿ ಜನಸಂದಣಿಯ ನಿರ್ವಹಣೆ ಪೊಲೀಸರಿಗೆ ದೊಡ್ಡ ಸವಾಲು. ಜನಸಂದಣಿಯನ್ನು ನಿರ್ವಹಿಸುವುದರ ಜೊತೆಗೆ ದುರ್ಘಟನೆಗಳು ಸಂಭವಿಸದಂತೆ ನೋಡಿಕೊಳ್ಳಲು ಪೊಲೀಸ್ ಇಲಾಖೆ ಹೊಸ 'ಎಸ್‌ಒಪಿ' ಜಾರಿಗೆ ತಂದಿರುವುದು ಮಹತ್ವದ ಕ್ರಮ. ಆದರೆ, ಈ ಮಾರ್ಗಸೂಚಿ ಕಡತದಲ್ಲಷ್ಟೇ ಉಳಿಯದೆ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವ ಇಚ್ಛಾಶಕ್ತಿಯನ್ನು ಇಲಾಖೆ ಪ್ರದರ್ಶಿಸಬೇಕು. ರಾಜಕಾರಣಿಗಳು, ಅಧಿಕಾರಿಗಳು, ಪ್ರಭಾವಿ ವ್ಯಕ್ತಿಗಳ ಇಶಾರೆಗೆ ಓಗೊಡದೆ ಕರ್ತವ್ಯವನ್ನು ನಿರ್ವಹಿಸುವುದು ಪೊಲೀಸರಿಗೆ ಸಾಧ್ಯವಾದರೆ, ಅಪಾಯಗಳ ಪ್ರಮಾಣ ಹಾಗೂ ಪರಿಣಾಮ ಸಾಕಷ್ಟು ಕಡಿಮೆಯಾಗುತ್ತದೆ. ಕಾಲ್ತುಳಿತ ದುರಂತದಂತಹ ಬಹುತೇಕ ಘಟನೆಗಳಲ್ಲಿ ಪೊಲೀಸ್ ವೈಫಲ್ಯದ ಜೊತೆಗೆ ಆಯೋಜಕರ ನಿರ್ಲಕ್ಷ್ಯವೂ ಮುಖ್ಯ ಪಾತ್ರ ವಹಿಸುತ್ತದೆ. ಕಾನೂನು ಮತ್ತು ಸುವ್ಯವಸ್ಥೆಯ ವಿವೇಚನೆಯಿಲ್ಲದೆ ಅತಿ ಉತ್ಸಾಹದಿಂದ ಜನ ಸೇರಿಸುವವರೂ ಇದ್ದಾರೆ. ಇಂಥ ಕಾರ್ಯಕ್ರಮಗಳ ಆಯೋಜನೆಯ ಹಿಂದೆ ಕೆಲವೊಮ್ಮೆ ಸರ್ಕಾರದ ನೇರ ಅಥವಾ ಪರೋಕ್ಷ ಪಾತ್ರವೂ ಇರುತ್ತದೆ. ಪೊಲೀಸ್ ಇಲಾಖೆ ಸಿದ್ಧಪಡಿಸಿರುವ ಹೊಸ 'ಎಸ್‌ಒಪಿ' ಜನರ ಸುರಕ್ಷತೆಗೆ ಒತ್ತು ನೀಡುವಂತಿದೆ. ಭಾರಿ ಸಂಖ್ಯೆಯಲ್ಲಿ ಜನರನ್ನು ಸೇರಿಸುವುದು ಬಹು ದೊಡ್ಡ ಹೊಣೆಗಾರಿಕೆ ಎನ್ನುವುದನ್ನು ಸಂಘಟಕರು ಅರ್ಥ ಮಾಡಿಕೊಂಡು ಕಾರ್ಯಕ್ರಮಗಳನ್ನು ಆಯೋಜಿಸಿದರೆ, ಅಹಿತಕರ ಘಟನೆಗಳ ಸಾಧ್ಯತೆ ಸಾಕಷ್ಟು ಕಡಿಮೆಯಾಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಜನ ಒಂದೆಡೆ ಸೇರಿದಾಗ ವಿವೇಚನೆಯಿಂದ ವರ್ತಿಸುವ ಹೊಣೆಗಾರಿಕೆ ನಾಗರಿಕರದ್ದೂ ಆಗಿದೆ.

ಕಾರ್ಪೊರೇಟ್ ಹಿತಾಸಕ್ತಿ...



ರೈತರು ಭೂಮಿ ಕೊಡುವುದಿಲ್ಲ ಎಂದರೆ ಅದನ್ನು ಬಲಾತ್ಕಾರದಿಂದ ಕಿತ್ತುಕೊಳ್ಳುವುದು ತಪ್ಪು. ರಾಜ್ಯ ಸರ್ಕಾರವು ಕಾರ್ಪೊರೇಟ್ ಹಿತಾಸಕ್ತಿಗಳ ಸೇವಕನಂತೆ ವರ್ತಿಸುತ್ತಿದೆ. ಜುಲೈ 4ರಂದು ದೇವನಹಳ್ಳಿ-ಚನ್ನರಾಯಪಟ್ಟಣ ರೈತ ಹೋರಾಟಗಾರರ ಜತೆಗೆ ಸಭೆ ನಡೆಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಇಲ್ಲಿ ರೈತ ಪರವಾದ ನಿರ್ಣಯ ಹೊರಬರಲಿ.

ರಹಮತ್ ತರೀಕೆರೆ, ಸಾಹಿತಿ, ಫೇಸ್‌ಬುಕ್‌ನಿಂದ

ಕಿಡಿನುಡಿ



ಮೂರು ದಶಕಗಳಿಂದ ಬೆಳಗಾವಿ ಜಿಲ್ಲಾ ವಿಭಜನೆ ಪ್ರಕ್ರಿಯೆ ನನೆಗುದಿಗೆ ಬಿದ್ದಿದೆ. ಜಿಲ್ಲೆಯ ವಿಭಜನೆಗೆ ಈ ಹಿಂದೆ ವಿವಿಧ ಆಯೋಗಗಳು ಸರ್ಕಾರಕ್ಕೆ ವರದಿ ಕೊಟ್ಟಿವೆ. ಆದರೆ, ಕೆಲವರ ಹಿತಾಸಕ್ತಿಯಿಂದ ಇಂದಿಗೂ ಬೇಡಿಕೆ ಈಡೇರಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಉತ್ಸುಕರಿದ್ದಾರೆ. ಸರ್ಕಾರ ನಾಂದಿ ಹಾಡಬೇಕು.

ಈರಣ್ಣ ಕಡಾಡಿ, ರಾಜ್ಯಸಭಾ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 3-7-2000

• ಹುಬ್ಬಳ್ಳಿಗೆ ರೈಲ್ವೆ ವಲಯ: ಕೇಂದ್ರ ಪರಿಶೀಲನೆ

ಬೆಂಗಳೂರು, ಜುಲೈ 2– ಹುಬ್ಬಳ್ಳಿಯಲ್ಲಿ ಪ್ರತ್ಯೇಕ ರೈಲ್ವೆ ವಲಯ ಸ್ಥಾಪನೆ ಕುರಿತು 'ಪರಿಶೀಲಿಸಬಹುದು' ಎಂದು ಕೇಂದ್ರ ರೈಲ್ವೆ ಖಾತೆಯ ರಾಜ್ಯ ಸಚಿವ ಬಂಗಾರು ಲಕ್ಷ್ಮಣ್ ಅವರು, ಇಂದು ಇಲ್ಲಿ ಹೇಳಿದರು.

ಬೆಂಗಳೂರು– ಜೋಧಪುರ್ ಎಕ್ಸ್‌ಪ್ರೆಸ್ ರೈಲಿಗೆ ಹಸಿರು ನಿಶಾನೆ ತೋರಿಸಲು ಇಲ್ಲಿಗೆ ಆಗಮಿಸಿದ್ದ ಅವರು, 'ಪ್ರತ್ಯೇಕ ರೈಲ್ವೆ ವಲಯ ಸ್ಥಾಪನೆ ಅಸಾಧ್ಯವೇನೂ ಅಲ್ಲ' ಎಂಬುದನ್ನು ಪತ್ರಿಕಾಗೋಷ್ಠಿಯಲ್ಲಿ ಸೂಚ್ಯವಾಗಿ ಹೇಳಿದರು.

ಬೆಂಗಳೂರಿನಲ್ಲಿಯೇ ನೈರುತ್ಯ ರೈಲ್ವೆ ವಲಯ ಉಳಿಯಬೇಕು ಎಂದು ಕರ್ನಾಟಕ ಹೈಕೋರ್ಟ್ ನೀಡಿರುವ ತೀರ್ಪಿನ ಬಗ್ಗೆ ಕೇಂದ್ರ ಕಾನೂನು ಸಚಿವಾಲಯದೊಂದಿಗೆ ಸಮಾಲೋಚಿಸಲಾಗುವುದು. ಇಡೀ ತೀರ್ಪನ್ನು ಆಮೂಲಾಗ್ರವಾಗಿ ಪರಿಶೀಲಿಸಿದ ನಂತರವೇ 'ಕೇಂದ್ರ ಮುಂದಿನ ಹೆಜ್ಜೆ ಇಡಲು ಸಾಧ್ಯ' ಎಂದು ಅವರು ನುಡಿದರು.

• ಫುಟ್‌ಬಾಲ್: ಫ್ರಾನ್ಸ್ ಮಡಿಲಿಗೆ ಯೂರೊ ಕಪ್

ರೊಟರ್ಡಮ್, ಜುಲೈ 2– ಫ್ರಾನ್ಸ್‌ನ ಫುಟ್‌ಬಾಲ್ ತಂಡವು ಯೂರೊ ಕಪ್ ಅನ್ನು ಮುಡಿಗೇರಿಸಿಕೊಂಡಿತು. ಇಂದು ನಡೆದ ಫೈನಲ್‌ನಲ್ಲಿ ಇಟಲಿ ತಂಡವನ್ನು 2–1 ಗೋಲುಗಳಿಂದ ಸೋಲಿಸಿತು.

75 ವರ್ಷಗಳ ಹಿಂದೆ

ಸೋಮವಾರ, 3-7-1950

• ಕಾಂಗ್ರೆಸ್ಸೇ ದೇಶದ ಇಂದಿನ ದುಃಸ್ಥಿತಿಗೆ ಕಾರಣ: ಆಚಾರ್ಯ ಕೃಪಲಾನಿಯವರ ವಿಶ್ಲೇಷಣೆ

ಕಾನ್‌ಪುರ, ಜುಲೈ 2– ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ಆಚಾರ್ಯ ಜೆ.ಬಿ. ಕೃಪಲಾನಿ ಅವರು ಈ ದಿನ 'ಸ್ವರಾಜ್ಯ ಆಶ್ರಮ'ದ ಆರಂಭೋತ್ಸವ ಮಾಡುತ್ತ, ಜನತೆ ಗಾಂಧೀ ಮಾರ್ಗವನ್ನು ಅನುಸರಿಸಬೇಕು. ಅದೊಂದೇ ಮುಕ್ತಿ ಪಥ ತೋರಬಲ್ಲದು ಎಂಬುದಾಗಿ ಮನವಿ ಮಾಡಿಕೊಂಡರು.

ಮುಂದುವರಿದು, ಕಾಂಗ್ರೆಸ್ ಸಂಸ್ಥೆಯೂ, ಕಾಂಗ್ರೆಸ್ ಸರ್ಕಾರಗಳೂ ಮಹಾತ್ಮ ಗಾಂಧೀಯವರು ಹಾಕಿಕೊಟ್ಟಿರುವ ಹಾದಿಯನ್ನು ಬಿಟ್ಟು 'ರಾಜಕೀಯ ಪ್ರದರ್ಶನಗಳನ್ನು ಕೈಗೊಂಡಿರುವುದೇ ಇಂದಿನ ಕಷ್ಟಗಳಿಗೂ, ಅಶಾಂತಿಗೂ ಕಾರಣ ಎಂದರು.

ಇದು ದ್ವಿಭಾಷಾ ಸೂತ್ರದ ಸಮಯ



ವಿಶ್ಲೇಷಣೆ

ಪುರುಷೋತ್ತಮ ಬಿಳಿಮಲೆ

1948-49ರಲ್ಲಿ ವಿಶ್ವವಿದ್ಯಾಲಯ ಶಿಕ್ಷಣ ಆಯೋಗವು ಬೆಲ್ಜಿಯಂ, ಸ್ವಿಟ್ಜರ್ಲೆಂಡ್‌ನಂತಹ ಬಹುಭಾಷಾ ರಾಷ್ಟ್ರಗಳಿಂದ ಪ್ರೇರಣೆ ಪಡೆದು, ಭಾರತೀಯರು ಮೂರು ಭಾಷೆಗಳನ್ನು ಕಲಿಯುವ ಅಗತ್ಯವನ್ನು ಪ್ರತಿಪಾದಿಸಿತು. ಆಗ ಹಿಂದಿಯು ಈಗಿನಷ್ಟು ವ್ಯಾಪಕವಾಗಿ ಪಸರಿಸಿರಲಿಲ್ಲ. ಆಗಿನ ಶಿಕ್ಷಣ ತಜ್ಞರು ಹಿಂದಿಯನ್ನು ಕನ್ನಡ, ತೆಲುಗು, ತಮಿಳು, ಮರಾಠಿ, ಬಾಂಗ್ಲಾ, ಪಂಜಾಬಿ, ಮಲಯಾಳ, ಅಸ್ಸಾಮಿ, ಗುಜರಾತಿ ಮೊದಲಾದ ಭಾಷೆಗಳಿಗಿಂತ ಶ್ರೇಷ್ಠ ಎಂದೂ ಭಾವಿಸಿರಲಿಲ್ಲ. ಆದರೆ, ಆಯೋಗಕ್ಕೆ ಮುಂದೊಂದು ದಿನ ಇಂಗ್ಲಿಷಿನ ಬದಲು ಹಿಂದಿಯನ್ನು ತರುವ ಆಲೋಚನೆಯಂತೂ ಇತ್ತು.

ಜವಾಹರಲಾಲ್ ನೆಹರೂ ಅವರಿಗೆ ದಕ್ಷಿಣ ಭಾರತೀಯರ ಉತ್ಕಟ ಭಾಷಾಭಿಮಾನ ಹಾಗೂ ಅವರ ಭಾಷೆಗಳ ಸಾಹಿತ್ಯಿಕ ಶ್ರೀಮಂತಿಕೆಯ ಬಗ್ಗೆ ತಿಳಿವಳಿಕೆ ಇದ್ದುದರಿಂದ, ಹಿಂದಿಯನ್ನು ಇಂಗ್ಲಿಷಿನ ಜಾಗದಲ್ಲಿ ಪ್ರತಿಷ್ಠಾಪಿಸುವುದನ್ನು ಅವರು ಮುಂದೆ ತಳ್ಳುತ್ತಲೇ ಇದ್ದರು. ಅವರ ನಂತರದ ಪ್ರಧಾನಿಗಳೂ ಇದೇ ಮಾದರಿಯನ್ನು ಅನುಸರಿಸಿದರು. ಈಗ ಪರಿಸ್ಥಿತಿ ಬದಲಾಗಿದೆ. 'ಇಂಗ್ಲಿಷ್ ಮಾತನಾಡುವವರು ಭವಿಷ್ಯದಲ್ಲಿ ನಾಚಿಕೆಪಡುವಂತೆ ಆಗುತ್ತದೆ' ಎಂದೂ, ಹಿಂದಿಯು ಭಾರತದ ಎಲ್ಲ ಭಾಷೆಗಳ ಸ್ನೇಹಿತನೆಂದೂ ಸ್ವತಃ ಗೃಹ ಸಚಿವರೇ ಘೋಷಿಸಿದ್ದಾರೆ. ಇದು ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಲು ಅವರು ಇಟ್ಟಿರುವ ಹೆಜ್ಜೆ.

ಅಮಿತ್ ಶಾ ಅವರು ಭಾಷಾತಜ್ಞರಲ್ಲ. ಆದರೆ, ಅವರ ಕೈಯಲ್ಲಿ ಅಮಿತವಾದ ಅಧಿಕಾರವಿದೆ. ಅವರಿಗೆ ದೊಡ್ಡ ಸಂಖ್ಯೆಯ ಹಿಂಬಾಲಕರೂ ಇದ್ದಾರೆ. ಜೊತೆಗೆ ಕಾನೂನಿನ ಬಲವೂ ಇದೆ. ಹಿಂದಿಯು ಗೃಹ ಇಲಾಖೆ ಅಡಿಯಲ್ಲಿ ಬರುವುದರಿಂದಾಗಿ (ಉಳಿದ ಭಾಷೆಗಳು ಮಾನವ ಸಂಪನ್ಮೂಲ ಇಲಾಖೆಯಡಿ ಬರುತ್ತವೆ), ಅವರಿಗಿದನ್ನು ಮಾಡುವುದೂ ಸುಲಭ.

ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಹಿಂದಿಯ ಅಭಿವೃದ್ಧಿಗಾಗಿ ರಚಿತವಾದ 30 ಸದಸ್ಯರನ್ನು ಒಳಗೊಂಡ ಉನ್ನತ ಸಮಿತಿಯ ಶಿಫಾರಸುಗಳು ಸಂಸತ್ತಿಗೂ ಹೋಗದೆ ನೇರವಾಗಿ ರಾಷ್ಟ್ರಪತಿಗೆ ಹೋಗುತ್ತವೆ. ಅವರ ಅಂಕಿತ ಬಿದ್ದ ತಕ್ಷಣ ಕಾನೂನಾಗಿ ಪರಿವರ್ತನೆಗೊಳ್ಳುತ್ತದೆ. ಆಮೇಲೆ ಅದನ್ನು ನ್ಯಾಯಾಲಯದಲ್ಲೂ ಪ್ರಶ್ನಿಸಲಾಗುವುದಿಲ್ಲ. ಭಾರತದ ಇತರ ಭಾಷೆಗಳಿಗೆ ಈ ಅವಕಾಶವಿಲ್ಲ. ಕರ್ನಾಟಕ ಸರ್ಕಾರವು ಕನ್ನಡವನ್ನು ಪ್ರಾಥಮಿಕ ಶಿಕ್ಷಣದಲ್ಲಿ ಕಡ್ಡಾಯಗೊಳಿಸಲು ಹೊರಟಾಗ ಸುಪ್ರೀಂ ಕೋರ್ಟ್ ಅದನ್ನು ತಿರಸ್ಕರಿಸಿದ್ದು (2015ರಲ್ಲಿ) ಇದಕ್ಕೆ ಉದಾಹರಣೆ.

1964–1966ರ ಕೊಠಾರಿ ಆಯೋಗವು ಶ್ರೇಣೀಕೃತ ತ್ರಿಭಾಷಾ ಸೂತ್ರವನ್ನು ಶಿಫಾರಸು ಮಾಡಿತು. ಕೆಲವು ಚರ್ಚೆಗಳ ನಂತರ, 1968ರಲ್ಲಿ ಸಂಸತ್ತು ಅದನ್ನು ಅಂಗೀಕರಿಸಿತು. ಗಮನಿಸಬೇಕಾದ ಅಂಶವೆಂದರೆ, ಈ ಸೂತ್ರವನ್ನು ಭಾರತದ ಬೇರೆ ಬೇರೆ ರಾಜ್ಯಗಳು ಒಂದೇ ರೀತಿಯಲ್ಲಿ ಅನುಷ್ಠಾನಕ್ಕೆ ತರಲೇ ಇಲ್ಲ. ಉದಾಹರಣೆಗೆ, ಕರ್ನಾಟಕವು ತ್ರಿಭಾಷಾ ಸೂತ್ರವನ್ನು ಅದು ಇರುವ ರೀತಿಯಲ್ಲಿಯೇ ಅಂಗೀಕರಿಸಿತು. ತಮಿಳುನಾಡು ಅದನ್ನು ಪೂರ್ಣವಾಗಿ ತಿರಸ್ಕರಿಸಿ, ತಮಿಳು ಮತ್ತು ಇಂಗ್ಲಿಷನ್ನು ಮಾತ್ರ ಕಲಿಸುವ ದ್ವಿಭಾಷಾ ನೀತಿಗೆ ಅಂಟಿಕೊಂಡಿತು.

ಉತ್ತರ ಭಾರತದ ರಾಜ್ಯಗಳು ಅದನ್ನು ಪಾರ್ಶ್ವಿಕವಾಗಿ ಅಂಗೀಕರಿಸಿದವು. ಕೊಠಾರಿ ಆಯೋಗದಲ್ಲಿ ಹೇಳಿದ, 'ಹಿಂದಿ ಮಾತನಾಡುವ ರಾಜ್ಯಗಳು ಹಿಂದಿ, ಇಂಗ್ಲಿಷ್ ಮತ್ತು ಆಧುನಿಕ ಭಾರತೀಯ ಭಾಷೆಯನ್ನು (ದಕ್ಷಿಣ ಭಾರತದ ಭಾಷೆಗಳಲ್ಲಿ ಒಂದು) ಕಲಿಯಬೇಕು ಎಂಬುದನ್ನು ಹಿಂದಿ ರಾಜ್ಯಗಳು ಒಪ್ಪಲಿಲ್ಲ. ಅವು ದಕ್ಷಿಣ ಭಾರತದ ಒಂದು ಭಾಷೆಯ ಬದಲು ಸಂಸ್ಕೃತವನ್ನು ಆಯ್ದುಕೊಂಡವು. ಇದರಿಂದಾಗಿ ಉತ್ತರ ಭಾರತೀಯರಿಗೆ ದಕ್ಷಿಣ ಭಾರತದ ಭಾಷೆಗಳ ಬಗ್ಗೆ ಏನೂ ಗೊತ್ತಿಲ್ಲದ ವಾತಾವರಣ ನಿರ್ಮಾಣವಾಯಿತು. ದೆಹಲಿ ವಿಶ್ವವಿದ್ಯಾಲಯದ ಹಿಂದಿ ಪ್ರಾಧ್ಯಾಪಕರೊಬ್ಬರು ನನ್ನಲ್ಲಿ 'ಕನ್ನಡ ಎಲ್ಲಿಯ ಭಾಷೆ' ಎಂದು ಕೇಳಿದ್ದುಂಟು. ಹತಾಶೆಗೊಂಡ ನಾನು 'ಕನ್ನಡ ಕೆನಡಾ ದೇಶದ ಭಾಷೆ' ಎಂದು ಹೇಳಿ ಅವರನ್ನು ಸಾಗಹಾಕಿದ್ದೆ!

1986ರ 'ರಾಷ್ಟ್ರೀಯ ಶಿಕ್ಷಣ ನೀತಿ'ಯು 1968ರ ಸೂತ್ರವನ್ನು ಪುನರುಚ್ಚರಿಸಿದೆ. 2020ರಲ್ಲಿ ಬಿಡುಗಡೆಯಾದ 'ಹೊಸ ಶಿಕ್ಷಣ ನೀತಿ'ಯು ತ್ರಿಭಾಷಾ ಸೂತ್ರದ ಸಾಧಕ, ಬಾಧಕಗಳ ಬಗ್ಗೆ ಯಾವುದೇ ಚರ್ಚೆ ನಡೆಸದೆ, ಅನುಮೋದನೆ ನೀಡಿದೆ. ಒಂದೇ ಬದಲಾವಣೆ ಎಂದರೆ, ಹೊಸ ಶಿಕ್ಷಣ ನೀತಿಯಲ್ಲಿ ಯಾವುದೇ ಭಾಷೆಯನ್ನು ಕಡ್ಡಾಯಗೊಳಿಸಲಾಗಿಲ್ಲ. ಇದರ ಕರಡು ನೀತಿಯನ್ನು ಚರ್ಚೆಗಾಗಿ ಬಿಡುಗಡೆ ಮಾಡಿದ ಸಂದರ್ಭದಲ್ಲಿ ನಾವು ಕೆಲವರು '1968ರಿಂದಲೂ ತ್ರಿಭಾಷಾ ಸೂತ್ರವನ್ನು ನಿಷ್ಠೆಯಿಂದ ಅನುಸರಿಸಿಕೊಂಡು ಬಂದಿರುವ ಕರ್ನಾಟಕಕ್ಕೆ ಹೊಸ ಶಿಕ್ಷಣ ನೀತಿಯಿಂದ ಏನು ಲಾಭ ಆಗಿದೆ ಅಥವಾ ನಷ್ಟವಾಗಿದೆ? ಅದೇ ಮಾನದಂಡವನ್ನು ಆಧರಿಸಿ, ತ್ರಿಭಾಷಾ ಸೂತ್ರವನ್ನು ತಿರಸ್ಕರಿಸಿದ್ದರಿಂದ ತಮಿಳುನಾಡಿಗೆ ಏನು ನಷ್ಟವಾಗಿದೆ ಅಥವಾ ಲಾಭವಾಗಿದೆ? ಉತ್ತರ ಭಾರತೀಯರು ದಕ್ಷಿಣ ಭಾರತದ ಭಾಷೆಗಳನ್ನು ಕಲಿಯದೇ ಇದ್ದುದರಿಂದ ರಾಷ್ಟ್ರೀಯ ಏಕತೆಗೆ ಭಂಗವಾಗಿಲ್ಲವೇ?' ಎಂಬಂಥ ಪ್ರಶ್ನೆಗಳ ಕುರಿತು ಚರ್ಚಿಸಲು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೆವು.

ಆದರೆ, ಅಂಥ ಯಾವುದೇ ಚರ್ಚೆಗೆ ಸರ್ಕಾರ ಅವಕಾಶ ನೀಡಲಿಲ್ಲ. ಈ ಕುರಿತು 'ಕನ್ನಡ ಅಭಿವೃದ್ಧಿ ಪ್ರಾಧಿಕಾರ'ವು, 2024ರ ಡಿಸೆಂಬರ್ 17ರಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರನ್ನು ಅವರ ಕಚೇರಿಯಲ್ಲಿಯೇ ಭೇಟಿಯಾಗಿ ಕೇಳಿದಾಗ, ಅವರೂ ಸರಿಯಾದ ಉತ್ತರ ನೀಡಲಿಲ್ಲ. ಮತ್ತೆ ಮತ್ತೆ ಕೇಳಿದಾಗ ಕೋಪಗೊಂಡ ಅವರು, 'ಭಾಷಾ ವಿಷಯದಲ್ಲಿ ನೀವು ರಾಜಕೀಯ ಮಾಡಬೇಡಿ' ಎಂಬ ಉಪದೇಶವನ್ನೂ ಮಾಡಿದರು.

> ತ್ರಿಭಾಷಾ ಸೂತ್ರದ ಮೂಲಕ ಹಿಂದಿಯೇತರ ಭಾಷಿಕರ ಮೇಲೆ ಹಿಂದಿಯನ್ನು ಹೇರುವ ಪ್ರಯತ್ನಗಳು ಮುಂದುವರಿದಿವೆ. ಆದರೆ, ಕನ್ನಡ ಭಾಷೆಯ ಅಭಿವೃದ್ಧಿ ಹಾಗೂ ಕನ್ನಡಿಗರಿಗೆ ಉದ್ಯೋಗದ ಅವಕಾಶ ಹೆಚ್ಚಿಸಲು ದ್ವಿಭಾಷಾ ಸೂತ್ರವೇ ಅನುಕೂಲ. ದ್ವಿಭಾಷಾ ಸೂತ್ರದಿಂದ ರಾಷ್ಟ್ರೀಯ ಏಕತೆ ಮತ್ತು ಬಹುಭಾಷಿಕ ಗುರುತುಗಳ ಸಮತೋಲನವೂ ಸಾಧ್ಯ.

ಈಗ ಹಿಂದಿ ಭಾಷೆಯು ನಮ್ಮ ದೈನಂದಿನ ಬದುಕಿನ ವ್ಯವಹಾರಗಳೊಳಗೆ ಪ್ರವೇಶಿಸಿ, ಕನ್ನಡವೂ ಸೇರಿದಂತೆ, ಹಿಂದಿಯೇತರ ಜನರ ತಾಯ್ನುಡಿಗಳನ್ನು ಅಂಚಿಗೆ ತಳ್ಳಿದೆ. 1960ರ ದಶಕದ ಕೊನೆಯಲ್ಲಿ ಹಿಂದಿಯನ್ನು 50 ಅಂಕಗಳಿಗೆ ವಿದ್ಯಾರ್ಥಿಗಳು ಕಲಿಯುತ್ತಿದ್ದರೂ, ಅದರಲ್ಲಿ ತೇರ್ಗಡೆಯಾಗಲೇಬೇಕೆಂಬ ನಿಯಮ ಇರಲಿಲ್ಲ. ಹಿಂದಿಯನ್ನು ನೂರು ಅಂಕಗಳಿಗೇರಿಸಿದ ನಂತರ, ತೇರ್ಗಡೆಯಾಗಲು 35 ಅಂಕಗಳನ್ನು ನಿಗದಿಪಡಿಸಲಾಯಿತು. ಆ ಹೊತ್ತಲ್ಲಿ ಅದನ್ನು 10ನೇ ತರಗತಿಯ ಒಟ್ಟು ಅಂಕಗಳ ಸರಾಸರಿಯಿಂದ ಹೊರಗಿಡಲಾಗಿತ್ತು. ಆದರೆ, ಈಗ ಹಿಂದಿಯ ಅಂಕಗಳನ್ನು ಸರಾಸರಿಗೂ ಸೇರಿಸಿರುವುದರಿಂದ, ಹಿಂದಿಯೇತರ ರಾಜ್ಯಗಳ ವಿದ್ಯಾರ್ಥಿಗಳು ಕಲಿಕಾ ವಿಷಯದಲ್ಲಿ ಬಹಳ ಹಿಂದೆ ಉಳಿಯುವಂತಾಗಿದೆ.

ರಾಷ್ಟ್ರೀಯ ಪ್ರವೇಶ ಪರೀಕ್ಷೆಗಳಲ್ಲಿ ಅವರಿಗೆ ಅವಕಾಶ ಕಡಿಮೆಯಾಗಿದೆ. ಕರ್ನಾಟಕದ 2024–25ರ 10ನೇ ತರಗತಿಯ ಪರೀಕ್ಷೆಗಳಲ್ಲಿ ಸುಮಾರು 1 ಲಕ್ಷದ 42 ಸಾವಿರ ಮಕ್ಕಳು ಹಿಂದಿಯಲ್ಲಿ ತೇರ್ಗಡೆಯಾಗಿಲ್ಲ. ರಾಷ್ಟ್ರಮಟ್ಟದ ಪರೀಕ್ಷೆಗಳು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ನಡೆಯುವುದರಿಂದಾಗಿ, ಅಲ್ಲಿಯೂ ದೊಡ್ಡ ಸಂಖ್ಯೆಯಲ್ಲಿ ಹಿಂದಿ ಭಾಷಿಕರು ಉದ್ಯೋಗ ಪಡೆದುಕೊಂಡು, ಉಳಿದವರು ನಿಂತಲ್ಲಿಯೇ ತಬ್ಬಲಿಗಳಾಗುತ್ತಿದ್ದಾರೆ.

ಈ ನಡುವೆ ಹಿಂದಿಯೂ ಕೆಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ 50ಕ್ಕೂ ಹೆಚ್ಚು ಪ್ರಾದೇಶಿಕ ಮತ್ತು ಸಾಮಾಜಿಕ ಉಪ ಭಾಷೆಗಳ ನಡುವೆ ಹಂಚಿಹೋಗಿದ್ದ ಖಡಿಬೋಲಿಯೆಂಬ ಹೆಸರಿನ ಭಾಷೆಯು, ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಒಂದು ಸಾಮಾನ್ಯ ಸಂಪರ್ಕ ಭಾಷೆಯಾಗಿ 'ಹಿಂದಿ' ಎಂಬ ಹೆಸರಿನಲ್ಲಿ ಬೆಳೆಯಿತು. ಆ ಕಾಲದ ಉತ್ತರ ಭಾರತದ ಪತ್ರಿಕೋದ್ಯಮವು ಅಲ್ಲಿನ ಸಣ್ಣ ಭಾಷೆಗಳನ್ನು ಹಿಂದಿಕ್ಕಿ ಸಾಮಾನ್ಯ ಹಿಂದಿಯನ್ನು ಎಲ್ಲರಿಗೂ ಒಪ್ಪಿಗೆಯಾಗುವಂತೆ ಬೆಳೆಸಿತು. ಇದರಿಂದಾಗಿ ಹಿಂದಿ ಪೂರ್ವ ಯುಗದ ಬ್ರಜ್ ಭಾಷಾ, ಅವಧಿ, ರಾಜಸ್ಥಾನಿ, ಬಘೇಲಿ, ಭೋಜಪುರಿ, ಬುಂದೇಲಿ, ಮೈಥಿಲಿ, ಚತ್ತೀಸ್ ಗರಿ, ಗರ್ವಾಲಿ, ಹರಿಯಾನ್ವಿ, ಕನೌಜಿ, ಕುಮಾಯುನಿ, ಮಗಧಿ, ಮಾರ್ವಾರಿ ಮೊದಲಾದ ಸುಮಾರು 122 ಸುಂದರ ಭಾಷೆಗಳು ದುರ್ಬಲವಾದುವು. ಸ್ವಾತಂತ್ರ್ಯ ಚಳವಳಿಗೆ ಬಹುದೊಡ್ಡ ಕೊಡುಗೆ ನೀಡಿದ್ದ ಉರ್ದು ಕೂಡ ಹಿಂದೆ ಬಿತ್ತು.

ಇವತ್ತು ಸುಮಾರು 70 ಕೋಟಿ ಜನರು ಮಾತನಾಡುವ ಹಿಂದಿಯು ಸಹಜವಾಗಿ ದೊಡ್ಡಣ್ಣನ ಪಾತ್ರವನ್ನು ನಿರ್ವಹಿಸಲು ಪ್ರಯತ್ನಿಸುತ್ತಿದೆ. ಆದರೆ ಅದನ್ನು ದಕ್ಷಿಣ ಭಾರತ, ಉತ್ತರ ಪೂರ್ವದ ರಾಜ್ಯಗಳು ಮತ್ತು ಭೋಜಪುರಿ, ಮೈಥಿಲಿ, ರಾಜಸ್ಥಾನಿ, ಹರಿಯಾನ್ವಿ ಮತ್ತಿತರ ಭಾಷೆಗಳೂ ತೀವ್ರವಾಗಿ ಪ್ರತಿಭಟಿಸುತ್ತಿವೆ. ಹೀಗಾಗಿ ಹಿಂದಿ ರಾಷ್ಟ್ರಭಾಷೆ ಆಗುವುದು ಸುಲಭವಲ್ಲ.

ಹಿಂದಿ ಕಲಿತರೆ ಉದ್ಯೋಗ ಸಿಗುತ್ತದೆ ಎಂದು ಕೆಲವರು ವಾದಿಸುತ್ತಾರೆ. ಇದನ್ನು ಸಮರ್ಥಿಸಲು ಯಾವುದೇ ಅಂಕಿ ಅಂಶಗಳ ಆಧಾರವಿಲ್ಲ. ದೆಹಲಿ, ಗುರುಗ್ರಾಮ, ನೊಯಿಡಾ ಮತ್ತು ಫರಿದಾಬಾದ್‌ನ ಬಹುರಾಷ್ಟ್ರೀಯ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರ ಸಂಖ್ಯೆ ಒಂದೂವರೆ ಸಾವಿರ ಮೀರುವುದಿಲ್ಲ. ಆದರೆ, ಅದೇ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ತಮಿಳರ ಸಂಖ್ಯೆ ಎರಡು ಲಕ್ಷಕ್ಕೂ ಹೆಚ್ಚು. ತಮಿಳರು ಹಿಂದಿ ಕಲಿಯಲಿಲ್ಲ. ಅದರೆ, ಹಿಂದಿ ಪ್ರದೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕನ್ನಡಿಗರು ಹಿಂದಿ ಕಲಿಯುತ್ತಾರೆ, ಅವರಿಗೆ ಹಿಂದಿ ನೆಲದಲ್ಲಿ ಕೆಲಸವೇ ಸಿಗುತ್ತಿಲ್ಲ. 2011ರ ಜನಗಣತಿ ಪ್ರಕಾರ, ಹಿಂದಿ ಮಾತನಾಡುವ ಪ್ರದೇಶಗಳಲ್ಲಿ ವಾಸಿಸುತ್ತಿರುವ ಕನ್ನಡಿಗರ ಸಂಖ್ಯೆ 50 ಸಾವಿರವನ್ನೂ ಮೀರುವುದಿಲ್ಲ. ಈ 50 ಸಾವಿರ ಜನರಿಗಾಗಿ ಲಕ್ಷಾಂತರ ಮಕ್ಕಳು ಹಿಂದಿ ಕಲಿಯುತ್ತಿದ್ದಾರೆ.

ಕನ್ನಡ ಭಾಷಾಭಿವೃದ್ಧಿ ಹಾಗೂ ಕನ್ನಡಿಗರಿಗೆ ಉದ್ಯೋಗದ ಅವಕಾಶ ಹೆಚ್ಚಿಸಲು ಕರ್ನಾಟಕಕ್ಕೆ ದ್ವಿಭಾಷಾ ಸೂತ್ರದ ಅಗತ್ಯವಿದೆ. ಹೊರಗಿನ ಪ್ರಪಂಚದೊಂದಿಗೆ ವ್ಯವಹರಿಸಲು ಮತ್ತು ಭೌತಿಕ ಅಭಿವೃದ್ಧಿಯನ್ನು ಸಾಧಿಸಲು ಇಂಗ್ಲಿಷ್ ಬೇಕು. ಅದು ಭಾರತದೊಳಗೇ ಇರುವ ಇತರ ರಾಜ್ಯಗಳೊಡನೆ ವ್ಯವಹರಿಸಲೂ ಉಪಯುಕ್ತ. ಮಾನವನ ಸಾಂಸ್ಕೃತಿಕ ಅಭಿವೃದ್ಧಿಗೆ ತಾಯ್ನುಡಿಯಲ್ಲಿ ಕಲಿಕೆ ಬೇಕೇ ಬೇಕು. ತಾಯ್ನುಡಿಗಳ ಸಂಖ್ಯೆಯು ಅಪಾರವಾಗಿರುವುದರಿಂದ, ಸದ್ಯಕ್ಕೆ ರಾಜ್ಯ ಭಾಷೆಯಲ್ಲಿ ಕಲಿಕೆಯ ಅವಕಾಶ ಸಿಕ್ಕರೂ ಸಾಕು. ಆದರೆ, ಈ ಭಾಷೆಗಳನ್ನು ಕಲಿಸುವ ವಿಧಾನದಲ್ಲಿ ನಾವು ಏನಿಲ್ಲವೆಂದರೂ ಅರ್ಧ ಶತಮಾನದಷ್ಟು ಹಿಂದೆ ಬಿದ್ದಿರುವುದರಿಂದ ಭಾಷಾ ಕಲಿಕೆಯೇ ಅನುತ್ಪಾದಕವಾಗಿದೆ.

ಈ ನಡುವೆ ದೊಡ್ಡ ಭಾಷೆಗಳ ಜಗಳಗಳ ನಡುವೆ ಸಣ್ಣ ಭಾಷೆಗಳು ನಶಿಸಿಹೋಗದ ಎಚ್ಚರವನ್ನೂ ನಾವು ಕಾಪಾಡಿಕೊಳ್ಳಬೇಕು. ಕಳೆದ ಐವತ್ತು ವರ್ಷಗಳಲ್ಲಿ ನಮ್ಮ ದೇಶದಿಂದ 220ಕ್ಕೂ ಹೆಚ್ಚು ಭಾಷೆಗಳು ಕಾಣೆಯಾಗಿವೆ. ಯುನೆಸ್ಕೊ ಸಿದ್ಧಪಡಿಸಿದ 'ಭಾಷೆಗಳ ಜಾಗತಿಕ ಭೂಪಟ'ವು ಭಾರತದಲ್ಲಿ 344 ಭಾಷೆಗಳು ಅಪಾಯದ ಅಂಚಿನಲ್ಲಿವೆ ಎಂದು ವರದಿ ಮಾಡಿದೆ. ದ್ವಿಭಾಷಾ ನೀತಿಯೊಂದಿಗೆ ಉಳಿದ ಸಣ್ಣ ಭಾಷೆಗಳ ಸಬಲೀಕರಣಕ್ಕೂ ರಾಜ್ಯ ಸರ್ಕಾರಗಳು ಕೆಲಸ ಮಾಡಬೇಕು.

ವಾಚಕರ ವಾಣಿ

ಮೊಬೈಲ್ ಬಳಕೆಗೆ ಪ್ರಮಾಣದ ಅಂಕುಶ

ಇತ್ತೀಚೆಗೆ ಶಾಲೆ ಮತ್ತು ಮನೆಯಲ್ಲಿ ಮಕ್ಕಳು ಮೊಬೈಲ್ ಬಳಸುವುದು ಜಾಸ್ತಿ ಆಗಿದೆ. ಇದರಿಂದ ಅವರ ಆರೋಗ್ಯ ಹದಗೆಡುತ್ತಿದೆ. ಮಾನಸಿಕ ಹಾಗೂ ದೈಹಿಕವಾಗಿ ಮಕ್ಕಳ ಮನೋವಿಕಾಸಕ್ಕೂ ಧಕ್ಕೆಯಾಗುತ್ತಿದೆ. ಅವರಲ್ಲಿ ಪಾಠ ಕೇಳುವ ಉತ್ಸಾಹವೂ ಕಡಿಮೆಯಾಗುತ್ತಿದೆ. ಶಿಕ್ಷಕರು ಬೆಳಗಿನ ಪ್ರಾರ್ಥನಾ ಸಮಯದಲ್ಲಿ 'ಇನ್ನು ಮುಂದೆ ಮೊಬೈಲ್ ಬಳಕೆ ಮಾಡುವುದಿಲ್ಲ' ಎಂದು ಮಕ್ಕಳಿಂದ ಪ್ರಮಾಣ ಮಾಡಿಸಿದರೆ ಮೊಬೈಲ್ ಬಳಕೆ ಸ್ವಲ್ಪಮಟ್ಟಿಗೆ ಕಡಿಮೆ ಆಗಬಹುದೇನೋ?

ಎಚ್.ಎಸ್.ಟಿ. ಸ್ವಾಮಿ, ಚಿತ್ರದುರ್ಗ

ಜನರ ಹೊರಗಿಟ್ಟರೆ ಪರಿಸರ ಉಳಿವುದೇ?

'ಅರಣ್ಯ ಹಕ್ಕು ಕಾಯ್ದೆಯಡಿ ನೀಡಿರುವ ಹಕ್ಕುಪತ್ರಗಳು ಅರಣ್ಯ ಒತ್ತುವರಿಗೆ ಕಾರಣ' ಎಂದು ಕೇಂದ್ರ ಪರಿಸರ ಸಚಿವ ಭೂಪೇಂದ್ರ ಯಾದವ್ ಹೇಳಿದ್ದಾರೆ. ಇದಕ್ಕೆ ಸ್ಪಷ್ಟನೆ ಕೋರಿ 90ಕ್ಕೂ ಹೆಚ್ಚು ಅರಣ್ಯ ಹಕ್ಕು ಸಂಘಟನೆಗಳು ಪ್ರಧಾನಿಗೆ ಪತ್ರ ಬರೆದಿವೆ (ಪ್ರ.ವಾ., ಜುಲೈ 1). ವಸಾಹತು ಕಾಲದಿಂದಲೂ ಸ್ಥಳೀಯರನ್ನು ಅರಣ್ಯ ನಾಶಕ್ಕೆ ಕಾರಣ ಎಂಬಂತೆ ಬಿಂಬಿಸಲಾಗುತ್ತಿದೆ. ಅವರ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ಅರಣ್ಯ ಹಕ್ಕು ಕಾಯ್ದೆಯು ಅರಣ್ಯದ ಮೂಲನಿವಾಸಿಗಳು ಮತ್ತು ಬುಡಕಟ್ಟು ಜನರಿಗೆ ಒಂದಷ್ಟು ನಿರಾಳತೆ ನೀಡುವ ಭರವಸೆ ಹುಟ್ಟಿಸಿತ್ತು. ಆದರೆ, ಅರಣ್ಯ ಇಲಾಖೆಯ ಧೋರಣೆ ಇದನ್ನು ಹುಸಿಗೊಳಿಸಿದೆ.

ಅರಣ್ಯ ನಾಶಕ್ಕೆ ಸರ್ಕಾರದ ಬೃಹತ್ ಯೋಜನೆಗಳೇ ಕಾರಣ. ಆದರೆ, ಬ್ರಿಟಿಷರ ಕಾಲದಿಂದಲೂ ಸ್ಥಳೀಯ ಜನರೇ ಅರಣ್ಯ ನಾಶಕ್ಕೆ ಕಾರಣವೆಂಬ ಸಂಕಥನ ಕಟ್ಟಲಾಗಿದೆ. ಸ್ವಾತಂತ್ರ್ಯಾನಂತರವೂ ಇದೇ ಕಥನ ಮುಂದುವರಿದಿದೆ. 'ಜನರನ್ನು ಹೊರಗಿಟ್ಟು ಪರಿಸರ ಸಂರಕ್ಷಣೆ ಸಾಧ್ಯವಿಲ್ಲ; ದೇಶಕ್ಕೆ ಬೇಕಿರುವುದು ಜನರನ್ನು ಒಳಗೊಳ್ಳುವ ಸಂರಕ್ಷಣಾ ಮಾದರಿ' ಎಂದು ಪರಿಸರ ವಿಜ್ಞಾನಿ ಪ್ರೊ. ಮಾಧವ ಗಾಡ್ಗೀಳ್ ಹೇಳಿದ್ದಾರೆ. ಆಳುವ ವರ್ಗಕ್ಕೆ ಈ ಸತ್ಯ ಅರ್ಥವಾಗುವುದು ಯಾವಾಗ?

ಗುರುಮೂರ್ತಿ ಜೋಗಿಬೈಲು, ಶೃಂಗೇರಿ

ಸಂಸದರ ನಡೆ ಸರಿಯಲ್ಲ

ಭೂಸ್ವಾಧೀನ ಕಾನೂನಿನ ಅನುಷ್ಠಾನ ಕುರಿತು ಪರಿಶೀಲಿಸುತ್ತಿದ್ದ ಸಂಸದೀಯ ಸಮಿತಿ ಸಭೆಗೆ ಹೋರಾಟಗಾರ್ತಿ ಮೇಧಾ ಪಾಟ್ಕರ್ ಹಾಗೂ ನಟ ಪ್ರಕಾಶ್ ರಾಜ್ ಹಾಜರಾಗುವುದಕ್ಕೆ ಬಿಜೆಪಿ ಸಂಸದರು ಆಕ್ಷೇಪ ವ್ಯಕ್ತಪಡಿಸಿ ಸಭೆಯಿಂದ ಹೊರ ನಡೆದ ಸುದ್ದಿ ಓದಿ ತುಂಬಾ ನೋವಾಯಿತು (ಪ್ರ.ವಾ., ಜುಲೈ 2). ಈ ಇಬ್ಬರಿಗೂ ಭೂಸ್ವಾಧೀನ ಮತ್ತು ಪುನರ್ವಸತಿ ಕಾಯ್ದೆಯ ಸಾಧಕ, ಬಾಧಕಗಳ ಬಗ್ಗೆ ಚೆನ್ನಾಗಿ ಅರಿವಿದೆ. ರೈತರಿಗೆ ಆಗುವ ಹಾಗೂ ಆಗಿರುವ ಅನ್ಯಾಯಗಳನ್ನು ಅರ್ಥ ಮಾಡಿಕೊಂಡವರಾಗಿದ್ದಾರೆ. ಅಂಥವರ ಧ್ವನಿಯನ್ನು ಸಂಸದರು ಆಲಿಸಬೇಕಿತ್ತು. ಕಾನೂನು ಯಾವುದೇ ಇರಲಿ, ಅದರ ಸಾಧಕ–ಬಾಧಕಗಳನ್ನು ಎಲ್ಲಾ ಮಗ್ಗುಲಿನಿಂದಲೂ ಅರ್ಥ ಮಾಡಿಕೊಳ್ಳಬೇಕಾದುದು ಸಂಸದರ ಕರ್ತವ್ಯ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಆಟೊ ದರ: ನಿಯಮಾವಳಿ ರೂಪಿಸಿ

ನಗರ ಪ್ರದೇಶಗಳ ಬಹುತೇಕ ಜನರಿಗೆ ದೈನಂದಿನ ಕೆಲಸಗಳು ಸರಾಗವಾಗಿ ನಡೆಯಲು ಆಟೊ ಮೇಲಿನ ಅವಲಂಬನೆ ಸಹಜವಾದುದು. ಶಾಲಾ, ಕಾಲೇಜು, ಕಚೇರಿ, ಮದುವೆ ಸಮಾರಂಭಗಳಿಗೆ ತೆರಳಲು ಆಟೊಗಳ ಸೇವೆ ಅಗತ್ಯವಾಗಿದೆ. ಆದರೆ, ಆಟೊ ಓಡಿಸುವ ಬಹಳಷ್ಟು ಚಾಲಕರಲ್ಲಿ ನಿಷ್ಠೆ, ಪ್ರಾಮಾಣಿಕತೆ, ಸೇವಾ ಮನೋಭಾವ ಕಣ್ಮರೆಯಾಗಿದೆ. ಹೆಚ್ಚು ದರ ಪಡೆಯುವುದು ಹಾಗೂ ಪ್ರಯಾಣಿಕರ ಜತೆ ಒರಟಾಗಿ ವರ್ತಿಸುವುದು ವರದಿಯಾಗುತ್ತಲೇ ಇದೆ. ಮೀಟರ್ ಹಾಕದೆ ತಮಗೆ ಇಷ್ಟ ಬಂದಷ್ಟು ದರ ಕೇಳುತ್ತಾರೆ. 2 ಕಿ.ಮೀ. ದೂರಕ್ಕೆ ₹30 ಪಡೆಯದೆ, ₹60ರಿಂದ ₹90 ದರ ನೀಡುವಂತೆ ಕೇಳುತ್ತಾರೆ. ಸರ್ಕಾರದ ನಿಯಮಾವಳಿ ಪಾಲಿಸುವ ಚಾಲಕರೂ ಇದ್ದಾರೆ. ಕಾನೂನು ಉಲ್ಲಂಘಿಸುವ ಚಾಲಕರಿಗೆ ಕಡಿವಾಣ ಹಾಕಬೇಕಿದೆ.

ಡಿ. ಭರತ್, ಬೆಂಗಳೂರು

ಹೃದಯಾಘಾತ: ಸತ್ಯ ಹೊರಬರಲಿ

ರಾಜ್ಯದಲ್ಲಿ ಹೃದಯಾಘಾತಗಳು ಹೆಚ್ಚುತ್ತಿರುವುದು ಆಘಾತಕಾರಿ. ಈ ಸಾವುಗಳು ಜನರಲ್ಲಿ ಆತಂಕ ಮೂಡಿಸಿರುವುದು ಸಹಜ. ಹೆಚ್ಚುತ್ತಿರುವ ಹೃದಯಾಘಾತಗಳನ್ನು ನಿಭಾಯಿಸುವ ಮಟ್ಟಿಗೆ ನಮ್ಮ ವೈದ್ಯಕೀಯ ವ್ಯವಸ್ಥೆ ಸದೃಢವಾಗಿಲ್ಲ ಎಂಬುದರ ಬಗ್ಗೆ ಸಂಪಾದಕೀಯ (ಪ್ರ.ವಾ., ಜುಲೈ 2) ಬೆಳಕು ಚೆಲ್ಲಿದೆ. ಹಾಸನ ಜಿಲ್ಲೆಯಲ್ಲಿ ವರದಿಯಾಗಿರುವ ಹೃದಯಾಘಾತಗಳ ಬಗ್ಗೆ ಅಧ್ಯಯನ ನಡೆಸಲು ಸರ್ಕಾರವು ಸಮಿತಿ ರಚಿಸಿರುವುದು ಒಳ್ಳೆಯ ನಿರ್ಧಾರ. ವಸ್ತುನಿಷ್ಠ ಅಧ್ಯಯನ ನಡೆಸುವುದು ಸಮಿತಿಯ ಹೊಣೆಯಾಗಿದೆ.

ಸುಮಾ ವೀಣಾ, ಹಾಸನ

ಅನ್ನದಾತರ ಅಸ್ಮಿತೆ ಉಳಿಸಬೇಕು

'ಹೊಲದ ಒಡೆಯರನ್ನು ಕೂಲಿಯಾಗಿಸಬೇಡಿ' ಸುದ್ದಿ ಓದಿ ವಿಷಾದವಾಯಿತು (ಪ್ರ.ವಾ., ಜುಲೈ 2). ದೇವನಹಳ್ಳಿ ತಾಲ್ಲೂಕಿನ ರೈತರ ಹೃದಯದಂತಿರುವ 1,777 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಮುಂದಾಗಿರುವುದು ದುರದೃಷ್ಟಕರ. ರೈತರ ಬದುಕಿಗೆ ಆಸರೆಯಾಗಿರುವ ಜಮೀನನ್ನು ವಶಪಡಿಸಿಕೊಂಡರೆ ಅಲ್ಲಿನವರ ಬದುಕು ಚಿಂತಾಜನಕವಾಗಲಿದೆ. ಉಳುಮೆಗೆ ಯೋಗ್ಯವಾದ ಜಮೀನನ್ನು ಕಸಿದುಕೊಂಡು 'ಏರೊಸ್ಪೇಸ್ ಪಾರ್ಕ್' ಸ್ಥಾಪಿಸಿ, ಯಾವ ಸಾಧನೆ ಮಾಡಲು ಸರ್ಕಾರ ಹೊರಟಿದೆಯೋ ತಿಳಿಯದಾಗಿದೆ. ಭೂಮಿ ಕಳೆದುಕೊಂಡರೆ ರೈತರ ಬದುಕು ಬೀದಿಗೆ ಬೀಳಲಿದೆ. ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ ಅಲ್ಲಿನ ಜನರ ಅಸ್ಮಿತೆಯನ್ನು ಉಳಿಸಬೇಕಿದೆ.

ಯಶ್ವಂತ್ ಸಿ., ಶಿರಾ

ಚುರುಮುರಿ



ಬದಲಾವಣೆ ಕ್ರಾಂತಿ!

• ಗುರು ಪಿ.ಎಸ್.

ಕುಟುಂಬದ ಏಳಿಗೆಗೆ ಯಾರ ಕೊಡುಗೆ ಎಷ್ಟಿದೆ ಎಂಬ ಬಗ್ಗೆ ನನ್ನ ಮತ್ತು ಹೆಂಡತಿ ನಡುವೆ ವಾಗ್ವಾದ ಶುರುವಾಯಿತು.

'ಯಾರಿಗ್ ಏನೇ ಆದರೂ ನಾನು ಮಾತ್ರ ಈ ಮನೆಯಲ್ಲಿ ಗಟ್ಟಿಯಾಗಿ ಇರಬೇಕು. ಹಗಲು– ರಾತ್ರಿ ನಾನು ಬಂಡೆಯಂತೆ ಕೆಲಸ ಮಾಡ್ತಿದೀನಿಲ್ಲಿ' ವಾದ ಮಂಡಿಸಿದಳು ಮಡದಿ.

'ಬಂಡೆ–ಗಿಂಡೆ ಎಂಬೆಲ್ಲ ಪದಗಳನ್ನ ಬಳಸಬೇಡ, ನನಗೆ ಬೇರೆಯವರು ನೆನಪಾಗ್ತಾರೆ' ವಾದದಲ್ಲಿಯೂ ವಿನೋದ ತುರುಕಲು ನೋಡಿದೆ.

ಹೆಂಡತಿಗೆ ತಕ್ಷಣಕ್ಕೆ ಅರ್ಥವಾಗದಿದ್ದರೂ, 'ಹೀಗೆ, ಚಿತ್ರ–ವಿಚಿತ್ರವಾಗಿ ಮಾತನಾಡೋದಷ್ಟೇ ಗೊತ್ತು ನಿಮಗೆ. ನನ್ನಂಥ ಸೋಷಿಯಲಿಸ್ಟ್– ಸೆಕ್ಯುಲರಿಸ್ಟ್ ಮನೋಭಾವದಳು ಈ ಏರಿಯಾದಲ್ಲಿಯೇ ಯಾರೂ ಇಲ್ಲ. ಬೇಕಾದರೆ ಅಕ್ಕ–ಪಕ್ಕದ ಮನೆಯವರನ್ನ ಕೇಳಿನೋಡಿ'.

'ಆ ಪದಗಳನ್ನೂ ಬಳಸಬೇಡ, ನನಗೆ ಮತ್ತೊಬ್ಬರು ನೆನಪಾಗ್ತಾರೆ' ಬಾಳೆಹಣ್ಣು ತಿನ್ನುತ್ತಾ ಹೇಳಿದೆ.

'ನಾನು ಒಂದಿನ ಮನೆಯಲ್ಲಿ ಅಡುಗೆ ಮಾಡಿಡದೆ ಹೋದರೆ ನಿಮ್ಮ ಮಕ್ಕಳು ಕಿತ್ತಾಡಿ, ದೊಡ್ಡ ಕ್ರಾಂತಿಯನ್ನೇ ಮಾಡಿರ್ತಾರೆ ಗೊತ್ತಾ' ನನ್ನ ಮೇಲಿನ ಕೋಪ ಮಕ್ಕಳತ್ತ ತಿರುಗಿತು.

'ಕ್ರಾಂತಿ–ಗೀಂತಿ ಅನ್ನಬೇಡ ಮಾರಾಯ್ತಿ. ಯಾರು ಯಾರಿಗೋ ಏನೇನೋ ನೆನಪಾಗಿ ನ್ಯೂಸ್ ಚಾನಲ್‌ಗಳವರೆಲ್ಲ ಫುಲ್ ಬ್ಯುಸಿ ಆಗೋ ಥರ ಆದೀತು...' ನಗುತ್ತಾ ಮುಂದುವರಿದು ಹೇಳಿದೆ: 'ನಿನ್ನ ರೀತಿ ನಾನು ಅದನ್ನು ಮಾಡಿದೆ, ಇದನ್ನು ಮಾಡಿದೆ ಅಂತ ಹೇಳಲ್ಲ. ನನ್ನದೇನಿದ್ದರೂ ಮನ್ ಕಿ ಬಾತ್. ಅಂದ್ರೆ ಮನಸಲ್ಲೇ ಹೇಳ್ಕೊಂಡು ಸುಮ್ಮನಾಗ್ತೀನಿ'.

'ಅಂಥ ಒನ್ ವೇಗಳೆಲ್ಲ ನನ್ನ ಹತ್ತಿರ ನಡೆಯಲ್ಲ. ಈ ಮನೆಗೆ ನಾನೇ ಹೈಕಮಾಂಡ್. ಇಲ್ಲಿ ನನ್ನ ಮಾತೇ ಶಾಸನ'.

ನಾನು ವಾದದಲ್ಲಿ ಸೋಲ್ತಿದೀನೇನೋ ಅನಿಸತೊಡಗಿತು. ರೊಚ್ಚಿಗೆದ್ದು ಹೇಳಿದೆ, 'ನೀನು ಹೈಕಮಾಂಡ್ ಆದರೆ, ನಾನು ಸಿಎಂ ಇದ್ದಂಗೆ'.

ಜೋರಾಗಿ ನಕ್ಕ ಹೆಂಡತಿ, 'ಅದೇನಂತ ಮಾತಾಡ್ತೀರ್ರೀ... ಸಿಎಂಗಿಂತ ಹೈಕಮಾಂಡ್ ದೊಡ್ಡದಲ್ವ?' ಎಂದಳು.

'ಎಲ್ಲದಕ್ಕೂ ಕಾಲವೇ ಉತ್ತರ ಕೊಡಲಿದೆ' ಎಂದು ವೇದಾಂತಿಯಂತೆ ಹೇಳಿ ಹೊರಗಡಿಯಿಟ್ಟೆ.

ಸಂಗತ

ಭಾಗ್ಯನಗರ! ಎಲ್ಲಿಹುದು ಭಾಗ್ಯ?


ಚಿಕ್ಕಬಳ್ಳಾಪುರದಲ್ಲಿ ನೈಸರ್ಗಿಕ ಸಂಪತ್ತನ್ನು ಸೂರೆಯಾಗಲು ಬಿಟ್ಟು, ಊರೊಂದಕ್ಕೆ 'ಭಾಗ್ಯನಗರ' ಎಂದು ಹೆಸರಿಡುವುದು ಬಹು ದೊಡ್ಡ ವಿಪರ್ಯಾಸ.

• ಅ.ನ. ಯಲ್ಲಪ್ಪ ರೆಡ್ಡಿ

ನಂದಿಬೆಟ್ಟದ ಪರಿಸರದಲ್ಲಿನ ಜೀವರಾಶಿ ಹಾಗೂ ಸಸ್ಯವೈವಿಧ್ಯ ಸ್ಥಳೀಯ ಅನನ್ಯತೆ ಹೊಂದಿದ್ದು, ಅಂಥ ಜೀವ ಸಂಪತ್ತನ್ನು ವಿಶ್ವದ ಬೇರೆಲ್ಲೂ ಕಾಣುವುದು ಸಾಧ್ಯವಿಲ್ಲ. ಶ್ರೀಗಂಧ, ರಕ್ತಚಂದನ ಒಳಗೊಂಡ ಅಪರೂಪದ ಹಸುರು ಸಿರಿ ಅಲ್ಲಿ ಹೇರಳವಾಗಿದೆ. ಮಾಕಳಿ ಬೇರು, ವಿಷ್ಣುಕ್ರಾಂತಿ, ಶಿವಕ್ರಾಂತಿ, ಪುರುಷರತ್ನ, ಶತಾವರಿ ಮುಂತಾದ ಔಷಧೀಯ ಸಸ್ಯಗಳೂ ಅಲ್ಲಿವೆ.

ಬೇರೆಲ್ಲೂ ಕಾಣಸಿಗದ ಒಂದು ಅಡಿ ಉದ್ದದ ಎರೆಹುಳುವನ್ನು ನಂದಿಬೆಟ್ಟದ ಪರಿಸರದಲ್ಲಿ ಬೆಂಗಳೂರಿನ ಜಿಕೆವಿಕೆಯ ಕೀಟಶಾಸ್ತ್ರಜ್ಞರಾದ ಡಾ. ರಾಧಾ ಕಾಳೆ ಅವರು ಗುರ್ತಿಸಿದ್ದಾರೆ. ದುರದೃಷ್ಟವಶಾತ್, ನಂದಿಬೆಟ್ಟದ ಪರಿಸರವನ್ನು ಗಾಸಿಗೊಳಿಸುವ ನಗರೀಕರಣದ ಭರಾಟೆ ಪ್ರಸ್ತುತ ಜೋರಾಗಿದೆ. ದಶಕದ ಹಿಂದೆ ಇದ್ದ ಹಸಿರು ಪರಿಸರ ಮಾಯವಾಗಿ, ದೂಳು ತುಂಬಿದ ವಾತಾವರಣ ರೂಪುಗೊಳ್ಳುತ್ತಿದೆ. ಹಿಂದಿದ್ದ ತಂಪು ಹವೆಯಲ್ಲಿ ವ್ಯತ್ಯಾಸ ಉಂಟಾಗಿದೆ.

'ಘಟಂ' ಅಥವಾ 'ಘಟ' ದಕ್ಷಿಣ ಭಾರತದ ಪ್ರಾಚೀನ ಲಯವಾದ್ಯ. ಮಣ್ಣಿನ ಮಡಕೆಯ ಈ ವಾದ್ಯ ತಯಾರಿಸಲು ಇಲ್ಲಿನ ಮಣ್ಣನ್ನು ಬಳಸಲಾಗುತ್ತಿತ್ತು. ಬೇರೆಡೆಯ ಮಣ್ಣಿನಲ್ಲಿ ಘಟ ವಾದ್ಯ ತಯಾರಿಸಿದರೆ ಅದರಲ್ಲಿ ವಿಶಿಷ್ಟ ನಾದ ಹೊಮ್ಮಿಸಲು ಸಾಧ್ಯವಾಗುವುದಿಲ್ಲ ಎಂಬುದು ಸಂಗೀತಗಾರರ ಅಭಿಪ್ರಾಯ. ಇಂದು, ಆ ನಾದಮಯ ಮಣ್ಣೂ ಕಲುಷಿತಗೊಂಡಿದೆ.



ದೇವನಹಳ್ಳಿಯ ಚಕ್ಕೋತಕ್ಕೆ ಬಹಳ ಹಿಂದೆಯೇ ಭೌಗೋಳಿಕ ಸೂಚ್ಯಂಕ ಪಟ್ಟ (ಜಿಐ ಟ್ಯಾಗ್) ದೊರೆತಿದೆ. ಪ್ರಸ್ತುತ ಈ ಪರಿಸರದಲ್ಲಿ ಯಾರೂ ಚಕ್ಕೋತ ಬೆಳೆಯುತ್ತಿಲ್ಲ. ಕೃಷಿ ಭೂಮಿಯೇ ನಾಶವಾಗಿರುವಾಗ ಚಕ್ಕೋತ ಬೆಳೆಯುವುದಾದರೂ ಎಲ್ಲಿ? ಕೇರಳದಿಂದ ಬರುವ ಚಕ್ಕೋತವನ್ನು 'ದೇವನಹಳ್ಳಿಯ ಚಕ್ಕೋತ' ಎಂದು ಬಿಂಬಿಸಿ ಮಾರಾಟ ಮಾಡಲಾಗುತ್ತಿದೆ.

ನಂದಿಬೆಟ್ಟ ಪರಿಸರದ ಶಿಲಾನಿರ್ಮಿತಿಗಳಿಗೆ 'ಧರ್ವಾಡ್ ಕ್ರೇಟನ್' ಎಂಬ ಹೆಸರಿದೆ. ಇವು ರೂಪುಗೊಂಡು ಮೂರೂವರೆ ಬಿಲಿಯನ್ ವರ್ಷಗಳಾಗಿವೆ ಎನ್ನುವುದು ವಿಜ್ಞಾನಿಗಳ ಅಭಿಪ್ರಾಯ. ಬೇರೆಲ್ಲೂ ಕಾಣಸಿಗದ ಇಲ್ಲಿನ ಅಪರೂಪದ ಶಿಲೆ ಇಂದು ನಾನಾ ಕಾರಣಗಳಿಗೆ ಮಾಯವಾಗುತ್ತಿದೆ. ಮರಳಿಗೆ ಪರ್ಯಾಯವಾಗಿ ಬಳಕೆಯಲ್ಲಿರುವ ಎಂ–ಸ್ಯಾಂಡ್ ತಯಾರಿಸುವುದಕ್ಕೆ ಕಲ್ಲುಗಳನ್ನು ಸ್ಫೋಟಕ ಬಳಸಿ ಸಿಡಿಸಲಾಗುತ್ತಿದೆ.

ಕಳೆದ ಮೂರ್ನಾಲ್ಕು ದಶಕಗಳಲ್ಲಿ ಘಟಿಸಿದ ವಿದ್ಯಮಾನಗಳು ನಂದಿಯ ಪರಿಸರವನ್ನು ತೀವ್ರವಾಗಿ ಗಾಸಿಗೊಳಿಸಿವೆ. ನಂದಿಬೆಟ್ಟದ ಪರಿಸರದಲ್ಲಿ ಹುಟ್ಟಿ ಹರಿಯುತ್ತಿದ್ದ ಅರ್ಕಾವತಿ, ಕುಮುದ್ವತಿ, ಪಾಪಾಗ್ನಿ, ಪಾಲಾರ್, ಪೆನ್ನಾರ್ ನದಿಗಳು ಸುತ್ತಲ ಪರಿಸರಕ್ಕೆ ನೀರೊದಗಿಸುತ್ತಿದ್ದವು. ಆ ಜಲಮೂಲಗಳೀಗ ಬತ್ತಿಹೋಗಿವೆ.

ಸ್ವಾತಂತ್ರ್ಯ ಚಳವಳಿ ಸಂದರ್ಭದಲ್ಲಿ ಮಹಾತ್ಮ ಗಾಂಧಿಯವರು ಅನಾರೋಗ್ಯದಿಂದ ಬಳಲುತ್ತಿದ್ದಾಗ, ನಂದಿ ಗಿರಿಧಾಮಕ್ಕೆ ಬಂದು ಆರೋಗ್ಯವನ್ನು ಸುಧಾರಿಸಿಕೊಂಡು ಹೋದ ಉದಾಹರಣೆಯೂ ಇದೆ. ಆದರೆ, ನಂದಿಬೆಟ್ಟದ ಆರೋಗ್ಯವೇ ಈಗ ಹದಗೆಟ್ಟಿದೆ. ಚಿಕ್ಕಬಳ್ಳಾಪುರದ ಭೂಭಾಗ ರಾಜಕಾರಣಿಗಳು, ಭೂಗಳ್ಳರ ಮಾಫಿಯಾದಲ್ಲಿ ನಲುಗಿಹೋಗಿದೆ. ಸ್ಫೋಟಕಗಳ ಸದ್ದು ದಿನನಿತ್ಯ ಕೇಳಿಬರುತ್ತಿದೆ. ಇಲ್ಲಿ ಕಾಮಗಾರಿ ನಡೆಸುತ್ತಿರುವ ಬಹುತೇಕರು ಅರಣ್ಯ ಇಲಾಖೆಯ ನಿಯಮಗಳನ್ನು ಅನುಸರಿಸುತ್ತಿಲ್ಲ.

ನಂದಿಬೆಟ್ಟಕ್ಕೆ ರೋಪ್ ವೇ ನಿರ್ಮಾಣದಿಂದ ಪರಿಸರಕ್ಕೆ ಆಗುವ ಹಾನಿ ಏನು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಉದ್ದೇಶಿತ ಯೋಜನೆಯಡಿ ಬೆಟ್ಟದ ತಳಭಾಗದಲ್ಲಿ ನಿರ್ಮಾಣ ಮಾಡಲಾಗುವ ಟವರ್‌ನ ಗಾತ್ರ ಮತ್ತು ಸ್ವರೂಪವನ್ನು ಗಮನಿಸಿದರೆ ಅದರಿಂದ ಪರಿಸರಕ್ಕೆ ಯಾವ ಪ್ರಮಾಣದಲ್ಲಿ ಧಕ್ಕೆ ಉಂಟಾಗುತ್ತದೆ ಎಂದು ಕಲ್ಪಿಸಿಕೊಳ್ಳುವುದೇ ಗಾಬರಿ ಹುಟ್ಟಿಸುತ್ತದೆ. ಬರೀ ಪ್ರವಾಸೋದ್ಯಮವನ್ನಷ್ಟೇ ಗಮನದಲ್ಲಿಟ್ಟುಕೊಂಡು ಪರಿಸರವನ್ನು ಅವಗಣನೆ ಮಾಡಿದಾಗ ಆಗುವ ಅನಾಹುತಗಳಿಗೆ ಬೆಲೆ ಕಟ್ಟಲಾಗದು.

ನಂದಿಬೆಟ್ಟದ ಪರಿಸರವು ರಕ್ಷಿತಾರಣ್ಯ, ರಾಷ್ಟ್ರೀಯ ಉದ್ಯಾನ, ವನ್ಯಜೀವಿಧಾಮ, ಆನೆ ಕಾರಿಡಾರ್ ಹೀಗೆ ನಾನಾ ಬಗೆಯ ಅರಣ್ಯ ಭೂಮಿಗಳ ವರ್ಗೀಕರಣಕ್ಕೆ ಸೇರತಕ್ಕಂತಹ ಪ್ರದೇಶವಾಗಿದೆ. 1911ರಲ್ಲೇ ಈ ಪ್ರದೇಶವನ್ನು ಬ್ರಿಟಿಷ್ ಸರ್ಕಾರ 'ಜೈವಿಕ ಪರ್ವತಧಾಮ' ಎಂದು ಘೋಷಿಸಿತ್ತು. 'ನ್ಯಾಷನಲ್ ಲಾ ಸ್ಕೂಲ್ ಯೂನಿವರ್ಸಿಟಿ'ಯ ಪ್ರೊ. ಎಂ.ಕೆ. ರಮೇಶ್ ಮತ್ತವರ ಪಿಎಚ್.ಡಿ. ವಿದ್ಯಾರ್ಥಿಗಳ ತಂಡ, ನಂದಿಬೆಟ್ಟವನ್ನು ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಪುರಾತತ್ವ ಇಲಾಖೆಯನ್ನು ಒತ್ತಾಯಿಸಿದೆ. ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಸೇರುವ ಮೂಲಕವಾದರೂ ನಂದಿಬೆಟ್ಟದ ಪರಿಸರದಲ್ಲಿ ನಡೆಯುತ್ತಿರುವ ವಿನಾಶಕಾರಿ ಕಾಮಗಾರಿಗಳನ್ನು ತಡೆಯಬಹುದೇನೋ?

ನಂದಿಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ಹೆಸರನ್ನು 'ಭಾಗ್ಯನಗರ' ಎಂದು ಬದಲಾಯಿಸುವ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿದೆ. ನಂದಿಬೆಟ್ಟವೂ ಸೇರಿದಂತೆ ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ ನೈಸರ್ಗಿಕ ಸಂಪತ್ತನ್ನು ಸೂರೆಯಾಗಲು ಬಿಟ್ಟು, ಊರೊಂದಕ್ಕೆ 'ಭಾಗ್ಯನಗರ' ಎಂದು ಹೆಸರಿಡುವುದು ಬಹು ದೊಡ್ಡ ವಿಪರ್ಯಾಸ. ಇಲ್ಲಿ ಯಾವ ಭಾಗ್ಯವೂ ಇಲ್ಲ, ಇರುವುದು ಹತಭಾಗ್ಯರಷ್ಟೇ. ಭಾಗ್ಯನಗರ ಎಂಬ ಹೆಸರಿಡುವುದು ಪರಿಸ್ಥಿತಿಯ ಕ್ರೂರ ಅಣಕದಂತೆ ಕಾಣಿಸುತ್ತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಉತ್ತರ ಪ್ರದೇಶದಲ್ಲಿ ಹೊಸ ನ್ಯಾಯದಾನ ವ್ಯವಸ್ಥೆಯೊಂದು ಸದ್ದು ಮಾಡುತ್ತಿದೆ. ಸಂಘಟಿತ ಅಪರಾಧಗಳು ಸೇರಿದಂತೆ ಮಾಫಿಯಾ ಮಟ್ಟ ಹಾಕುವುದು, ಪೋಕ್ಸೊ, ಕೊಲೆಯಂಥ ಗಂಭೀರ ಪ್ರಕರಣಗಳ ತ್ವರಿತ ವಿಲೇವಾರಿಗೆ ರೂಪಿಸಲಾಗಿರುವ ‘ಆಪರೇಷನ್ ಕನ್ವಿಕ್ಷನ್’ ಹೆಸರಿನ ವ್ಯವಸ್ಥೆ ಜಾರಿಗೆ ಬಂದ ಎರಡು ವರ್ಷಗಳಲ್ಲಿ 97,158 ಅಪರಾಧಿಗಳಿಗೆ ಶಿಕ್ಷೆಯಾಗಿದೆ. ಎನ್‌ಕೌಂಟರ್ ಹತ್ಯೆಗಳು, ಬುಲ್ಡೋಜರ್ ಬಳಸಿ ಆರೋಪಿಗಳು, ಅಪರಾಧಿಗಳ ಆಸ್ತಿಯನ್ನು ಧ್ವಂಸಗೊಳಿಸುವುದಕ್ಕೆ ನ್ಯಾಯಾಂಗ ಸೇರಿದಂತೆ ವಿವಿಧ ವಲಯಗಳಿಂದ ಉತ್ತರ ಪ್ರದೇಶದ ಬಿಜೆಪಿ ಸರ್ಕಾರ ಟೀಕೆಗೆ ಗುರಿಯಾಗಿತ್ತು. ಆದರೆ, ಎರಡು ವರ್ಷಗಳ ಹಿಂದೆ ಅದು ಅನುಷ್ಠಾನಗೊಳಿಸಿರುವ ‘ಆಪರೇಷನ್ ಕನ್ವಿಕ್ಷನ್’ ಈಗ ದೇಶದ ಗಮನ ಸೆಳೆದಿದೆ



ತ್ವರಿತ ವಿಚಾರಣೆ ದಂಡನೆ

1,14,029
‘ಆಪರೇಷನ್ ಕನ್ವಿಕ್ಷನ್’ ಅಡಿಯಲ್ಲಿ ಗುರುತಿಸಲಾದ ಪ್ರಕರಣಗಳು

74,388
ವಿಲೇವಾರಿ ಮಾಡಲಾದ ಪ್ರಕರಣಗಳು

143
ಪ್ರತಿ ದಿನ ಇತ್ಯರ್ಥ ಪಡಿಸಲಾದ ಸರಾಸರಿ ಪ್ರಕರಣಗಳು

187
ಪ್ರತಿ ದಿನ ಶಿಕ್ಷೆಗೆ ಒಳಗಾದ ಅಪರಾಧಿಗಳು

ಉತ್ತರ ಪ್ರದೇಶ: ಶೀಘ್ರ ನ್ಯಾಯದಾನಕ್ಕಾಗಿ ‘ಆಪರೇಷನ್ ಕನ್ವಿಕ್ಷನ್’


ಪ್ರಜಾವಾಣಿ ವಾರ್ತೆ

ಉತ್ತರ ಪ್ರದೇಶ ದೇಶದಲ್ಲಿ ಅತಿ ಹೆಚ್ಚು ಜನಸಂಖ್ಯೆ ಇರುವ ರಾಜ್ಯ. ಅತಿ ಹೆಚ್ಚು ಅಪರಾಧ ಚಟುವಟಿಕೆಗಳು ನಡೆಯುವ ರಾಜ್ಯಗಳ ಪೈಕಿ ಅದೂ ಒಂದಾಗಿದೆ. ಯೋಗಿ ಆದಿತ್ಯನಾಥ ಅವರು ಮುಖ್ಯಮಂತ್ರಿಯಾದ ನಂತರ ಅಪರಾಧಗಳ ಬಗ್ಗೆ ‘ಶೂನ್ಯ ಸಹನೆ’ ನೀತಿಯನ್ನು ಅಳವಡಿಸಿಕೊಂಡರು. ಅವರ ಈ ನೀತಿ ಟೀಕೆಗೂ ಗುರಿಯಾಗಿತ್ತು. 2022ರ ಚುನಾವಣೆಯಲ್ಲಿ ಯೋಗಿ ನೇತೃತ್ವದ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದ ನಂತರ ಅಪರಾಧ ಪ್ರಕರಣಗಳ ತ್ವರಿತ ವಿಲೇವಾರಿಗೆ ರೂಪಿಸಲಾದ ಹೊಸ ವ್ಯವಸ್ಥೆ ಅಥವಾ ಅಭಿಯಾನ ‘ಆಪರೇಷನ್ ಕನ್ವಿಕ್ಷನ್’.

ಇದರ ಅಡಿಯಲ್ಲಿ ಅಪರಾಧಿಗಳಿಗೆ, ಮಾಫಿಯಾಗೆ ತ್ವರಿತ ಶಿಕ್ಷೆ ಆಗುತ್ತಿದ್ದು, ಅದು ದೇಶದ ಗಮನ ಸೆಳೆದಿದೆ. ಇತ್ಯರ್ಥಪಡಿಸಲಾದ ಪ್ರಕರಣಗಳಲ್ಲಿ ಸಣ್ಣಪುಟ್ಟ ಪ್ರಕರಣಗಳು ಮಾತ್ರವಲ್ಲದೇ, ಕೊಲೆ, ಅತ್ಯಾಚಾರ, ಮಕ್ಕಳ ಮೇಲಿನ ದೌರ್ಜನ್ಯದಂಥ ಗಂಭೀರ ಸ್ವರೂಪದ ಪ್ರಕರಣಗಳೂ ಇದ್ದು, ಅವುಗಳನ್ನು ಎಸಗಿದ ಅಪರಾಧಿಗಳು ಮರಣ ದಂಡನೆ, ಜೀವಾವಧಿ ಶಿಕ್ಷೆಗಳಿಗೆ ಗುರಿಯಾಗಿದ್ದಾರೆ.

2023ರ ಜುಲೈ 1ರಿಂದ ‘ಆಪರೇಷನ್ ಕನ್ವಿಕ್ಷನ್’ ಅನುಷ್ಠಾನಕ್ಕೆ ಬಂದಿದ್ದು, 2025ರ ಜೂನ್ ಮಧ್ಯಭಾಗದವರೆಗೆ 97,158 ಅಪರಾಧಿಗಳಿಗೆ ಶಿಕ್ಷೆಯಾಗಿದೆ. ಹೀಗಾಗಿ, ಇದು ನ್ಯಾಯದಾನ ವ್ಯವಸ್ಥೆಯಲ್ಲಿ ಭಾರಿ ಬದಲಾವಣೆಗೆ ಕಾರಣವಾದ ವ್ಯವಸ್ಥೆ ಎಂದೇ ವ್ಯಾಖ್ಯಾನಿಸಲಾಗುತ್ತಿದೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳು (ಪೋಕ್ಸೊ), ಗೋ ಹತ್ಯೆ, ಮತಾಂತರ, ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶೀಘ್ರ ಶಿಕ್ಷೆ ಆಗುವಂತೆ ಮಾಡುವ ಉದ್ದೇಶದಿಂದ ‘ಆಪರೇಷನ್ ಕನ್ವಿಕ್ಷನ್’ ಅನ್ನು ಉತ್ತರ ಪ್ರದೇಶ ಸರ್ಕಾರ ಜಾರಿಗೆ ತಂದಿತ್ತು.



ಪೋಕ್ಸೊ: 17 ಮಂದಿಗೆ ಗಲ್ಲು

ಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಪ್ರಕರಣಗಳನ್ನೂ ಈ ಅಭಿಯಾನದ ವ್ಯಾಪ್ತಿಗೆ ಸೇರಿಸಲಾಗಿದೆ. ಪೋಕ್ಸೊ ಪ್ರಕರಣಗಳ ಅಪರಾಧಿಗಳ ಪೈಕಿ 17 ಮಂದಿ ಮರಣದಂಡನೆಗೆ ಗುರಿಯಾಗಿದ್ದರೆ, 619 ತಪ್ಪಿತಸ್ಥರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ

‘ಈವರೆಗೆ ಇದರಡಿ 1.14 ಲಕ್ಷ ಪ್ರಕರಣಗಳನ್ನು ಗುರುತಿಸಲಾಗಿದ್ದು, 74 ಸಾವಿರದಷ್ಟು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ವಿವಿಧ ಮಾಫಿಯಾಗಳಿಗೂ ಇದರ ಮೂಲಕ ಅಂಕುಶ ಹಾಕಲಾಗಿದೆ. ಗುರುತಿಸಲಾದ 69 ಮಾಫಿಯಾಗಳ ಪೈಕಿ 29 ಮಾಫಿಯಾಗಳನ್ನು ಶಿಕ್ಷೆಗೊಳಪಡಿಸಲಾಗಿದೆ. ಸಂಘಟಿತ ಅಪರಾಧಗಳನ್ನೂ ಮಟ್ಟಹಾಕುವ ಪ್ರಯತ್ನ ನಡೆಸಲಾಗಿದ್ದು, 272 ಪ್ರಕರಣಗಳಲ್ಲಿ 10 ಕುಖ್ಯಾತ ಅಪರಾಧಿಗಳು ಸೇರಿದಂತೆ 395 ಆರೋಪಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ’ ಎಂದು ಉತ್ತರ ಪ್ರದೇಶ ಸರ್ಕಾರ ಹೇಳಿದೆ.

ತಂತ್ರಜ್ಞಾನದ ನೆರವು: ತ್ವರಿತ ವಿಚಾರಣೆಗಾಗಿ ಪೊಲೀಸರು ಮತ್ತು ಸರ್ಕಾರದ ಪ್ರತಿನಿಧಿಗಳು ನ್ಯಾಯಾಲಯಕ್ಕೆ ಪದೇ ಪದೇ ಖುದ್ದಾಗಿ ಹಾಜರಾಗುವುದನ್ನು ತಪ್ಪಿಸಲು 2024ರ ಜುಲೈ 1ರಿಂದ ವಿಡಿಯೊ ಕಾನ್ಫರೆನ್ಸ್ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಜತೆಗೆ, ಡಿಜಿಟಲ್ ರೂಪದಲ್ಲಿ ದಾಖಲೆಗಳನ್ನು ಸಂಗ್ರಹಿಸಲಾಗುತ್ತಿದ್ದು, ಅವನ್ನು ಅದೇ ರೂಪದಲ್ಲಿಯೇ ನ್ಯಾಯಾಲಯದಲ್ಲಿ ಪ್ರಸ್ತುತಪಡಿಸಲಾಗುತ್ತಿದೆ. ಇದರಿಂದ ರಾಜ್ಯದ ಬೊಕ್ಕಸಕ್ಕೂ ಉಳಿತಾಯವಾಗುತ್ತಿದೆ. ಈ ರೀತಿ 25,000 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದ್ದು, ಅದರಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು ₹25 ಕೋಟಿ ಉಳಿತಾಯವಾಗಿದೆ ಎಂದು ಸರ್ಕಾರ ಮಾಹಿತಿ ನೀಡಿದೆ.

ಆಧಾರ: ಪಿಟಿಐ, ಮಾಧ್ಯಮ ವರದಿಗಳು

ಭಿನ್ನ ದಾರಿಗೆ ಬಂದಿತ್ತು ಆಕ್ಷೇಪ

ಉತ್ತರ ಪ್ರದೇಶ ಹಿಂದಿನಿಂದಲೂ ಅಪರಾಧಗಳಿಗೆ ಕುಖ್ಯಾತಿ ಗಳಿಸಿದೆ. ಹೆಚ್ಚು ಅಪರಾಧಗಳು ನಡೆಯುವ ರಾಜ್ಯಗಳ ಪಟ್ಟಿಯಲ್ಲಿ ಈಗಲೂ ಮುಂಚೂಣಿಯಲ್ಲಿದೆ.


2017ರಲ್ಲಿ ಯೋಗಿ ಆದಿತ್ಯನಾಥ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ, ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸಲು ಭಿನ್ನ ಹಾದಿ ತುಳಿದಿತ್ತು. ಎನ್‌ಕೌಂಟರ್‌ಗಳ ಮೂಲಕ ಆರೋಪಿಗಳು, ಕ್ರಿಮಿನಲ್‌ಗಳು, ಗ್ಯಾಂಗ್‌ಸ್ಟರ್‌ಗಳನ್ನು ಹತ್ಯೆ ಮಾಡುವುದು, ವಿವಿಧ ಪ್ರಕರಣಗಳ ಆರೋಪಿಗಳಿಗೆ ಸೇರಿದ ಮನೆ, ಕಟ್ಟಡ ಧ್ವಂಸ ಮಾಡುವುದು, ಆಸ್ತಿ ಮುಟ್ಟುಗೋಲು ಹಾಕುವಂಥ ಕ್ರಮಗಳನ್ನು ಕೈಗೊಂಡಿತ್ತು.

ಇದಕ್ಕೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದವು. ಮುಸ್ಲಿಮರನ್ನೇ ಗುರಿಯಾಗಿಸಿಕೊಂಡು ಸಂವಿಧಾನಬಾಹಿರವಾಗಿ ಎನ್‌ಕೌಂಟರ್ ನಡೆಸಲಾಗುತ್ತಿದೆ. ಅವರಿಗೆ ಸೇರಿದ ಕಟ್ಟಡಗಳನ್ನು ಧ್ವಂಸ ಮಾಡಲಾಗುತ್ತಿದೆ ಎಂದು ಆರೋಪಿಸಿದ್ದವು.

ಬುಲ್ಡೋಜರ್‌ಗಳ ಮೂಲಕ ಕಟ್ಟಡಗಳನ್ನು ಧ್ವಂಸಗೊಳಿಸುವುದಕ್ಕೆ ಸುಪ್ರೀಂ ಕೋರ್ಟ್ ಕೂಡ ಆಕ್ಷೇಪಿಸಿತ್ತು. ‘ಬುಲ್ಡೋಜರ್ ನ್ಯಾಯ’ ಪರಿಕಲ್ಪನೆಗೆ ಕಳೆದ ವರ್ಷದ ನವೆಂಬರ್‌ನಲ್ಲಿ ಅಂಕುಶ ಹಾಕಿದ್ದ ‘ಸುಪ್ರೀಂ’, ದೇಶಕ್ಕೆ ಅನ್ವಯವಾಗುವ ಮಾರ್ಗಸೂಚಿಗಳನ್ನು ಪ್ರಕಟಿಸಿತ್ತು.


ಹೊಸ ಕಾನೂನುಗಳ ಅಡಿಯಲ್ಲಿ 457 ಪ್ರಕರಣ ಇತ್ಯರ್ಥ

ದೇಶದಲ್ಲಿ ಕಳೆದ ವರ್ಷದ ಜುಲೈ 1ರಿಂದ ಮೂರು ಹೊಸ ಕ್ರಿಮಿನಲ್ ಕಾನೂನುಗಳನ್ನು (ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ) ಜಾರಿಗೊಳಿಸಲಾಗಿತ್ತು. ಈ ಮೂರು ಹೊಸ ಕಾನೂನುಗಳ ಅಡಿಯಲ್ಲಿ ದಾಖಲಾಗಿದ್ದ ಪ್ರಕರಣಗಳ ಪೈಕಿ 457 ಪ್ರಕರಣಗಳನ್ನು ‘ಆಪರೇಷನ್ ಕನ್ವಿಕ್ಷನ್’ನಲ್ಲಿ ವರ್ಷದ ಒಳಗಾಗಿ ಇತ್ಯರ್ಥಪಡಿಸಲಾಗಿದೆ. ನಾಲ್ವರು ಅಪರಾಧಿಗಳಿಗೆ ಮರಣದಂಡನೆ ವಿಧಿಸಲಾಗಿದ್ದರೆ, 425 ಮಂದಿ ತಪ್ಪಿತಸ್ಥರು 20 ವರ್ಷದ ಒಳಗಿನ ಕಾರಾಗೃಹ ಶಿಕ್ಷೆಗೆ ಗುರಿಯಾಗಿದ್ದಾರೆ. 19 ಮಂದಿಗೆ 20 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿದೆ.



ಯಾರಿಗೆ, ಯಾವ ಶಿಕ್ಷೆ?

97,158
ಶಿಕ್ಷೆಗೆ ಗುರಿಯಾದ ಅಪರಾಧಿಗಳು



ಶೀಘ್ರ ವಿಲೇವಾರಿ ಹೇಗೆ?

‘ಆಪರೇಷನ್ ಕನ್ವಿಕ್ಷನ್’ ಅಡಿಯಲ್ಲಿ ಪ್ರಕರಣಗಳನ್ನು ಗುರುತಿಸುವುದು, ಅವುಗಳ ತನಿಖೆ, ವಿಚಾರಣೆ, ಉಸ್ತುವಾರಿ ಎಲ್ಲವನ್ನೂ ಅತ್ಯಂತ ವ್ಯವಸ್ಥಿತವಾಗಿ ಮತ್ತು ತ್ವರಿತವಾಗಿ ಮಾಡಲಾಗುತ್ತಿದೆ ಎಂಬುದು ಸರ್ಕಾರದ ಹೇಳಿಕೆ.

ಅಪರಾಧಗಳ ತ್ವರಿತ ವಿಲೇವಾರಿ ಮಾಡುವ ದಿಸೆಯಲ್ಲಿ ಮೊದಲು ಆರೋಪಿಗಳನ್ನು ಬಂಧಿಸಲಾಗುತ್ತಿತ್ತು, ನಂತರ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಗಳನ್ನು ಸಂಗ್ರಹಿಸಲಾಗುತ್ತಿತ್ತು. ಅದಾದ ನಂತರ ತನಿಖೆ ನಡೆಸಿ, ನ್ಯಾಯಾಲಯದಲ್ಲಿ ಅತಿ ಕಡಿಮೆ ಅವಧಿಯಲ್ಲಿ ಆರೋಪ ಸಾಬೀತಾಗುವಂತೆ ಮಾಡುವುದು ಈ ವ್ಯವಸ್ಥೆಯ ಮುಖ್ಯ ಭಾಗವಾಗಿದೆ.

ಈ ವ್ಯವಸ್ಥೆಯಲ್ಲಿ ಪ್ರಕರಣದ ಆರೋಪಪಟ್ಟಿ ಸಲ್ಲಿಕೆಯಾದ ಮೂರು ದಿನಗಳ ಒಳಗೆ ದೋಷಾರೋಪ ನಿಗದಿ ಮಾಡಲಾಗುತ್ತದೆ. ಈ ದಿಸೆಯಲ್ಲಿ ಜಿಲ್ಲಾ ಪೊಲೀಸರು ಆಯಾ ಜಿಲ್ಲಾ ವ್ಯಾಪ್ತಿಯ ನ್ಯಾಯಾಲಯಗಳಿಗೆ ಅಗತ್ಯ ದಾಖಲೆ ಒದಗಿಸುತ್ತಾರೆ. ಜತೆಗೆ, ಪ್ರತಿದಿನವೂ ಪ್ರಕರಣದ ವಿಚಾರಣೆ ಮಾಡುವಂತೆ ವಿನಂತಿ ಮಾಡಿಕೊಳ್ಳಲಾಗುತ್ತದೆ. ಮತ್ತೊಂದೆಡೆ, ಪ್ರಕರಣಗಳಿಗೆ ಸಂಬಂಧಿಸಿದಂತೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯು ವಿಧಿ ವಿಜ್ಞಾನ ಪ್ರಯೋಗಾಲಯದೊಂದಿಗೆ ಸಂಪರ್ಕದಲ್ಲಿದ್ದು, ವಿಚಾರಣೆಯ ಸಲುವಾಗಿ ವರದಿಗಳು ತ್ವರಿತವಾಗಿ ಸಿಗುವುದನ್ನು ಖಾತರಿಪಡಿಸಿಕೊಳ್ಳುತ್ತಾರೆ. ಇಷ್ಟೆಲ್ಲ ಸಿದ್ಧತೆಗಳ ಕಾರಣಕ್ಕೆ ಬಹುತೇಕ ಪ್ರಕರಣಗಳ ವಿಚಾರಣೆ 30 ದಿನಗಳ ಒಳಗೆ ಪೂರ್ಣಗೊಳ್ಳುತ್ತಿದೆ.



ಪ್ರತಿ ಕಮಿಷನರೇಟ್/ಜಿಲ್ಲೆಯ ವ್ಯಾಪ್ತಿಯಲ್ಲಿ ಪೋಕ್ಸೊ ಪ್ರಕರಣಗಳ ಜತೆಗೆ ಪ್ರತಿ ವಿಭಾಗದಲ್ಲಿಯೂ 20 ಪ್ರಕರಣಗಳನ್ನು ಗುರುತಿಸಿ, ಅವುಗಳನ್ನು ಅತ್ಯುತ್ತಮ ತನಿಖೆಗೆ ಒಳಪಡಿಸಿ, ವೈಜ್ಞಾನಿಕ ರೀತಿಯಲ್ಲಿ ಸಾಕ್ಷ್ಯ ಸಂಗ್ರಹ ಮಾಡಲಾಗುತ್ತದೆ. ಇವುಗಳ ಉಸ್ತುವಾರಿಯ ಭಾಗವಾಗಿಯೇ ರಾಜ್ಯ ಮಟ್ಟದ ವೆಬ್ ಪೋರ್ಟಲ್ ರೂಪಿಸಲಾಗಿದೆ. ಪ್ರತಿ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಈ ಪ್ರಕರಣಗಳ ಪ್ರತಿದಿನದ ಪ್ರಗತಿಯ ಉಸ್ತುವಾರಿಗಾಗಿ ಪ್ರತ್ಯೇಕ ವಿಭಾಗವೊಂದನ್ನು ತೆರೆಯಲಾಗಿದೆ. ಗೆಜೆಟೆಡ್ ಅಧಿಕಾರಿಗೆ ಅದರ ಉಸ್ತುವಾರಿ ವಹಿಸಲಾಗಿದೆ. ಪ್ರಕರಣದ ತ್ವರಿತ ವಿಚಾರಣೆ ಖಾತರಿಪಡಿಸಿಕೊಳ್ಳುವುದು ಅವರ ಜವಾಬ್ದಾರಿಯಾಗಿದೆ.

ರಾಷ್ಟ್ರೀಯ

ನಿಯೋಗದ ಭಾಗವಾಗಿ ತರೂರ್ ಸಮರ್ಥನೆ: ಚವಾಣ್

ನವದೆಹಲಿ (ಪಿಟಿಐ): ‘ವಿದೇಶಕ್ಕೆ ಕಳುಹಿಸಲಾದ ಸರ್ಕಾರಿ ನಿಯೋಗದ ಭಾಗವಾಗಿದ್ದ ಸಂಸದ ಶಶಿ ತರೂರ್ ಅವರು, ನಿಯೋಗದ ಸದಸ್ಯರಾಗಿ ಸರ್ಕಾರವನ್ನು ಸಮರ್ಥಿಸಿಕೊಳ್ಳಲೇಬೇಕು’ ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಪೃಥ್ವಿರಾಜ್ ಚವಾಣ್ ಬುಧವಾರ ಹೇಳಿದರು.


ಪೃಥ್ವಿರಾಜ್ ಚವಾಣ್

ಈ ಕುರಿತು ಪಿಟಿಐ ಜತೆ ಮಾತನಾಡಿದ ಅವರು, ‘ಶಶಿ ತರೂರ್ ಅವರ ಭವಿಷ್ಯ ಏನಾಗಲಿದೆ’ ಎಂಬ ಪ್ರಶ್ನೆಗೆ ‘ನನಗೆ ತಿಳಿದಿಲ್ಲ ಮತ್ತು ಅದರ ಬಗ್ಗೆ ಪ್ರತಿಕ್ರಿಯಿಸುವುದಿಲ್ಲ’ ಎಂದರು.

ಪಹಲ್ಗಾಮ್ ದಾಳಿ ಮತ್ತು ಆ ಬಳಿಕ ನಡೆದ ‘ಆಪರೇಷನ್ ಸಿಂಧೂರ’, ಭಾರತ–ಪಾಕಿಸ್ತಾನ ಸಂಘರ್ಷದ ವಿಚಾರದಲ್ಲಿ ತರೂರ್ ಅವರು ಭಾರತ ಸರ್ಕಾರವನ್ನು ಸಮರ್ಥಿಸಿಕೊಂಡಿದ್ದರು. ಅಲ್ಲದೆ ಕಾಂಗ್ರೆಸ್ ನಿಲುವಿಗೆ ವಿರುದ್ಧವಾಗಿ ಹೇಳಿಕೆಗಳನ್ನು ನೀಡಿದ್ದರು. ಇದು ಕಾಂಗ್ರೆಸ್‌ನ ಕೆಲ ನಾಯಕರನ್ನು ಕೆರಳುವಂತೆ ಮಾಡಿತ್ತು.

‘ಸರ್ಕಾರವನ್ನು ಸಮರ್ಥಿಸಿಕೊಳ್ಳುವುದು ನಿಯೋಗದ ಸದಸ್ಯರ ಕೆಲಸವಾಗಿರುತ್ತದೆಯೇ ಹೊರತು, ನಮ್ಮ ನಡುವಿನ ಭಿನ್ನಾಭಿಪ್ರಾಯವನ್ನು ಪ್ರದರ್ಶಿಸುವುದಲ್ಲ’ ಎಂದು ಚವಾಣ್ ಅವರು ಪ್ರತಿಕ್ರಿಯಿಸಿದರು.

‘ಆಪರೇಷನ್ ಸಿಂಧೂರ’ ಬಳಿಕ ಭಾರತದ ನಿಲುವನ್ನು ತಿಳಿಸಲು ಅಮೆರಿಕ ಮತ್ತು ಇತರ ನಾಲ್ಕು ದೇಶಗಳಿಗೆ ಕಳುಹಿಸಿದ್ದ ಬಹುಪಕ್ಷಗಳ ಸಂಸದರ ನಿಯೋಗದ ನೇತೃತ್ವವನ್ನು ತರೂರ್ ವಹಿಸಿದ್ದರು.

ತೂಕ ಇಳಿಕೆ ಔಷಧ: ತಜ್ಞರೊಂದಿಗೆ ಚರ್ಚಿಸಲು ಡಿಜಿಸಿಐ ಸೂಚನೆ

ನವದೆಹಲಿ (ಪಿಟಿಐ): ತೂಕ ಇಳಿಕೆಗಾಗಿ ಮಾರುಕಟ್ಟೆಯಲ್ಲಿ ಲಭ್ಯವಿರುವ ಔಷಧಗಳ ಸಂಯೋಜನೆ ಕುರಿತ ಅರ್ಜಿ ಬಗ್ಗೆ ನಿರ್ಧರಿಸಲು ಸಂಬಂಧಪಟ್ಟ ತಜ್ಞರು ಹಾಗೂ ಭಾಗಿದಾರರೊಂದಿಗೆ ಸಮಾಲೋಚನೆ ನಡೆಸಲು ಭಾರತೀಯ ಪ್ರಧಾನ ಔಷಧ ನಿಯಂತ್ರಕರಿಗೆ (ಡಿಜಿಸಿಐ) ದೆಹಲಿ ಹೈಕೋರ್ಟ್ ಸೂಚಿಸಿದೆ.



ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೇಲಾ ಅವರನ್ನು ಒಳಗೊಂಡ ನ್ಯಾಯಪೀಠವು, ಡಿಜಿಸಿಐಗೆ ಮನವಿ ಮಾಡುವಂತೆ ಅರ್ಜಿದಾರರಿಗೆ ತಿಳಿಸಿತು. ಈ ವಿಚಾರದ ಬಗ್ಗೆ ಮೂರು ತಿಂಗಳ ಒಳಗಾಗಿ ನಿರ್ಧಾರ ಕೈಗೊಳ್ಳುವಂತೆ ಡಿಜಿಸಿಐಗೆ ನಿರ್ದೇಶನ ನೀಡಿತು.

ನಿರ್ದಿಷ್ಟ ಪ್ರಯೋಗ ಮತ್ತು ಅಧ್ಯಯನ ನಡೆಸದೆಯೇ ತೂಕ ಇಳಿಕೆ ಔಷಧಗಳಿಗೆ ಪರವಾನಗಿ ನೀಡಲಾಗಿದೆ ಎಂದು ಅರ್ಜಿದಾರರು ದೂರಿದ್ದಾರೆ.

ಒಡಿಶಾ: ಮುಷ್ಕರ ಕೈಬಿಡುವಂತೆ ಅಧಿಕಾರಿಗಳಿಗೆ ಸಿ.ಎಂ ಮಾಝಿ ಮನವಿ

ಭುವನೇಶ್ವರ(ಪಿಟಿಐ): ಭುವನೇಶ್ವರ ನಗರಪಾಲಿಕೆ (ಬಿಎಂಸಿ) ಹೆಚ್ಚುವರಿ ಆಯುಕ್ತ ರತ್ನಾಕರ ಸಾಹೂ ಅವರ ಮೇಲಿನ ಹಲ್ಲೆ ಖಂಡಿಸಿ ನಡೆಸುತ್ತಿರುವ ಮುಷ್ಕರವನ್ನು ಸ್ಥಗಿತಗೊಳಿಸಿ, ಕರ್ತವ್ಯಕ್ಕೆ ಮರಳಬೇಕು ಎಂದು ವಿವಿಧ ಇಲಾಖೆ ಅಧಿಕಾರಿಗಳಿಗೆ ಒಡಿಶಾ ಸರ್ಕಾರ ಬುಧವಾರ ಮನವಿ ಮಾಡಿದೆ.

ಈ ನಡುವೆ, ಘಟನೆಗೆ ಸಂಬಂಧಿಸಿ ಐವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದುಷ್ಕರ್ಮಿಗಳ ಗುಂಪೊಂದು ಬಿಎಂಸಿ ಹೆಚ್ಚುವರಿ ಆಯುಕ್ತ ರತ್ನಾಕರ ಸಾಹೂ ಅವರನ್ನು ಕಚೇರಿಯಿಂದ ಮಂಗಳವಾರ ಹೊರಗೆ ಎಳೆದುಕೊಂಡು ಬಂದು, ಅವರ ಮೇಲೆ ಹಲ್ಲೆ ನಡೆಸಿದೆ ಎಂದು ಆರೋಪಿಸಲಾಗಿದೆ. ಈ ಘಟನೆ ಖಂಡಿಸಿ ಒಡಿಶಾ ಆಡಳಿತ ಸೇವೆ(ಒಎಎಸ್) ಹಾಗೂ ಒಡಿಶಾ ಕಂದಾಯ ಸೇವೆ (ಒಆರ್‌ಎಸ್) ಅಧಿಕಾರಿಗಳು ಬುಧವಾರದಿಂದ ‘ಕೆಲಸ ಸ್ಥಗಿತ’ ಮುಷ್ಕರ ಆರಂಭಿಸಿದ್ದಾರೆ.

ಇನ್ನೊಂದೆಡೆ, ಅಧಿಕಾರಿಗಳು ಆರಂಭಿಸಿರುವ ‘ಕೆಲಸ ಸ್ಥಗಿತ’ ಮುಷ್ಕರದಿಂದ ಸೃಷ್ಟಿಯಾಗಿರುವ ಬಿಕ್ಕಟ್ಟು ನಿವಾರಿಸುವ ಸಂಬಂಧ ಮುಖ್ಯಮಂತ್ರಿ ಮೋಹನ್ ಮಾಝಿ ಅವರು ಹಿರಿಯ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಸಭೆಯನ್ನು ಕೂಡ ನಡೆಸಿದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಂದಾಯ ಸಚಿವ ಸುರೇಶ್ ಪೂಜಾರಿ, ‘ಅಧಿಕಾರಿ ಮೇಲಿನ ಹಲ್ಲೆ ಘಟನೆ ಎಲ್ಲರಿಗೂ ಆಘಾತ ತಂದಿದೆ. ಇಂತಹ ಕೃತ್ಯವನ್ನು ಯಾರೂ ಬೆಂಬಲಿಸುವುದಿಲ್ಲ. ಘಟನೆಗೆ ಸಂಬಂಧಿಸಿ ಈಗಾಗಲೇ ಐವರನ್ನು ಬಂಧಿಸಲಾಗಿದ್ದು, ಉಳಿದ ಆರೋಪಿಗಳನ್ನು ಶೀಘ್ರವೇ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು’ ಎಂದು ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಭಾರಿ ಸಂಖ್ಯೆಯ ಜನ ರ‍್ಯಾಲಿಯೊಂದರಲ್ಲಿ ಭಾಗವಹಿಸಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇತ್ತೀಚೆಗೆ, ಉತ್ತರ ಪ್ರದೇಶದ ಇಟಾವಾ ಬಳಿಯ ಹಳ್ಳಿಯೊಂದರಲ್ಲಿ ಭಾಗವತ ಕಥಾ ವಾಚನದ ವೇಳೆ ಪ್ರಬಲ ಸಮುದಾಯದವರು ಯಾದವ ಸಮುದಾಯದ ವ್ಯಕ್ತಿಯೊಬ್ಬರ ತಲೆಗೂದಲು ಬೋಳಿಸಿದ್ದರು. ಆ ಘಟನೆಗೆ ಸಂಬಂಧಿಸಿದ ವಿಡಿಯೊ ಇದಾಗಿದ್ದು, ಘಟನೆಯ ವಿರುದ್ಧ ಯಾದವ ಸಮುದಾಯವು ಪ್ರತಿಭಟನೆ ನಡೆಸಿತು ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.




ವಿಡಿಯೊದ ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಇದೇ ವಿಡಿಯೊ ಅನ್ನು ಇಂತಹುದೇ ಪ್ರತಿಪಾದನೆಯೊಂದಿಗೆ ಹಲವರು ಹಂಚಿಕೊಂಡಿರುವುದು ಕಂಡುಬಂತು. ಕೀಫ್ರೇಮ್ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ರಾಜಸ್ಥಾನದ ಶಿವೊ ಕ್ಷೇತ್ರದ ಶಾಸಕ ರವೀಂದ್ರ ಸಿಂಗ್ ಅವರ ಅಧಿಕೃತ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇದೇ ವಿಡಿಯೊ ಅನ್ನು 2024ರ ಏಪ್ರಿಲ್ 4ರಂದು ಹಂಚಿಕೊಂಡಿರುವುದು ಕಂಡುಬಂತು. ಅದು ಶಾಸಕರು ಆಯೋಜಿಸಿದ್ದ ರ‍್ಯಾಲಿಯಾಗಿದ್ದು, ಇಟಾವಾ ಘಟನೆಗೂ ಅದಕ್ಕೂ ಸಂಬಂಧವಿಲ್ಲ ಎನ್ನುವುದು ಖಚಿತವಾಯಿತು. ಕೆಲವರು ಹಳೆಯ ವಿಡಿಯೊ ಅನ್ನು ಸುಳ್ಳು ಪ್ರತಿಪಾದನೆಯೊಂದಿಗೆ ಹಂಚಿಕೊಳ್ಳುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ತಿಳಿಸಿದೆ.

ಪದಬಂಧ 6092

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಭೆಯಲ್ಲಿರುವ ಸದಸ್ಯ (4)
3.ಹಾಳಾಗುವಂಥದ್ದು ನರನಲ್ಲಿದೆಯಲ್ಲಾ (3)
4.ಆಯುಧಗಳನ್ನಿಡುವ ಕಟ್ಟಡ (4)
6.ಸೂರ್ಯನನ್ನು ಹೀಗೂ ಕರೆಯುತ್ತಾರೆ (3)
8.ನೀರು ಧುಮ್ಮಿಕ್ಕುವ ಸ್ಥಳ (4)
9.ಎಡಬಿಡದೆ ಸುರಿಯುವ ಮಳೆ (4)
10.ಹಾಲಿನಿಂದ ಮಾಡಿರುವ ಸಿಹಿ ಭಕ್ಷ್ಯ (3)
12.ಹಿಡಿತದಿಂದ ಖರ್ಚು ಮಾಡುವಿಕೆ (4)
14.ಈತ ಹಣವಿಲ್ಲದವ (3)
15.ಆನೆಗೆ ಮದವುಂಟಾದಾಗ ಕುಂಭಸ್ಥಳದಿಂದ ಸುರಿಯುವ ದ್ರವ (4)

ಮೇಲಿಂದ ಕೆಳಕ್ಕೆ
1.ಸರ ಪಡೆಯಲು ಹಚ್ಚಿರುವ ಪಾಳಿ! (3)
2.ಹತ್ತು ಸಂಖ್ಯೆಯಿದು (2)
3.ನದಿ ಸಮುದ್ರಕ್ಕೆ ಸೇರುವೆಡೆಯ ಮೆಕ್ಕಲು ಭೂಮಿ (6)
5.ಬೆಳ್ಳಿ ಹಬ್ಬವನ್ನು ಹೀಗೆ ಹೇಳಿ (6)
7.ತುಂಬಾ ನಾಜೂಕಿನ ಎಳೆ (4)
8.ನೀರಿಗೆ ಆಶ್ರಯವಾದುದು (4)
11.ಶಕ್ತಿಯಿಂದ ಕೂಡಿದುದು (3)
13.ಮೃತ್ಯು ದೇವತೆಯಿದು (2)



6091ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಮಂಡಲ 3.ಸಗೋತ್ರ 5.ಪುಳಕ 7.ಉದಯ 8.ಸಮೂಹಗಾನ 11.ಶರಣೆ 12.ಕುಲುಮೆ 15.ಕಂದರ 16.ನವಬಾಳು

ಮೇಲಿಂದ ಕೆಳಕ್ಕೆ:
1.ಕದಪು 2.ಲಜ್ಜೆ 3.ಸಮಯ 4.ತ್ರಯೋದಶಿ 6.ಕಳಶ 7.ಉದಾಹರಣೆ 9.ನಸುಕು 10.ವರಠೀಕಂ 11.ಶರೀರ 13.ಮೆದುಳು 14.ಮೌನ

ಸುಡೊಕು 6476

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

				2		3		5
3		6	5		8		1	
	4			7	3	2		6
	6						7	9
9		1		8				
						1		8
		2	3		7		5	
7	1					6		3
		3	4		2		9	1

6475 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಸುಲಭ ಸೂತ್ರ

ನುಡಿ ಬೆಳಗು

ಪಿ.ಚಂದ್ರಿಕಾ



ನಿವೃತ್ತ ಡಿವೈಎಸ್‌ಪಿ ರಮೇಶಣ್ಣ ಅವರನ್ನು ಮೊನ್ನೆ ಭೇಟಿಯಾದೆ. ಜೊತೆಗೆ ನನ್ನ ತಮ್ಮನಂಥ ಹುಡುಗನೂ ಇದ್ದ. ಅವನಿಗೆ ಸಕ್ಕರೆ ಕಾಯಿಲೆ. ಆಗ ತಾನೆ ಆಸ್ಪತ್ರೆಯಿಂದ ಮನೆಗೆ ಬಂದಿದ್ದ. ಆದರೂ ಅವನ ಕಡೆಗೆ ಅವನಿಗೇ ಗಮನವಿರಲಿಲ್ಲ. ಸಿಕ್ಕಿದ್ದನ್ನೆಲ್ಲಾ ತಿಂದುಬಿಡುತ್ತಿದ್ದ. ಅವನ ಹೆಂಡತಿ ಈ ಬಗ್ಗೆ ಅವರಲ್ಲಿ ಮಾತನಾಡಿದ್ದಳು ಅನ್ನಿಸುತ್ತೆ. ಈ ಹುಡುಗ ಯಾರು ಹೇಳಿದ್ದನ್ನೂ ಕೇಳುವವನಲ್ಲ ಎಂದವರಿಗೆ ಅರ್ಥವಾಗಿತ್ತು. ಇದೆಲ್ಲವನ್ನೂ ಗಮನಿಸಿದ ರಮೇಶಣ್ಣ ಅವನಿಗೆ ಒಂದು ಕಥೆಯನ್ನು ಹೇಳಿದರು.

ಒಮ್ಮೆ ಹೆಂಡತಿಯು ಗಂಡನಿಗೆ, ‘ಅಕಸ್ಮಾತ್ ನಾನು ಸತ್ತು ಹೋದರೆ ಏನು ಮಾಡುತ್ತೀರೀ’ ಎಂದಳು. ಗಂಡ ತಬ್ಬಿಬ್ಬಾಗಿ, ‘ಬದುಕಿರುವಾಗ ಸಾಯುವ ಮಾತು ಯಾಕೆ? ಸುಮ್ಮನಿರು’ ಎಂದ. ಹೆಂಡತಿ ಬಿಡಲಿಲ್ಲ, ‘ಅಲ್ಲಾರೀ ನೀವು ಏನೂ ಮಾಡಬಹುದು. ಆದರೆ ಅದನ್ನು ನೋಡಲಿಕ್ಕೆ ನಾನಿರಲ್ಲ. ಅದಕ್ಕೆ ಕೇಳ್ತ ಇದೀನಿ ಹೇಳಿ’ ಎಂದಳು. ಇದ್ಯಾಕೋ ಅತಿರೇಕಕ್ಕೆ ಹೋಯಿತು ಎಂದು ಭಾವಿಸಿದ ಗಂಡ ಅವಳನ್ನು ಇನ್ನಿಲ್ಲದಂತೆ ಮನವೊಲಿಸಲು ಯತ್ನಿಸಿದ. ಇನ್ನು ಆಗಲ್ಲ ಎಂದು ಗೊತ್ತಾದ ಮೇಲೆ, ‘ನೀನು ಸತ್ತ ಮೇಲೆ ಕೊನೆಯ ಪಯಣವನ್ನು ಅತ್ಯಂತ ವಿಜೃಂಭಣೆಯಿಂದ ಮಾಡುತ್ತೇನೆ. ನೀನು ಇಷ್ಟಪಡುವ ಎಲ್ಲವೂ ನಿನ್ನ ಜೊತೆಯಲ್ಲಿ ಆ ಕ್ಷಣದಲ್ಲಿ ಇರುವಂತೆ ನೋಡಿಕೊಳ್ಳುವೆ. ಮುಖ್ಯವಾಗಿ ನಿನಗೆ ಇಷ್ಟವಾದ ಗುಲಾಬಿ ಹೂಗಳಿಂದ ಅಲಂಕರಿಸಿ, ನೋಡಿದ ಜನ ಮೂಗಿನ ಮೇಲೆ ಬೆರಳಿರಿಸುವಂತೆ ಮಾಡುವೆ’ ಎಂದ. ಹೆಂಡತಿ, ‘ಹೌದಾ’ ಎಂದಳು. ಅವಳ ತಲೆಮೇಲೆ ಕೈ ಇರಿಸಿ, ‘ನಿನ್ನಾಣೆಯಾಗಿಯೂ’ ಎಂದ ಗಂಡ. ‘ಅಲ್ಲಾರಿ ನನಗೆ ಗುಲಾಬಿ ಇಷ್ಟ ಅಂತ ನಿಮಗೆ ನೆನಪಿದೆ ತಾನೇ ಹಾಗಿದ್ದ ಮೇಲೆ ಐದು ರೂಪಾಯಿ ಒಂದು ಹೂ ನನಗೇ ತಂದುಕೊಟ್ಟರೆ ಎಂಥಾ ದೊಡ್ಡ ಸಮಾಧಾನ. ನಿಮ್ಮನ್ನು ನಾನು ಇನ್ನಷ್ಟು ವಿಶ್ವಾಸ ಪ್ರೀತಿಯಿಂದ ನೋಡುವೆ. ಅದರಿಂದ ನನ್ನ ಮೇಲೂ ನಿಮಗೆ ವಿಶ್ವಾಸ ಜಾಸ್ತಿಯಾಗುತ್ತದೆ ಅಲ್ಲವೇ? ಸತ್ತ ಮೇಲೆ ಬೇರೆಯವರು ನೋಡಲಿ ಎಂದು ಮಾಡುವುದಕ್ಕಿಂತ ಬದುಕಿದ್ದಾಗ ನನ್ನೊಂದಿಗೆ ಹೇಗೆ ನಡೆದುಕೊಳ್ಳಬಲ್ಲೆ ಎನ್ನುವುದು ಮುಖ್ಯ. ಇದು ಜೀವನದ ಸುಲಭ ಸೂತ್ರ ಅಲ್ಲವೇ’ ಎಂದಳು ವಿಷಾದದಿಂದ. ಆ ಮಾತು ಕೇಳಿ ತೀವ್ರ ಅವಮಾನದಿಂದ ಗಂಡನಿಗೆ ತಲೆ ಎತ್ತಲಿಕ್ಕೇ ಆಗಲಿಲ್ಲ.

‘ಹೊಂದಾಣಿಕೆ ಎನ್ನುವುದು ಒಂದು ಪುಟ್ಟ ಗುಲಾಬಿಯಲ್ಲಿದೆ ಎಂದಾಗ ಅದನ್ನು ಕೊಡುವುದರಲ್ಲಿ ಯಾವ ನಷ್ಟವಿದೆ? ದೇಹಕ್ಕೂ ಅಷ್ಟೇ, ಅದು ಸುಖಿಯಾಗಿದ್ದರೆ ನೀನು ಏನು ಬೇಕಾದರೂ ಮಾಡುತ್ತೀಯ. ಅದನ್ನು ಕೆಡಿಸಿಕೊಂಡರೆ ಆಸ್ಪತ್ರೆಯ ವಾಸ. ದೇಹ ಮತ್ತು ಮನಸ್ಸು ಆದರೂ ಸರಿಯೆ, ಗಂಡ ಹೆಂಡತಿಯಾದರೂ ಸರಿಯೆ.. ಒಂದನ್ನೊಂದು ಅನುಸರಿಸದೇ ಇದ್ದರೆ ಕಷ್ಟವಾಗುತ್ತೆ. ನಿನ್ನ ಮನಸ್ಸು ದೇಹ ಎರಡನ್ನೂ ಸಮತೋಲಿತವಾಗಿ ಇಟ್ಟುಕೊಳ್ಳಬೇಕು. ದೇಹಕ್ಕೆ ಒಳಿತಾಗುವುದನ್ನು ಮನಸ್ಸು, ಮನಸ್ಸು ಹೇಳಿದ್ದನ್ನು ದೇಹವೂ ಕೇಳಿದರೆ ಕಾಯಿಲೆಯನ್ನು ದೂರ ಇಡಬಹುದು. ಕೊನೆಯವರೆಗೂ ನಿನ್ನ ಜೊತೆ ಇರುವುದು ನಿನ್ನ ಮನಸ್ಸೇ ಹೊರತು ಹೊರಗಿನ ಜನರಲ್ಲ. ಸಂಸಾರದಲ್ಲೂ ಅಷ್ಟೇ ಹೆಂಡತಿ ಮಾತ್ರ ನಿನ್ನ ಜೊತೆ ಇರಬಲ್ಲಳು’ ಎಂದರು ರಮೇಶಣ್ಣ.

ನಿಜ. ಸಣ್ಣಪುಟ್ಟ ಸಂಗತಿಗಳು ಇಡೀ ಬದುಕನ್ನೇ ರೂಪಿಸುತ್ತಿರುತ್ತದೆ. ಅರ್ಥ ಮಾಡಿಕೊಂಡರೆ ಜೀವನ ಸರಳ, ಸಲೀಸು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

03 ಜುಲೈ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಅಷ್ಟಮಿ ಗಂ. 14-07 **ನಕ್ಷತ್ರ:** ಹಸ್ತ ಗಂ. 13-51 **ಯೋಗ:** ಪರಿಘ ಗಂ. 18-36 **ಕರಣ:** ಬವ ಗಂ. 14-07, ಮಿಥುನ ಮಾಸದ 19 ನೇ ದಿನ. **ಮಳೆ ನಕ್ಷತ್ರ:** ಆರ್ದ್ರಾ 4 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 – 03-00. **ಸೂರ್ಯೋದಯ:** 06-12 **ಸೂರ್ಯಾಸ್ತ:** 06-58 **ಮುಸ್ಲಿಂ ದಿನಾಂಕ:** 07 ಮೊಹರಮ್, ಅದೃಷ್ಟ ಸಂಖ್ಯೆ: 3, 4

ಮೇಷ: ನೀವು ಆಧ್ಯಾತ್ಮದತ್ತ ವಾಲಲಿದ್ದೀರಿ. ಅಲೌಕಿಕ ಶಕ್ತಿಗಳತ್ತ ಗಮನಹರಿಸುವಿರಿ. ಸಂಜೆ ಹೊತ್ತಿಗೆ ಹಳೆಯ ಸ್ನೇಹಿತರ ಸಂಪರ್ಕ ಸಾಧಿಸಲಿದ್ದೀರಿ. ಕೆಲಸ ಮಾಡುವ ಮುನ್ನ ವಾಸ್ತವಾಂಶಗಳನ್ನು ಅರಿತುಕೊಳ್ಳುವ ಪ್ರಯತ್ನ ಒಳ್ಳೆಯದು.

ವೃಷಭ: ವಾಣಿಜ್ಯ ರಂಗದಲ್ಲಿ ಹೊಸ ತಿರುವು ವಾಣಿಜ್ಯ ಸಂಕೀರ್ಣ ನಿರ್ಮಿಸಲು ಪರವಾನಗಿ ಕೇಳಿದವರಿಗೆ ಶುಭ ಸಂಕೇತ ಸಿಗುವುದು. ಅಧಿಕಾರಿ ವರ್ಗದವರಿಂದ ಸಾಮರ್ಥ್ಯಕ್ಕೆ ಅನುಗುಣವಾಗಿ ಪ್ರಶಂಸೆ ಕೇಳುವಿರಿ.

ಮಿಥುನ: ಒಡನಾಟ ಹೊಂದಿರುವ ವ್ಯಕ್ತಿಗಳ ಹರಿತ ನುಡಿಗಳು ಮನಸ್ಸಿಗೆ ಬೇಸರವನ್ನು ಉಂಟುಮಾಡಬಹುದು. ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡಲ್ಲಿ ಹೊಸ ಯೋಜನೆಗಳು ಜಾರಿಯಾಗಲಿವೆ.

ಕರ್ಕಾಟಕ: ಒತ್ತಾಯಪೂರ್ವಕವಾಗಿ ಮಾಡುತ್ತಿರುವ ಕಾರ್ಯಗಳನ್ನು ಬಿಡಬೇಕು ಎನ್ನುವಂಥ ಮನೋಭಾವ ಬರುವ ಸಾಧ್ಯತೆಗಳಿವೆ. ರಾಜಕಾರಣಿಗಳೊಂದಿಗೆ ಬೆಳೆಸಿಕೊಂಡ ಒಡನಾಟವು ಅಪಾಯ ತಂದೊಡ್ಡಲಿದೆ.

ಸಿಂಹ: ತಂದೆ-ತಾಯಿಯ ಆರೋಗ್ಯದಲ್ಲಿ ಏರುಪೇರಾಗಲಿದೆ. ನೆರೆಹೊರೆಯವರ ಕಿರಿಕಿರಿ ತಪ್ಪದು. ಎಲ್ಲಾ ವಿಚಾರಗಳಲ್ಲಿಯೂ ಸಾವಧಾನವಾಗಿ ಮುಂದುವರಿಯಿರಿ. ಮಹಾಗಣಪತಿಯನ್ನು ಆರಾಧಿಸಿ.

ಕನ್ಯಾ: ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು. ಉದಯೋನ್ಮುಖ ತಾರೆಯರಿಗೆ ಮತ್ತು ಕಲಾವಿದರಿಗೆ ಅವಕಾಶ ಲಭಿಸಲಿದೆ. ಹಿಂದಿನ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನ ನೀಡಿ.

ತುಲಾ: ಆತ್ಮವಿಶ್ವಾಸದಿಂದಾಗಿ ಕೆಲಸಕಾರ್ಯಗಳಲ್ಲಿ ಅತಿ ಯಶಸ್ಸು ಹೊಂದುವಿರಿ. ಭವಿಷ್ಯದ ವಿಚಾರವಾಗಿ ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅಗತ್ಯ. ಕರ್ತವ್ಯದಲ್ಲಿ ಲೋಪವಾಗದಂತೆ ಗಮನವಹಿಸಿ.

ವೃಶ್ಚಿಕ: ಮನೆಯ ಜವಾಬ್ದಾರಿಯಲ್ಲದೇ ಉದ್ಯೋಗಕ್ಕೂ ಪತ್ನಿಯ ಸಹಕಾರ ಸಂಪೂರ್ಣ ಸಿಗಲಿದೆ. ರಿಯಲ್ ಎಸ್ಟೇಟುದಾರರಿಗೆ ಉತ್ತಮ ಅವಕಾಶ ಎದುರಾಗುವುದು, ದುರಾಸೆ ಪಡುವುದು ಸರಿಯಲ್ಲ.

ಧನು: ಬಟ್ಟೆ ವಿನ್ಯಾಸಗಾರರು ತಮ್ಮ ಉಡುಪುಗಳ ರಫ್ತು ಮಾರಾಟವನ್ನು ಹೆಚ್ಚಿಸಿಕೊಳ್ಳಬಹುದು. ಜವಳಿಯ ಮೇಲೇ ಬಂಡವಾಳ ಹಾಕಲು ಸಕಾಲ. ಆಸ್ತಿ ಮಾರಾಟ ಮಾಡಿ ಸಾಲ ಮುಕ್ತರಾಗುವ ಯೋಚನೆ ಸರಿಯಲ್ಲ.

ಮಕರ: ನಾಲ್ಕಾರು ಜನರ ಎದುರು ಅಗೌರವ ಎದುರಿಸುವ ಲಕ್ಷಣಗಳಿವೆ. ಕೆಲಸದ ಕ್ಷೇತ್ರದಲ್ಲಿ ಹೆಚ್ಚು ಜವಾಬ್ದಾರಿಯಿಂದ ನಿರ್ವಹಿಸಿ. ಆಸ್ತಿಯ ವಿಚಾರವಾಗಿ ಅಣ್ಣ-ತಮ್ಮಂದಿರಲ್ಲಿ ಭಿನ್ನಾಭಿಪ್ರಾಯ ಮೂಡಲಿದೆ.

ಕುಂಭ: ಸ್ವಂತ ಉದ್ಯೋಗಿಗಳಿಗೆ ಹಣಕಾಸಿನ ಸ್ಥಿತಿ ಉತ್ತಮಗೊಳ್ಳುವುದರಿಂದ ಆಸ್ತಿ ಖರೀದಿಯ ಸಾಧ್ಯತೆ ಇದೆ. ವಿದೇಶಕ್ಕೆ ಹೋಗುವ ಕನಸು ಕಟ್ಟಿಕೊಂಡವರಿಗೆ ಅವಕಾಶ ಎದುರಾಗುವುದು. ಜೀರ್ಣಕ್ರಿಯೆ ಸಮಸ್ಯೆ ಉಂಟಾಗಬಹುದು.

ಮೀನ: ಮೇಲಧಿಕಾರಿಗಳ ಜತೆಯಲ್ಲಿ ಮನಸ್ತಾಪ ಹೆಚ್ಚಾಗದಂತೆ ಜಾಗ್ರತೆ ವಹಿಸಿ. ಖಾಸಗಿ ಉದ್ಯೋಗದಲ್ಲಿರುವವರಿಗೆ ಒತ್ತಡ ಅಥವಾ ಅಭದ್ರತೆಯ ಅನುಭವ ಆಗುವುದು. ಯಾರದ್ದೋ ಮಾತು ಕೇಳಿ ಸ್ನೇಹ ಕಳೆದುಕೊಳ್ಳಬೇಡಿ.

ಗುಂಡಣ್ಣ



ವಿನಿಮಯ ದರ | ಡಾಲರ್ 85.62 | ಪೌಂಡ್ 117.32 | ಯುರೊ 100.86 | ಯೆನ್ (100ಕ್ಕೆ) 59

ಅಡಿಕೆ ಧಾರಣೆ

ಕುಮಟಾ	
ಹೊಸಚಾಲಿ	35599-43099
ಬೆಟ್ಟೆ	30509-38299
ಚಾಲಿ	38569-42699
ಚಿಪ್ಪು	23869-29569
ಕೋಕ	6589-19099
ಫ್ಯಾಕ್ಟರಿ	6019-24630
ಶಿವಮೊಗ್ಗ	
ಬೆಟ್ಟೆ	51000-62159
ಗೊರಬಲು	18189-29400
ರಾಶಿ	45009-56911
ಸರಕು	53009-97396
ಸಿದ್ದಾಪುರ	
ಬಿಳಿಗೋಟು	23109-29500
ಚಾಲಿ	33419-41111
ಕೋಕ	15199-19419
ಕೆಂಪುಗೋಟು	22119-22819
ರಾಶಿ	45089-45399
ತಟ್ಟಿಬೆಟ್ಟೆ	32899-35809
ಶಿರಸಿ	
ಬೆಟ್ಟೆ	28199-41899
ಬಿಳಿಗೋಟು	16099-33123
ಚಾಲಿ	35808-43099
ಕೆಂಪುಗೋಟು	19199-22699
ರಾಶಿ	43009-47699

ಷೇರುಪೇಟೆ ವಹಿವಾಟು

ಹಿಂದಿನ ಅಂತ್ಯ 83,697 | 287 | ಇಂದಿನ ಅಂತ್ಯ 83,409

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ: 25,541
ಇಂದಿನ ಅಂತ್ಯ: 25,453
ದಿನದ ಕನಿಷ್ಠ: 25,378
88

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹620
12 ಕ್ಕೆ ₹80
ಮೈಸೂರು: 100 ಕ್ಕೆ ₹625

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹333-542
ದ್ವಿತಳಿ (ಬಿ.ವಿ) ₹392-705

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹197.50
ಆರ್‌ಎಸ್‌ಎಸ್-5 ₹191.50
ಗುಡ್ ಲಾಟ್ ₹180.50

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)
ಬೆಂಗಳೂರು ₹20000-24000
ದಾವಣಗೆರೆ ₹21400-21400

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)
ಶೇಂಗಾ (ರಿಫೈನ್ಡ್) ₹1380 (1380)
ಸೋಯಾ (ರಿಫೈನ್ಡ್) ₹1200 (1190)
ಸೂರ್ಯಕಾಂತಿ (ರಿಫೈನ್ಡ್) ₹1350 (1340)
ಪಾಮೋಲಿನ್ ₹1165 (1160)

‘ಆರ್ ಕಾಂ’ ಸಾಲದ ಖಾತೆಯಲ್ಲಿ ‘ವಂಚನೆ’

ಅನಿಲ್ ಅಂಬಾನಿ ಹೆಸರನ್ನು ಆರ್‌ಬಿಐಗೆ ಕಳುಹಿಸಲು ಭಾರತೀಯ ಸ್ಟೇಟ್ ಬ್ಯಾಂಕ್ ಸಿದ್ಧತೆ • ಒಟ್ಟು ಸಾಲ ₹31 ಸಾವಿರ ಕೋಟಿ



ಅನಿಲ್ ಅಂಬಾನಿ

ನವದೆಹಲಿ (ಪಿಟಿಐ): ರಿಲಯನ್ಸ್ ಕಮ್ಯುನಿಕೇಷನ್ಸ್ (ಆರ್ ಕಾಂ) ಕಂಪನಿಯು ಪಡೆದಿರುವ ಸಾಲವನ್ನು ‘ವಂಚನೆ’ ಎಂದು ವರ್ಗೀಕರಿಸಲು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತೀರ್ಮಾನಿಸಿದೆ. ಅಲ್ಲದೆ, ಕಂಪನಿಯ ನಿರ್ದೇಶಕರಾಗಿದ್ದ ಅನಿಲ್ ಅಂಬಾನಿ ಅವರ ಹೆಸರನ್ನು ಆರ್‌ಬಿಐಗೆ ಕಳುಹಿಸಲು ಕೂಡ ಬ್ಯಾಂಕ್ ನಿರ್ಧರಿಸಿದೆ.

ರಿಲಯನ್ಸ್ ಕಮ್ಯುನಿಕೇಷನ್ಸ್ ಲಿಮಿಟೆಡ್ ಕಂಪನಿಗೆ ಸಾಲ ನೀಡಿರುವ ಇತರ ಬ್ಯಾಂಕ್‌ಗಳೂ ಇದೇ ಹಾದಿ ತುಳಿಯುವ ಸಾಧ್ಯತೆ ಇದೆ.

ಸಾಲದ ಖಾತೆಯನ್ನು ‘ವಂಚನೆ’ ಎಂದು ವರ್ಗೀಕರಿಸುವುದಾಗಿ ಎಸ್‌ಬಿಐ ಮಾಹಿತಿ ನೀಡಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ. ಆರ್‌ಬಿಐ ಮಾರ್ಗಸೂಚಿ ಪ್ರಕಾರ, ಖಾತೆಯೊಂದನ್ನು ‘ವಂಚನೆ’ ಎಂದು ವರ್ಗೀಕರಿಸಿದ ನಂತರ ಬ್ಯಾಂಕ್ ಅದನ್ನು ಆರ್‌ಬಿಐಗೆ 21 ದಿನಗಳಲ್ಲಿ ವರದಿ ಮಾಡಬೇಕು. ಅಲ್ಲದೆ, ಪ್ರಕರಣವನ್ನು ಸಿಬಿಐ ಅಥವಾ ಪೊಲೀಸರಿಗೆ ವರದಿ ಮಾಡಬೇಕು.

ಷೇರುಪೇಟೆಗೆ ನೀಡಿರುವ ಮಾಹಿತಿ ಪ್ರಕಾರ ರಿಲಯನ್ಸ್ ಕಮ್ಯುನಿಕೇಷನ್ಸ್ ಮತ್ತು ಅದರ ಅಧೀನ ಸಂಸ್ಥೆಗಳು ಬ್ಯಾಂಕುಗಳಿಂದ ಒಟ್ಟು ₹31,580 ಕೋಟಿ ಸಾಲ ಪಡೆದಿವೆ.

ಸಾಲದ ಮೊತ್ತವನ್ನು ಭಿನ್ನ ಉದ್ದೇಶಗಳಿಗೆ ಬಳಕೆ ಮಾಡಿರುವುದು ಕಂಡುಬಂದಿದೆ, ಸಮೂಹದ ಬೇರೆ ಬೇರೆ ಸಂಸ್ಥೆಗಳಲ್ಲಿ ಹಣದ ಹರಿವು ಕಂಡುಬಂದಿದೆ ಎಂದು ಕಂಪನಿಗೆ ಕಳುಹಿಸಿರುವ ಪತ್ರದಲ್ಲಿ ಎಸ್‌ಬಿಐ ಹೇಳಿದೆ.

ಸಾಲವನ್ನು ಹಿಂದಿರುಗಿಸದೆ ಇರುವವರು ಹಾಗೂ ವಂಚನೆ ಎಸಗಿರುವವರು ಬ್ಯಾಂಕ್‌ಗಳಿಂದ, ಸರ್ಕಾರಿ ಸ್ವಾಮ್ಯದ ಬ್ಯಾಂಕೇತರ ಹಣಕಾಸು ಕಂಪನಿಗಳಿಂದ (ಎನ್‌ಬಿಎಫ್‌ಸಿ), ಅಭಿವೃದ್ಧಿ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವುದನ್ನು ಐದು ವರ್ಷಗಳವರೆಗೆ ನಿಷೇಧಿಸಲಾಗುತ್ತದೆ. ವಂಚನೆ ಎಸಗಿದ ಮೊತ್ತವನ್ನು ಪೂರ್ತಿಯಾಗಿ ಪಾವತಿ ಮಾಡಿದ ನಂತರ ಐದು ವರ್ಷಗಳವರೆಗೆ ಇದು ಜಾರಿಯಲ್ಲಿ ಇರುತ್ತದೆ.

ಈ ಅವಧಿ ಪೂರ್ಣಗೊಂಡ ನಂತರ, ವ್ಯಕ್ತಿಗೆ ಸಾಲ ನೀಡಬೇಕೇ ಬೇಡವೇ ಎಂಬ ಬಗ್ಗೆ ಹಣಕಾಸು ಸಂಸ್ಥೆಗಳು ತೀರ್ಮಾನ ತೆಗೆದುಕೊಳ್ಳಬಹುದು.

ವಂಚನೆ ಗುರುತಿಸುವ ಸಮಿತಿಯ ವರದಿ ಪ್ರಕಾರ ಒಟ್ಟು ಸಾಲದ ಮೊತ್ತದಲ್ಲಿ ₹13,667 ಕೋಟಿಯನ್ನು (ಶೇ 44ರಷ್ಟನ್ನು) ಸಾಲ ಮರುಪಾವತಿಗೆ ಹಾಗೂ ಇತರ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ. ₹12,692 ಕೋಟಿಯನ್ನು (ಶೇ 41ರಷ್ಟು) ಸಂಬಂಧಿತ ಸಂಸ್ಥೆ/ವ್ಯಕ್ತಿಗಳಿಗೆ ಪಾವತಿ ಮಾಡಲು ಬಳಸಲಾಗಿದೆ.

₹6,265 ಕೋಟಿಯನ್ನು ಇತರ ಬ್ಯಾಂಕ್‌ಗಳ ಸಾಲ ತೀರಿಸಲು ಬಳಸಲಾಗಿದೆ. ₹5,501 ಕೋಟಿಯನ್ನು ಸಂಬಂಧಪಟ್ಟ ವ್ಯಕ್ತಿ, ಸಂಸ್ಥೆಗಳಿಗೆ ಪಾವತಿ ಮಾಡಲಾಗಿದೆ ಮತ್ತು ಈ ಪಾವತಿಗಳು ಸಾಲವನ್ನು ಪಡೆದ ಉದ್ದೇಶಕ್ಕೆ ಅನುಗುಣವಾಗಿ ಇಲ್ಲ.

ದೇನಾ ಬ್ಯಾಂಕ್‌ನಿಂದ ಪಡೆದ ₹250 ಕೋಟಿಯನ್ನು ನಿಗದಿತ ಉದ್ದೇಶಕ್ಕೆ ಬಳಕೆ ಮಾಡಿಲ್ಲ. ಬಂಡವಾಳ ವೆಚ್ಚಗಳಿಗಾಗಿ ಐಐಎಫ್‌ಸಿಎಲ್‌ನಿಂದ ₹248 ಕೋಟಿ ಸಾಲ ಪಡೆಯಲಾಯಿತು. ‘ದೇನಾ ಬ್ಯಾಂಕ್ ಹಾಗೂ ಐಐಎಫ್‌ಸಿಎಲ್‌ನಿಂದ ಪಡೆದ ಸಾಲವನ್ನು ಬೇರೆ ಉದ್ದೇಶಗಳಿಗೆ ಬಳಸಿಕೊಂಡಂತೆ, ವಿಶ್ವಾಸಕ್ಕೆ ಚ್ಯುತಿ ತಂದಂತೆ ಕಾಣುತ್ತಿದೆ’ ಎಂದು ವರದಿಯು ಹೇಳಿದೆ.

ರಿಲಯನ್ಸ್ ಕಮ್ಯುನಿಕೇಷನ್ಸ್ ಕಂಪನಿಯು ದಿವಾಳಿ ಸಂಹಿತೆಯ ಅಡಿಯಲ್ಲಿ ಕಾರ್ಪೊರೇಟ್ ದಿವಾಳಿ ಪರಿಹಾರ ಪ್ರಕ್ರಿಯೆ ಎದುರಿಸುತ್ತಿದೆ. 2019ರ ಜೂನ್ 28ರಿಂದ ಕಂಪನಿಯ ವ್ಯವಹಾರಗಳನ್ನು ರಾಷ್ಟ್ರೀಯ ಕಂಪನಿ ನ್ಯಾಯಮಂಡಳಿ ನೇಮಕ ಮಾಡಿರುವ ವೃತ್ತಿಪರ ನೋಡಿಕೊಳ್ಳುತ್ತಿದ್ದಾರೆ.

ಸಹಜ ನ್ಯಾಯದ ಪಾಲನೆ ಆಗಿಲ್ಲ: ಅಂಬಾನಿ ವಕೀಲ

ರಿಲಯನ್ಸ್ ಕಮ್ಯುನಿಕೇಷನ್ಸ್ ಕಂಪನಿಯ ಸಾಲದ ಖಾತೆಯನ್ನು ‘ವಂಚನೆ’ ಎಂದು ವರ್ಗೀಕರಿಸುವುದನ್ನು ವಿರೋಧಿಸಿ ಅನಿಲ್ ಅಂಬಾನಿ ಪರ ವಕೀಲರು ಎಸ್‌ಬಿಐಗೆ ಪತ್ರ ಬರೆದಿದ್ದಾರೆ.

ಎಸ್‌ಬಿಐ ಕ್ರಮವು ಆರ್‌ಬಿಐ ಮಾರ್ಗಸೂಚಿಗಳಿಗೆ ಹಾಗೂ ನ್ಯಾಯಾಲಯದ ನಿರ್ದೇಶನಗಳಿಗೆ ವಿರುದ್ಧವಾಗಿದೆ ಎಂದು ಅವರು ಹೇಳಿದ್ದಾರೆ.

ಎಸ್‌ಬಿಐ ಈ ನಿರ್ಧಾರವನ್ನು ಸಹಜ ನ್ಯಾಯದ ತತ್ವವನ್ನು ಪಾಲಿಸದೆಯೇ ಕೈಗೊಂಡಿದೆ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಎಸ್‌ಬಿಐ ನೀಡಿದ್ದ ಶೋಕಾಸ್ ನೋಟಿಸ್ ಅಮಾನ್ಯ ಎಂದು ಅನಿಲ್ ಅಂಬಾನಿ ಅವರು ಹೇಳಿರುವುದಕ್ಕೆ ಬ್ಯಾಂಕಿನ ಕಡೆಯಿಂದ ಪ್ರತಿಕ್ರಿಯೆ ಬಂದಿಲ್ಲ. ಈಗಿನ ತೀರ್ಮಾನಕ್ಕೆ ಬರಲು ಆಧಾರ ಏನು ಎಂಬುದನ್ನು ತಿಳಿಸಿಲ್ಲ ಎಂದು ವಕೀಲರು ಹೇಳಿದ್ದಾರೆ.

ಕಂಪನಿಯ ಇತರ ಕಾರ್ಯನಿರ್ವಾಹಕೇತರ ನಿರ್ದೇಶಕರಿಗೆ ನೀಡಿದ್ದ ನೋಟಿಸ್‌ಗಳನ್ನು ಎಸ್‌ಬಿಐ ಹಿಂಪಡೆದಿದೆ. ಅನಿಲ್ ಅಂಬಾನಿ ಅವರೂ ಕಾರ್ಯನಿರ್ವಾಹಕೇತರ ನಿರ್ದೇಶಕ ಆಗಿದ್ದರು, ಕಂಪನಿಯ ನಿತ್ಯದ ವಹಿವಾಟುಗಳಲ್ಲಿ ತೊಡಗಿಸಿಕೊಳ್ಳುತ್ತಿರಲಿಲ್ಲ. ಅವರ ವಿಚಾರದಲ್ಲಿ ಈ ಬಗೆಯಲ್ಲಿ ವರ್ಗೀಕರಣ ಮಾಡಿರುವುದು ತಪ್ಪು ಎಂದು ಹೇಳಿದ್ದಾರೆ.

ಸ್ವಾಗತ...

ಪಿಟಿಐ ಚಿತ್ರ:



ಭಾರತದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಘಾನಾದ ಅಕ್ರಾ ವಿಮಾನ ನಿಲ್ದಾಣದಲ್ಲಿ ಬಾಲಕಿಯೊಬ್ಬಳು ಸ್ವಾಗತ ಕೋರಿದಳು

ಶೇಖ್ ಹಸೀನಾಗೆ 6 ತಿಂಗಳ ಜೈಲು ಶಿಕ್ಷೆ

ಢಾಕಾ (ಪಿಟಿಐ): ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಅವರಿಗೆ ಅಂತರ ರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ (ಐಸಿಟಿ) 6 ತಿಂಗಳ ಜೈಲು ಶಿಕ್ಷೆ ವಿಧಿಸಿದೆ.

ಮೂವರು ನ್ಯಾಯಮೂರ್ತಿಗಳಿದ್ದ ಐಸಿಟಿ-1 ಪೀಠವು ಈ ತೀರ್ಪು ನೀಡಿತು. ಗೈಬಾಂಧ ಜಿಲ್ಲೆಯ ಗೋಬಿಂದ ಗಂಜದ ಶಕೀಲ್ ಬುಲ್‌ಬುಲ್ ಅವರಿಗೂ ಇದೇ ತೀರ್ಪಿನಲ್ಲಿ ಎರಡು ತಿಂಗಳ ಜೈಲು ಶಿಕ್ಷೆ ವಿಧಿಸಿತು.

ಸರ್ಕಾರಿ ಹುದ್ದೆಗಳ ಮೇಲಿನ ಮೀಸಲಾತಿಯನ್ನು ವಿರೋಧಿಸಿ ಸರ್ಕಾರದ ವಿರುದ್ಧ ಬಾಂಗ್ಲಾದೇಶದಾದ್ಯಂತ ಯುವಕರು ಮತ್ತು ವಿದ್ಯಾರ್ಥಿಗಳು 11 ತಿಂಗಳ ಹಿಂದೆ ಭಾರಿ ಪ್ರತಿಭಟನೆ ನಡೆಸಿದ್ದರು. ಈ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿತ್ತು. ಬಳಿಕ ಆ.5ರಂದು ಶೇಖ್ ಹಸೀನಾ ಅವರು ತಮ್ಮ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿ, ದೇಶ ತೊರೆದಿದ್ದರು.

ಇದಾದ ಬಳಿಕ ಹಸೀನಾ ಅವರಿಗೆ ಪ್ರಕರಣವೊಂದರಲ್ಲಿ ಇದೇ ಮೊದಲ ಬಾರಿಗೆ ಜೈಲು ಶಿಕ್ಷೆ ವಿಧಿಸಲಾಗಿದೆ.

ಸೆನ್ಸೆಕ್ಸ್, ನಿಫ್ಟಿ ಇಳಿಕೆ



ಮುಂಬೈ (ಪಿಟಿಐ): ಎಚ್‌ಡಿಎಫ್‌ಸಿ ಬ್ಯಾಂಕ್, ಎಲ್ ಆ್ಯಂಡ್ ಟಿ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಷೇರುಪೇಟೆ ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 287 ಅಂಶ ಇಳಿಕೆಯಾಗಿ, 83,409ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 88 ಅಂಶ ಕಡಿಮೆಯಾಗಿ, 25,453ಕ್ಕೆ ಕೊನೆಗೊಂಡಿದೆ.

ಅಮೆರಿಕವು ಪ್ರತಿಸುಂಕ ವಿಧಿಸುವುದಕ್ಕೆ ನೀಡಿದ್ದ ವಿರಾಮವು ಮುಕ್ತಾಯಗೊಳ್ಳುತ್ತಿದೆ. ಇದು ಹೂಡಿಕೆದಾರರನ್ನು ಎಚ್ಚರಿಕೆಯ ನಡೆ ಅನುಸರಿಸುವಂತೆ ಮಾಡಿದೆ. ಜೂನ್ ತ್ರೈಮಾಸಿಕದ ಫಲಿತಾಂಶದತ್ತ ಮಾರುಕಟ್ಟೆ ಚಿತ್ತ ಹರಿಸಿರುವುದು ಮತ್ತು ವಿದೇಶಿ ಬಂಡವಾಳದ ಹೊರಹರಿವು ಷೇರುಪೇಟೆ ಸೂಚ್ಯಂಕಗಳ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮಂಗಳವಾರದ ವಹಿವಾಟಿನಲ್ಲಿ ₹1,970 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.86ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರೆಲ್ ದರವು 67.69 ಡಾಲರ್ ಆಗಿದೆ.

ಗಾಜಾದಲ್ಲಿ ಕದನ ವಿರಾಮ, ಇಸ್ರೇಲ್ ಒಪ್ಪಿಗೆ: ಟ್ರಂಪ್ ಘೋಷಣೆ

ವಾಷಿಂಗ್ಟನ್ (ಎಪಿ): ಗಾಜಾದಲ್ಲಿ 60 ದಿನಗಳ ಕದನ ವಿರಾಮಕ್ಕೆ ಇಸ್ರೇಲ್ ಒಪ್ಪಿಕೊಂಡಿದೆ. ಪರಿಸ್ಥಿತಿ ಕೈಮೀರುವ ಮುನ್ನ ಹಮಾಸ್ ಬಂಡುಕೋರರು ಈ ಒಪ್ಪಂದವನ್ನು ಒಪ್ಪಿಕೊಳ್ಳಬೇಕು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ತಿಳಿಸಿದ್ದಾರೆ.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗೆ ಜುಲೈ 7ರಂದು (ಸೋಮವಾರ) ಶ್ವೇತಭವನದಲ್ಲಿ ಮಾತುಕತೆ ನಡೆಸುವ ಮುನ್ನವೇ ಟ್ರಂಪ್ ಈ ಘೋಷಣೆ ಮಾಡಿದ್ದಾರೆ.

‘ಗಾಜಾ ಕುರಿತಂತೆ ನಮ್ಮ ಪ್ರತಿನಿಧಿಗಳು ಇಸ್ರೇಲ್ ತಂಡದೊಂದಿಗೆ ಚರ್ಚೆ ನಡೆಸಿದ್ದಾರೆ. ಕದನ ವಿರಾಮಕ್ಕೆ ಇಸ್ರೇಲ್ ಒಪ್ಪಿದೆ. ಈ ಸಮಯದಲ್ಲಿ ಯುದ್ಧ ಅಂತ್ಯಗೊಳಿಸಲು ಎಲ್ಲರೂ ಪ್ರಯತ್ನಿಸುತ್ತೇವೆ. ಕತಾರ್ ಮತ್ತು ಈಜಿಪ್ಟ್‌ನವರು ಅಂತಿಮ ಪ್ರಸ್ತಾಪವನ್ನು ಮಂಡಿಸಲಿದ್ದಾರೆ’ ಎಂದು ಟ್ರಂಪ್ ಬರೆದುಕೊಂಡಿದ್ದಾರೆ.

‘ಹಮಾಸ್ ನಾಮಾವಶೇಷ’ (ಜೆರುಸಲೇಂ ವರದಿ): ಯುದ್ಧ ಮುಕ್ತಾಯಗೊಂಡ ನಂತರ ಹಮಾಸ್ ಎನ್ನುವುದು ಗಾಜಾದಲ್ಲಿ ನಾಮಾವಶೇಷವಾಗಲಿದೆ ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಪ್ರತಿಕ್ರಿಯಿಸಿದ್ದಾರೆ.

ಕದನ ವಿರಾಮಕ್ಕೆ ಹಮಾಸ್ ಬಂಡುಕೋರರು ಒಪ್ಪಿಗೆ ಸೂಚಿಸಿದ್ದಾರೆ. ಅದಕ್ಕೂ ಮೊದಲು ಎಲ್ಲ ಬಗೆಯ ದಾಳಿ ಸಂಪೂರ್ಣ ನಿಲ್ಲಬೇಕೆಂದು ಹೇಳಿದ್ದಾರೆ.

ದುಪ್ಪಟ್ಟು ಶುಲ್ಕ ವಿಧಿಸಲು ಕ್ಯಾಬ್ ಅಗ್ರಿಗೇಟರ್‌ಗಳಿಗೆ ಅನುಮತಿ

ನವದೆಹಲಿ (ಪಿಟಿಐ): ಪ್ರಯಾಣಿಕರ ಸಂಚಾರ ದಟ್ಟಣೆ ಅಧಿಕ ಇರುವ ವೇಳೆಯಲ್ಲಿ (ಪೀಕ್ ಅವರ್‌ನಲ್ಲಿ) ಮೂಲ ದರದ ದುಪ್ಪಟ್ಟು ಶುಲ್ಕ ವಿಧಿಸಲು ಕ್ಯಾಬ್ ಅಗ್ರಿಗೇಟರ್‌ಗಳಿಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಅನುಮತಿ ನೀಡಿದೆ.

ಈ ಮೊದಲು ಉಬರ್, ಓಲಾ ಮತ್ತು ರ್‍ಯಾಪಿಡೊದಂತಹ ಕ್ಯಾಬ್ ಸೇವೆ ನೀಡುವ ಕಂಪನಿಗಳು ಅಧಿಕ ದಟ್ಟಣೆ ಇರುವ ವೇಳೆ ಮೂಲ ದರದ 1.5 ಪಟ್ಟು ಹೆಚ್ಚು ಶುಲ್ಕ ವಿಧಿಸುತ್ತಿದ್ದವು. ಅದನ್ನು ಈಗ ದುಪ್ಪಟ್ಟು ಮಾಡಲು ಕೇಂದ್ರ ಅವಕಾಶ ಕಲ್ಪಿಸಿದೆ. ಅಧಿಕ ದಟ್ಟಣೆ ಇಲ್ಲದ ವೇಳೆ ಮೂಲ ದರದ ಕನಿಷ್ಠ ಶೇ 50ರಷ್ಟು ಶುಲ್ಕ ವಿಧಿಸಲು ಸೂಚಿಸಿದೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ‘ಮೋಟಾರು ವಾಹನಗಳ ಅಗ್ರಿಗೇಟರ್ ಮಾರ್ಗಸೂಚಿ 2025’ರ ಪ್ರಕಾರ, ವಾಹನದಲ್ಲಿ ಪ್ರಯಾಣಿಕ ಇಲ್ಲದಿದ್ದಾಗ ಮಾಡುವ ಸಂಚಾರಕ್ಕೆ, ಪ್ರಯಾಣಿಕ ಇರುವ ಸ್ಥಳಕ್ಕೆ ತೆರಳಲು ಮಾಡುವ ಸಂಚಾರಕ್ಕೆ ಕನಿಷ್ಠ ಮೂರು ಕಿಲೋ ಮೀಟರ್‌ಗಳ ಮೂಲದರವನ್ನು ಶುಲ್ಕವಾಗಿ ವಿಧಿಸಬಹುದು. ಈ ಪರಿಷ್ಕತ ಮಾರ್ಗಸೂಚಿಗಳನ್ನು ಮೂರು ತಿಂಗಳೊಳಗೆ ಅಳವಡಿಸಿಕೊಳ್ಳಬೇಕು ಎಂದು ರಾಜ್ಯಗಳಿಗೆ ತಿಳಿಸಿದೆ.

ಸಕಾರಣವಿಲ್ಲದೆ ಚಾಲಕ ಅಥವಾ ಪ್ರಯಾಣಿಕ ಸೇವೆ ರದ್ದುಪಡಿಸಿದರೆ ಶುಲ್ಕದ ಶೇ 10ರಷ್ಟನ್ನು ದಂಡವಾಗಿ ಅಗ್ರಿಗೇಟರ್‌ಗಳು ವಿಧಿಸಬಹುದು. ಇದು ₹100 ಮೀರುವಂತಿಲ್ಲ.

ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಅಗ್ರಿಗೇಟರ್‌ಗಳು ವಾಹನದಲ್ಲಿ ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ (ವಿಎಲ್‌ಟಿಡಿ) ಅಳವಡಿಸಿಕೊಳ್ಳಬೇಕು ಎಂದು ನಿರ್ದೇಶನ ನೀಡಿದೆ.

ಆ್ಯಪ್‌ನಲ್ಲಿ ಅಳವಡಿಸಿದ ಮಾರ್ಗದ ಬದಲು ಬೇರೆ ಮಾರ್ಗದಲ್ಲಿ ವಾಹನ ಸಂಚರಿಸಿದರೆ, ನಿಯಂತ್ರಣ ಕೊಠಡಿಗೆ ಆ್ಯಪ್ ಮಾಹಿತಿ ರವಾನಿಸಬೇಕು. ಚಾಲಕ ಮತ್ತು ಪ್ರಯಾಣಿಕನನ್ನು ತಕ್ಷಣವೇ ಸಂಪರ್ಕಿಸಲು ನಿಯಂತ್ರಣ ಕೊಠಡಿಗೆ ಸಾಧ್ಯವಾಗಬೇಕು.

ಅಗ್ರಿಗೇಟರ್‌ಗಳು ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಕಾಲ್ ಸೆಂಟರ್ ಸ್ಥಾಪಿಸಬೇಕು. ಇದು ಇಂಗ್ಲಿಷ್ ಮತ್ತು ಆಯಾ ರಾಜ್ಯದ ಅಧಿಕೃತ ಭಾಷೆಗಳಲ್ಲಿ ನೆರವು ನೀಡಬೇಕು ಎಂದು ತಿಳಿಸಿದೆ.

ಜೈಶಂಕರ್–ಕ್ರಿಸ್ ರೈಟ್ ದ್ವಿಪಕ್ಷೀಯ ಮಾತುಕತೆ

ವಾಷಿಂಗ್ಟನ್ (ಪಿಟಿಐ): ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಅಮೆರಿಕದ ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್ ಅವರನ್ನು ಬುಧವಾರ ಭೇಟಿ ಮಾಡಿದ್ದಾರೆ.

‘ಉಭಯ ದೇಶಗಳ ಇಂಧನ ಪಾಲುದಾರಿಕೆ ಮತ್ತು ಭಾರತದೊಂದಿಗಿನ ಇಂಧನ ಪೂರೈಕೆಯ ಕುರಿತು ಚರ್ಚೆ ನಡೆಸಲಾಯಿತು’ ಎಂದು ಜೈಶಂಕರ್ ಅವರು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಕುರಿತು ನಡೆಯುತ್ತಿರುವ ಮಾತುಕತೆಗಳ ಬಗ್ಗೆಯೂ ಉಭಯ ದೇಶಗಳು ಪರಿಶೀಲನೆ ನಡೆಸಿವೆ ಎಂದು ತಿಳಿದುಬಂದಿದೆ.

ನ್ಯೂಯಾರ್ಕ್ ವರದಿ: ಸಚಿವ ಎಸ್. ಜೈಶಂಕರ್ ಅವರು ಅಮೆರಿಕದ ವಿದೇಶಾಂಗ ಇಲಾಖೆ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರನ್ನು ಭೇಟಿಯಾಗಿದ್ದಾರೆ.

‘ಈ ಭೇಟಿಯಲ್ಲಿ ವ್ಯಾಪಾರ, ಭದ್ರತೆ, ಇಂಧನ, ಸಂಪರ್ಕ ಸೇರಿದಂತೆ ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ಪಾಲುದಾರಿಕೆಯ ಬಗ್ಗೆ ಚರ್ಚಿಸಲಾಯಿತು’ ಎಂದು ಜೈಶಂಕರ್ ತಿಳಿಸಿದರು.

ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಅವರನ್ನು ಕೂಡ ಜೈಶಂಕರ್ ಭೇಟಿಯಾಗಿದ್ದು, ರಕ್ಷಣಾ ಪಾಲುದಾರಿಕೆ ಮುಂದುವರಿಸುವ ಕುರಿತು ಚರ್ಚಿಸಲಾಗಿದೆ ಎಂದರು. ‘ಅಮೆರಿಕದ ಹಲವು ರಕ್ಷಣಾ ಸಲಕರಣೆಗಳನ್ನು ಭಾರತದಲ್ಲಿ ಪರಿಚಯಿಸಲು ಅಮೆರಿಕ ಖುಷಿಪಡುತ್ತದೆ’ ಎಂದು ಹೆಗ್ಸೆತ್ ಹೇಳಿರುವುದಾಗಿ ಅಮೆರಿಕ ರಕ್ಷಣಾ ಸಚಿವಾಲಯ ತಿಳಿಸಿದೆ.



ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಅಮೆರಿಕದ ವಿದೇಶಾಂಗ ಇಲಾಖೆ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರನ್ನು ಮಂಗಳವಾರ ಭೇಟಿಯಾದರು

ಪಿಟಿಐ ಚಿತ್ರ

ಪಹಲ್ಗಾಮ್ ದಾಳಿಗೆ ‘ಕ್ವಾಡ್’ ಖಂಡನೆ

ಮುಖ್ಯಾಂಶಗಳು

- ಭಯೋತ್ಪಾದನೆ ವಿರುದ್ಧ ಕ್ರಮಕ್ಕೆ ನಿರ್ಧಾರ
- ವಿಶ್ವಸಂಸ್ಥೆ ಸದಸ್ಯ ರಾಷ್ಟ್ರಗಳ ಸಹಕಾರಕ್ಕೆ ಕೋರಿಕೆ
- ಪಾಕ್ ಹೆಸರು ಉಲ್ಲೇಖಿಸದೇ ಖಂಡನೆ

ವಾಷಿಂಗ್ಟನ್ (ಪಿಟಿಐ): ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ಕೃತ್ಯದ ದಾಳಿಕೋರರು, ಸಂಘಟಕರು ಮತ್ತು ಹಣಕಾಸು ನೆರವು ನೀಡಿದವರನ್ನು ಶೀಘ್ರವೇ ಶಿಕ್ಷೆಗೊಳಪಡಿಸಬೇಕು ಎಂದು ‘ಕ್ವಾಡ್’ ಸದಸ್ಯ ರಾಷ್ಟ್ರಗಳು ಒತ್ತಾಯಿಸಿದವು.

ಈ ವಿಚಾರವಾಗಿ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಮತ್ತಷ್ಟು ಸಹಕಾರ ನೀಡಬೇಕು ಎಂದು ಮನವಿ ಮಾಡಿದವು.

‘ಕ್ವಾಡ್’ ಸದಸ್ಯ ದೇಶಗಳಾದ ಅಮೆರಿಕ, ಭಾರತ, ಆಸ್ಟ್ರೇಲಿಯಾ ಮತ್ತು ಜಪಾನ್‌ನ ವಿದೇಶಾಂಗ ಸಚಿವರು ವಾಷಿಂಗ್ಟನ್‌ನಲ್ಲಿ ಮಂಗಳವಾರ ಭೇಟಿಯಾಗಿ ಮಾತುಕತೆ ನಡೆಸಿದರು.

ಜಂಟಿ ಹೇಳಿಕೆಯಲ್ಲಿ ಪಾಕಿಸ್ತಾನದ ಹೆಸರನ್ನು ಉಲ್ಲೇಖಿಸದೇ ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯನ್ನು ಕಟು ಪದಗಳಲ್ಲಿ ಖಂಡಿಸಿದರು. ಗಡಿ ಭಯೋತ್ಪಾದನೆ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಧರಿಸಿದರು. ದಾಳಿಯಲ್ಲಿ ಮೃತಪಟ್ಟ ಸಂತ್ರಸ್ತರಿಗೆ ಸಂತಾಪ ಸೂಚಿಸಿದರು.

ಸಭೆಯಲ್ಲಿ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮ್ಯಾಕ್ರೊ ರುಬಿಯೊ, ಆಸ್ಟ್ರೇಲಿಯಾದ ವಿದೇಶಾಂಗ ಸಚಿವೆ ಪೆನ್ನಿ ವೊಂಗ್, ಮತ್ತು ಜಪಾನಿನ ಟಕೇಶಿ ಇವಾಯಾ ಭಾಗಿಯಾಗಿದ್ದರು.

ಅವಶ್ಯಕ ಖನಿಜ ಪೂರೈಕೆಗೆ ನಿರ್ಧಾರ

ಆರ್ಥಿಕ ಭದ್ರತೆಯ ಹಿತದೃಷ್ಟಿಯಿಂದ ಅವಶ್ಯಕ ಖನಿಜಗಳ ಲಭ್ಯತೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲು ‘ಕ್ವಾಡ್’ ಸದಸ್ಯ ರಾಷ್ಟ್ರಗಳು ಸಭೆಯಲ್ಲಿ ನಿರ್ಧರಿಸಿದವು.

ಚೀನಾ ದೇಶವು ಈ ವಲಯದಲ್ಲಿ ಕೃತಕ ಅಭಾವ ಸೃಷ್ಟಿಸಿ ಬೆಲೆ ಏರಿಕೆಗೆ ತಂತ್ರಗಳನ್ನು ರೂಪಿಸುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿ ಈ ನಿರ್ಣಯ ಕೈಗೊಂಡವು.

ಮುಂಬೈ ಧಾರಣೆ (ಶೇಂಗಾ)

02-07-2025	
ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	7800-7900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1390 (1390)
ಒಂದು ವಾರದ ಡೆಲಿವರಿ	1385 (1385)
ಪಾಮ್ ವಾರದ ಡೆಲಿವರಿ	1163 (1158)
ಸೂರ್ಯಕಾಂತಿ ಎಣ್ಣೆ ಕಚ್ಚಾ	1255 (1260)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	96,950 (97,000)
ಬೆಳ್ಳಿ ಕೆ.ಜಿಗೆ	1,06,600 (1,07,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ನೌಕರರನ್ನು ಕೆಲಸದಿಂದ ತೆಗೆಯುತ್ತಿರುವ ಮೈಕ್ರೊಸಾಫ್ಟ್

ರೆಡ್ಮಂಡ್ (ಎಪಿ): ಮೈಕ್ರೊಸಾಫ್ಟ್ ಕಂಪನಿಯು ಸಹಸ್ರಾರು ಮಂದಿ ನೌಕರರನ್ನು ಕೆಲಸದಿಂದ ತೆಗೆಯುತ್ತಿದೆ. ಈಚಿನ ಕೆಲವು ತಿಂಗಳುಗಳಲ್ಲಿ ಕಂಪನಿಯು ನೌಕರರನ್ನು ಕೆಲಸದಿಂದ ತೆಗೆಯುತ್ತಿರುವುದು ಇದು ಎರಡನೆಯ ಬಾರಿ.

ಅಧಿಕ ತೆರಿಗೆ, ವೆಚ್ಚ ಕಡಿತ ಉದ್ದೇಶ • ವ್ಯಾನ್ಸ್ ಮತದಿಂದ ಅಡ್ಡಿ ನಿವಾರಣೆ

ಅಮೆರಿಕ: ಮಸೂದೆಗೆ ಸೆನೆಟ್ ಅನುಮೋದನೆ

ವಾಷಿಂಗ್ಟನ್(ಎಪಿ): ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಹತ್ವಾಕಾಂಕ್ಷೆಯ ತೆರಿಗೆ ಭಾರ ಇಳಿಸುವ ಮತ್ತು ವೆಚ್ಚ ತಗ್ಗಿಸುವ ಕುರಿತ ಮಸೂದೆಗೆ ಅಮೆರಿಕ ಸೆನೆಟ್‌ನಲ್ಲಿ ಒಂದು ಮತದ ಅಂತರದಿಂದ ಅನುಮೋದನೆ ಲಭಿಸಿದೆ.

ಮಂಗಳವಾರ ರಾತ್ರಿ ನಡೆದ ಅಧಿವೇಶನದಲ್ಲಿ ಬಿರುಸಿನ ಚರ್ಚೆಯ ಬಳಿಕ, ವಿರೋಧ ಪಕ್ಷವಾದ ಡೆಮಾಕ್ರಟಿಕ್‌ನ ಸಂಸದರ ವಿರೋಧದ ನಡುವೆ, ಮಸೂದೆಯನ್ನು ಅನುಮೋದಿಸಲಾಯಿತು.

ಬಿರುಸಿನ ಚರ್ಚೆಯ ಬಳಿಕ ಮಸೂದೆಯನ್ನು ಮತಕ್ಕೆ ಹಾಕಲಾಯಿತು. ಪರ ಮತ್ತು ವಿರೋಧವಾಗಿ 50 ಮತಗಳು ಚಲಾವಣೆಗೊಂಡಿದ್ದರಿಂದ, ಮಸೂದೆಗೆ ಅನುಮೋದನೆ ಸಿಗುವ ಕುರಿತು ಅನಿಶ್ಚಿತತೆ ಮನೆಮಾಡಿತ್ತು. ಕೊನೆಗೆ, ಉಪಾಧ್ಯಕ್ಷರಾದ ಜೆ.ಡಿ. ವ್ಯಾನ್ಸ್ ಸರ್ಕಾರದ ನೆರವಿಗೆ ಬಂದರು. ಅವರು, ಮಸೂದೆ ಪರವಾಗಿ ಮತ ಚಲಾಯಿಸಿದ್ದರಿಂದ ಅನುಮೋದನೆಗೆ ಎದುರಾಗಿದ್ದ ಅಡ್ಡಿ ನಿವಾರಣೆಯಾಯಿತು.

‘ಅಂತಿಮವಾಗಿ ನಮ್ಮ ಉದ್ದೇಶವನ್ನು ನಾವು ಕಾರ್ಯಗತಗೊಳಿಸಿದೆವು’ ಎಂದು ಸೌತ್ ಡಕೋಟಾ ಸಂಸದ ಹಾಗೂ ಸೆನೆಟ್‌ನಲ್ಲಿ ರಿಪಬ್ಲಿಕನ್ ಪಕ್ಷದ ಸದನ ನಾಯಕ ಜಾನ್ ಟಿ. ಅವರು ಘೋಷಿಸಿದರು.

ರಿಪಬ್ಲಿಕನ್ ಪಕ್ಷದ ಸೆನೆಟರ್‌ಗಳಾದ ಥಾಮ್ ಟಿಲ್ಲಿಸ್, ಸೂಸನ್ ಕಾಲಿನ್ಸ್ ಹಾಗೂ ರ್‍ಯಾಂಡ್ ಪೌಲ್ ಅವರು ಮಸೂದೆಗೆ ವಿರೋಧ ವ್ಯಕ್ತಪಡಿಸಿ, ಮಸೂದೆ ವಿರುದ್ಧ ಮತ ಚಲಾಯಿಸಿ ಅಚ್ಚರಿಗೆ ಕಾರಣರಾದರು.

ಈ ಮಸೂದೆಗೆ ‘ಪ್ರತಿನಿಧಿಗಳ ಸಭೆ’ಯಲ್ಲಿ ಮೇನಲ್ಲಿ ಅನುಮೋದನೆ ಸಿಕ್ಕಿದೆ.

ಮಸೂದೆಗೆ ಸೆನೆಟ್‌ನಲ್ಲಿ ಅನುಮೋದನೆ ಲಭಿಸಿರುವ ಕುರಿತು ಪ್ರತಿಕ್ರಿಯಿಸಿದ ಟ್ರಂಪ್, ‘ಈ ವಿಚಾರ ಬಹಳ ಸಂಕೀರ್ಣವಾದುದು. ನನಗೆ ತೆರಿಗೆ ಮತ್ತು ವೆಚ್ಚಗಳನ್ನು ವಿಪರೀತ ಕಡಿತ ಮಾಡುವ ಇರಾದೆ ಇಲ್ಲ. ಅದನ್ನು ನಾನು ಬಯಸುವುದೂ ಇಲ್ಲ’ ಎಂದರು.

ಡೆಮಾಕ್ರಟಿಕ್ ಪಕ್ಷದ ವಿರೋಧ: ಈ ಮಸೂದೆಗೆ ಡೆಮಾಕ್ರಟಿಕ್ ಪಕ್ಷ ವಿರೋಧಿಸುತ್ತಲೇ ಬಂದಿದೆ.

‘ಮಧ್ಯಮ ವರ್ಗದವರ ಪಾಲಿಗೆ ಈ ಮಸೂದೆಯು ವಿನಾಶಕಾರಿಯಾಗಲಿದೆ. ಈ ಮಸೂದೆ ಕಾಯ್ದೆಯಾಗಿ ಜಾರಿಯಾದಲ್ಲಿ, ಕಡಿಮೆ ಆದಾಯದ ಅಮೆರಿಕ ಪ್ರಜೆಗಳ ಆರೋಗ್ಯ ವಿಮೆ ಸೌಲಭ್ಯವು ಕಡಿತಗೊಳ್ಳಲಿದೆ’ ಎಂದು ಹೇಳಿದೆ.

ಮಸೂದೆಯಲ್ಲಿನ ಈ ಅಂಶಗಳ ಕುರಿತು ಅಧ್ಯಕ್ಷ ಟ್ರಂಪ್ ಅವರ ಗಮನಕ್ಕೆ ಮತ್ತೊಮ್ಮೆ ತರಲಾಗುವುದು ಎಂದೂ ಡೆಮಾಕ್ರಟಿಕ್ ಪಕ್ಷದ ಸದಸ್ಯರು ಹೇಳಿದ್ದಾರೆ.



ಬ್ಯಾಂಗಲ್ ಬಂಗಾರಿಗೆ ಕೇಳುಗರು ಫಿದಾ

'ರತ್ನನ್ ಪ್ರಪಂಚ' ಖ್ಯಾತಿಯ ರೋಹಿತ್ ಪದಕಿ ನಿರ್ದೇಶನದ, ಯುವ ರಾಜ್‌ಕುಮಾರ್ ನಟನೆಯ 'ಎಕ್ಕ' ಸಿನಿಮಾ ಜುಲೈ 18ರಂದು ತೆರೆಕಾಣಲಿದೆ. ಸದ್ಯ ಇದೇ ಚಿತ್ರದ 'ಬ್ಯಾಂಗಲ್ ಬಂಗಾರಿ' ಹಾಡು ಭಾರಿ ಮೆಚ್ಚುಗೆ ಪಡೆದಿದೆ.

'ಮಾಯಾವಿ', 'ಮಳೆಯೇ ಮಳೆಯೇ', 'ಕಡಲನು ಕಾಣಹೊರಟಿರೋ' ಮುಂತಾದ ಹಿಟ್ ಹಾಡುಗಳಿಗೆ ಸಾಹಿತ್ಯ ಬರೆದ ನಾಗಾರ್ಜುನ್ ಶರ್ಮಾ ಬರೆದಿರುವ 'ಬ್ಯಾಂಗಲ್ ಬಂಗಾರಿ' ಹಾಡಿನಲ್ಲಿ ನಟ ಯುವ ರಾಜ್‌ಕುಮಾರ್ ಹಾಗೂ ನಟಿ ಸಂಜನಾ ಆನಂದ್ ಹೆಜ್ಜೆ ಹಾಕಿದ್ದಾರೆ. ಪ್ರೀತಿಯಿಂದ ಹುಡುಗಿಯನ್ನು 'ಬ್ಯಾಂಗಲ್ ಬಂಗಾರಿ'ಯೆಂದು ಕರೆಯುತ್ತಾ ಯುವ ಹಾಕಿರುವ ಹೆಜ್ಜೆ ಇನ್‌ಸ್ಟಾಗ್ರಾಂ ರೀಲ್ಸ್‌ನಲ್ಲೂ ಮುಂಚೂಣಿಯಲ್ಲಿದೆ. ಮುರಳಿ ಮಾಸ್ಟರ್ ಅವರ ನೃತ್ಯ ಸಂಯೋಜನೆ ಹಾಗೂ ಚರಣ್ ರಾಜ್ ಸಂಗೀತ ಹಾಡಿಗೆ ಇಂಬು ನೀಡಿದೆ. ಅಂತೋನಿ ದಾಸನ್ ದನಿಗೆ ಕೇಳುಗರು ಫಿದಾ ಆಗಿದ್ದಾರೆ. ಯುಟ್ಯೂಬ್‌ನಲ್ಲಿ ಹಾಡು 22 ದಿನಗಳಲ್ಲಿ 1 ಕೋಟಿಗೂ ಅಧಿಕ ವ್ಯೂವ್ಸ್ ಪಡೆದಿದೆ. ಟಾಪ್ ಮ್ಯೂಸಿಕ್ ವಿಡಿಯೊ ವಿಭಾಗದಲ್ಲಿ 29ನೇ ಸ್ಥಾನ ಪಡೆದಿದೆ.

ಬೆಂಗಳೂರು ಭೂಗತ ಜಗತ್ತಿನ ಕಥೆಯನ್ನು ಹೊಂದಿರುವ ಈ ಸಿನಿಮಾದಲ್ಲಿ ಸಂಪದ ಹಾಗೂ 'ಸಲಗ' ಸಿನಿಮಾ ಖ್ಯಾತಿಯ ಸಂಜನಾ ಆನಂದ್ ನಾಯಕಿಯರಾಗಿ ನಟಿಸಿದ್ದಾರೆ. ಪಿಆರ್‌ಕೆ ಪ್ರೊಡಕ್ಷನ್ಸ್, ಕೆಆರ್‌ಜಿ ಸ್ಟುಡಿಯೊಸ್ ಹಾಗೂ ಜಯಣ್ಣ ಕಂಬೈನ್ಸ್ ಬ್ಯಾನರ್‌ಗಳ ಅಡಿಯಲ್ಲಿ ಈ ಸಿನಿಮಾ ನಿರ್ಮಾಣವಾಗುತ್ತಿದೆ. ಚಿತ್ರದಲ್ಲಿ ನಟ ಆದಿತ್ಯ ನಟಿಸಿದ್ದಾರೆ. ಬಾಲಿವುಡ್‌ನ ಅತುಲ್ ಕುಲಕರ್ಣಿ ತಾರಾಬಳಗದಲ್ಲಿದ್ದಾರೆ. ❖


ಸಂಜನಾ, ಯುವ

ಗಣೇಶ್‌ಗೆ ಚೇತನ್ ಆ್ಯಕ್ಷನ್ ಕಟ್


ಮುನೇಗೌಡ, ಚೇತನ್, ಗಣೇಶ್



'ಬಹದ್ದೂರ್', 'ಭರ್ಜರಿ', 'ಭರಾಟೆ' ಹಾಗೂ 'ಜೇಮ್ಸ್' ಚಿತ್ರಗಳ ನಿರ್ದೇಶಕ ಚೇತನ್ ಕುಮಾರ್ ಇದೀಗ ನಟ ಗಣೇಶ್ ಅವರಿಗೆ ಆ್ಯಕ್ಷನ್ ಕಟ್ ಹೇಳಲು ಸಜ್ಜಾಗಿದ್ದಾರೆ. ಗಣೇಶ್ ಜನ್ಮದಿನದಂದು ಹೊಸ ಚಿತ್ರದ ಘೋಷಣೆಯಾಗಿದೆ.

ಈ ಮೂಲಕ 'ಪಿನಾಕ', 'ಯುವರ್ಸ್ ಸಿನ್ಸಿಯರ್ಲಿ ರಾಮ್' ಜೊತೆಗೆ ಮತ್ತೊಂದು ಪ್ರಾಜೆಕ್ಟ್ ಗಣೇಶ್ ಸಿನಿಬ್ಯಾಂಕ್‌ಗೆ ಸೇರ್ಪಡೆಯಾಗಿದೆ. ಇದರ ಜೊತೆಗೆ ಅರಸು ಅಂತಾರೆ ನಿರ್ದೇಶನದ 'ಡಿಜಾಂಗೋ ಕೃಷ್ಣಮೂರ್ತಿ' ಚಿತ್ರದಲ್ಲೂ ಗಣೇಶ್ ನಾಯಕನಾಗಿ ನಟಿಸುತ್ತಿದ್ದಾರೆ. ಈ ಚಿತ್ರದ ಬಳಿಕ ಚೇತನ್ ಕುಮಾರ್ ನಿರ್ದೇಶನದಲ್ಲಿ ಗಣೇಶ್ ನಟಿಸಲಿದ್ದಾರೆ.

ಕಮರ್ಷಿಯಲ್ ಸಿನಿಮಾಗಳಿಗೆ ಹೆಸರಾದವರು ಚೇತನ್. ರೊಮ್ಯಾಂಟಿಕ್ ಫ್ಯಾಮಿಲಿ ಎಂಟರ್‌ಟೈನರ್ ಸಿನಿಮಾಗಳ ಮೂಲಕವೇ ಗುರುತಿಸಿಕೊಂಡಿರುವವರು ಗಣೇಶ್. ಇವರಿಬ್ಬರ ಕಾಂಬಿನೇಷನ್‌ನ ಚೊಚ್ಚಲ ಸಿನಿಮಾ ಹೇಗಿರಬಹುದು ಎನ್ನುವ ಕುತೂಹಲ ಅಭಿಮಾನಿಗಳಲ್ಲಿದೆ. ಚಿತ್ರದ ಕಥೆಯಲ್ಲಿ ರೊಮ್ಯಾಂಟಿಕ್ ಅಂಶಗಳು ಇರಲಿದ್ದು, ಚೇತನ್ ಅವರ ಮೇಕಿಂಗ್ ಸ್ಟೈಲ್‌ನಲ್ಲಿಯೇ ಚಿತ್ರವಿರಲಿದೆ ಎಂಬ ಮಾಹಿತಿಯಿದೆ.

ಎಸ್‌ವಿಸಿ ಫಿಲಂಸ್ ಲಾಂಛನದಲ್ಲಿ ಎಂ.ಮುನೇಗೌಡ ಅವರು ಗಣೇಶ್ ಅವರ ಹೊಸ ಸಿನಿಮಾ ನಿರ್ಮಾಣ ಮಾಡಲಿದ್ದಾರೆ. ಇದು ಇವರು ನಿರ್ಮಾಣ ಮಾಡುತ್ತಿರುವ ಮೂರನೇ ಸಿನಿಮಾವಾಗಿದೆ. ಪ್ರಮೋದ್, ಪೃಥ್ವಿ ಅಂಬಾರ್ ನಟನೆಯ 'ಭುವನಂ ಗಗನಂ' ನಿರ್ಮಿಸಿದ್ದ ಎಂ.ಮುನೇಗೌಡ ಅವರು ಪ್ರಸ್ತುತ ನೀನಾಸಂ ಸತೀಶ್ ನಟನೆಯ 'ಅಯೋಗ್ಯ 2' ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಚಿತ್ರದ ಚಿತ್ರೀಕರಣ ಅಕ್ಟೋಬರ್‌ನಲ್ಲಿ ಆರಂಭವಾಗಲಿದೆ. ❖

ತೆರೆಗೆ ಬರಲು ಸಜ್ಜಾದ 'ತಿಮ್ಮಣ್ಣ ಡಾಕ್ಟ್ರು'

ಟಿ.ಪಿ.ಕೈಲಾಸಂ ಸಾಹಿತ್ಯ, ಮೈಸೂರು ಅನಂತಸ್ವಾಮಿ ಧ್ವನಿಯಲ್ಲಿನ 'ತಿಪ್ಪಾರಳ್ಳಿ ಬಲುದೂರ' ಹಾಡು ಬಲುಜನಪ್ರಿಯವಾಗಿತ್ತು. ಅದೇ ಹಾಡಿನ ಸಾಲನ್ನು ಶೀರ್ಷಿಕೆಯಾಗಿಸಿಕೊಂಡಿರುವ 'ತಿಪ್ಪಾರಳ್ಳೀಲಿ ತಿಮ್ಮಣ್ಣ ಡಾಕ್ಟ್ರು' ಚಿತ್ರದ ಟ್ರೇಲರ್ ಮತ್ತು ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ.

ಕೆ.ಮೋಹನ್ ಕುಮಾರ್ ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. 'ನಾಲ್ಕು ದಶಕಗಳ ಕಾಲ ಸಹಾಯಕ ನಿರ್ದೇಶಕ, ಸಹ ನಿರ್ದೇಶಕನಾಗಿ ಕನ್ನಡ, ಹಿಂದಿ, ತೆಲುಗು ಸಿನಿಮಾಗಳಲ್ಲಿ ಕೆಲಸ ಮಾಡಿರುವೆ. ಇದು ನನ್ನ ಚೊಚ್ಚಲ ನಿರ್ದೇಶನದ ಸಿನಿಮಾ. ಸೆನ್ಸಾರ್ ಮುಗಿದಿದ್ದು, ಸದ್ಯದಲ್ಲೆ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ಗಿರೀಶ ಪ್ರಕಾಶ ಭಸ್ಮೇ ನಾಯಕನಾಗಿ ನಟಿಸುವುದರ ಜತೆಗೆ ಶ್ರೀ ದಾನಮ್ಮ ದೇವಿ ಫಿಲ್ಮ್ಸ್ ಲಾಂಛನದಲ್ಲಿ ಬಂಡವಾಳ ಹೂಡಿದ್ದಾರೆ. ಪಾವನಿ ನಾಯಕಿ. 'ಹೆಚ್2ಓ, ಶ್ರೀರಾಂಪುರ ಪೊಲೀಸ್ ಸ್ಟೇಷನ್ ಮುಂತಾದ ಚಿತ್ರಗಳಲ್ಲಿ ಸಣ್ಣ ಪುಟ್ಟ ಪಾತ್ರ ಮಾಡಿದ್ದೆ. ಈಗ ಪೂರ್ಣ ಪ್ರಮಾಣದಲ್ಲಿ ನಾಯಕನಾಗಿರುವೆ. ಚಿತ್ರವು ಹಾಸ್ಯ, ಭಾವನೆ, ಪ್ರೀತಿ ಮುಂತಾದ ಅಂಶಗಳನ್ನು ಹೊಂದಿದ್ದು, ಮನರಂಜನೀಯವಾಗಿದೆ' ಎಂದರು ನಾಯಕ.

ಮೈಸೂರು ರಮಾನಂದ್, ಆಲಿಶಾ, ಸತೀಶ್‌ಗೌಡ್ರು, ಶೂಟಿಂಗ್ ಕೃಷ್ಣ ಮುಂತಾದವರು ನಟಿಸಿದ್ದಾರೆ. ಗೋಪಿ ಕಲಾಕಾರ್ ಸಂಗೀತ, ಹೊಸೂರು ಮಂಜು ಛಾಯಾಚಿತ್ರಗ್ರಹಣವಿದೆ. ಬೆಂಗಳೂರು, ರಾಮನಗರ, ಹಂದಲಗೆರೆ, ಮೈಸೂರು ಮುಂತಾದೆಡೆ ಚಿತ್ರೀಕರಣಗೊಂಡಿದೆ. ❖

ಡಬ್ಬಿಂಗ್ ಮುಗಿಸಿದ 'ಅಶೋಕ'

ನೀನಾಸಂ ಸತೀಶ್, ಸಪ್ತಮಿ ಗೌಡ ಮುಖ್ಯಭೂಮಿಕೆಯಲ್ಲಿರುವ 'ದಿ ರೈಸ್ ಆಫ್ ಅಶೋಕ' ಚಿತ್ರದ ಡಬ್ಬಿಂಗ್ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ. ನಿರ್ದೇಶಕ ವಿನೋದ್ ದೋಂಡಾಳೆ ಈ ಚಿತ್ರ ಪ್ರಾರಂಭಿಸಿದ್ದರು. ಅವರ ಅಕಾಲಿಕ ಮರಣದಿಂದ ಮನು ಶೆಡ್ಗಾರ್ ನಿರ್ದೇಶಕನಾಗಿ ಚಿತ್ರವನ್ನು ಪೂರ್ಣಗೊಳಿಸಿದ್ದಾರೆ. ವೃದ್ಧಿ ಕ್ರಿಯೇಷನ್ ಹಾಗೂ ಸತೀಶ್ ಪಿಕ್ಚರ್ಸ್ ಹೌಸ್ ಪ್ರೊಡಕ್ಷನ್ ಅಡಿ ವರ್ಧನ್ ನರಹರಿ, ಜೈಷ್ಣವಿ ಜೊತೆ ಸೇರಿ ನೀನಾಸಂ ಸತೀಶ್ ಕೂಡಾ ಸಿನಿಮಾ ನಿರ್ಮಾಣ ಮಾಡಿದ್ದಾರೆ.

'ಆಕಾಶ್ ಸ್ಟುಡಿಯೋದಲ್ಲಿ ಡಬ್ಬಿಂಗ್ ಮುಗಿಸಿದ್ದೇವೆ. ಇಲ್ಲಿ ಅಣ್ಣಾವ್ರು, ವಿಷ್ಣುವರ್ಧನ್ ಸೇರಿದಂತೆ ಹಲವರು ಡಬ್ ಮಾಡಿದ್ದಾರೆ. ಈ ಜಾಗದಲ್ಲಿ ನಮ್ಮ ಚಿತ್ರದ ಡಬ್ಬಿಂಗ್ ಮುಗಿದಿರುವುದು ಖುಷಿ ಇದೆ. ಕನ್ನಡ, ತೆಲುಗು ಹಾಗೂ ತಮಿಳ ಭಾಷೆಯಲ್ಲಿ ಸಿನಿಮಾ ಬಿಡುಗಡೆ ಮಾಡಲು ಪ್ಲಾನ್ ಮಾಡಿದ್ದೇವೆ. ಕನ್ನಡ ಭಾಷೆ ಡಬ್ಬಿಂಗ್ ಮುಗಿದಿದ್ದು, ಮುಂದಿನ ದಿನಗಳಲ್ಲಿ ತೆಲುಗು ಹಾಗೂ ತಮಿಳು ಶುರು ಮಾಡುತ್ತೇವೆ' ಎಂದರು ಸತೀಶ್.

70ರ ದಶಕದಲ್ಲಿ ಹಾಗೂ ಪ್ರಸ್ತುತ ಕಾಲಘಟ್ಟದಲ್ಲಿ ನಡೆಯುವ ಸಿನಿಮಾವಿದು. ಚಿತ್ರದಲ್ಲಿ ಸತೀಶ್ ಕ್ರಾಂತಿಕಾರಿ ಯುವಕನ ಪಾತ್ರಕ್ಕೆ ಜೀವ ತುಂಬಿದ್ದಾರೆ. ಅನ್ಯಾಯದ ವಿರುದ್ಧ ಹೋರಾಡುವ ಯುವಕನ ಬದುಕು ಹಾಗೂ ಸಂಘರ್ಷದ ಸುತ್ತ ಸಾಗುವ ಕಥೆ ಇದಾಗಿದೆ.

ದಯಾನಂದ್ ಟಿ.ಕೆ ಕಥೆ ಬರೆದಿದ್ದು, ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ ಮಾಡಿದ್ದಾರೆ. ಲವಿತ್ ಛಾಯಾಚಿತ್ರಗ್ರಹಣ, ಮನು ಶೇಡ್ಗಾರ್ ಸಂಕಲನದ ಜವಾಬ್ದಾರಿ ಹೊತ್ತಿದ್ದಾರೆ. ❖


ನೀನಾಸಂ ಸತೀಶ್, ಸಪ್ತಮಿ ಗೌಡ

ಚಿಟಿಕೆ ಸುದ್ದಿ

ರಥಯಾತ್ರೆ ಕಾಲ್ತುಳಿತ: ತನಿಖೆಗೆ ತಂಡ ರಚನೆ

ಭುವನೇಶ್ವರ (ಪಿಟಿಐ): ಪುರಿಯಲ್ಲಿ ರಥಯಾತ್ರೆ ವೇಳೆ ನಡೆದ ಕಾಲ್ತುಳಿತ ಪ್ರಕರಣದ ವಿಚಾರಣೆಯನ್ನು 30 ದಿನಗಳ ಒಳಗೆ ಪೂರ್ಣಗೊಳಿಸುವ ನಿಟ್ಟಿನಲ್ಲಿ ನಾಲ್ಕು ಸದಸ್ಯರ ತಂಡವೊಂದನ್ನು ಒಡಿಶಾ ಸರ್ಕಾರ ಬುಧವಾರ ರಚಿಸಿದೆ.

ಅಭಿವೃದ್ಧಿ ಆಯುಕ್ತರಾದ ಅನು ಗರ್ಗ್ ಈ ಪ್ರಕರಣದ ವಿಚಾರಣೆ ನಡೆಸುತ್ತಿದ್ದು, ತಂಡವು ಅವರಿಗೆ ವಿಚಾರಣೆ ತ್ವರಿತಗೊಳಿಸಲು ಸಹಾಯ ಮಾಡಲಿದೆ. ಒಡಿಶಾ ಆಡಳಿತ ಸೇವಾ (ಒಎಎಸ್) ಅಧಿಕಾರಿಗಳಾದ ಮಾನಸ್ ರಂಜನ್ ಸಾಮಲ್, ವಿನಯ ಕುಮಾರ್ ದಾಶ್, ರಶ್ಮೀ ರಂಜನ್ ನಾಯಕ್ ಹಾಗೂ ಪ್ರದೀಪ್ ಕುಮಾರ್ ಸಾಹು ಅವರು ತಂಡದಲ್ಲಿದ್ದಾರೆ. ಜೂನ್ 29ರಂದು ರಥಯಾತ್ರೆ ವೇಳೆ ನಡೆದ ಕಾಲ್ತುಳಿತದಲ್ಲಿ 3 ಮಂದಿ ಮೃತಪಟ್ಟಿದ್ದರು.

ಪುರಿಯಲ್ಲಿ 'ಬಹುದಾ ಯಾತ್ರೆ' ಸಿದ್ಧತೆ



ಪುರಿ (ಪಿಟಿಐ): 'ಹೀರಾ ಪಂಚಮಿ' ಮುಗಿದ ಮಾರನೇ ದಿನವಾದ ಬುಧವಾರ ಪುರಿ ಜಗನ್ನಾಥ ದೇವರ 'ಬಹುದಾ ಯಾತ್ರೆ'ಗೆ (ಮುಖ್ಯಮಂದಿರ ಪುನರಾಗಮನ ರಥೋತ್ಸವ) ಜಗನ್ನಾಥ ದೇಗುಲ ಆಡಳಿತ ಮಂಡಳಿ ಮತ್ತು ಜಿಲ್ಲಾಡಳಿತ ಸಕಲ ಸಿದ್ಧತೆ ಆರಂಭಿಸಿದವು.

ಜಗನ್ನಾಥ ರಥಯಾತ್ರೆ ನಡೆದ ಒಂಬತ್ತು ದಿನಗಳ ನಂತರ ಮುಖ್ಯ ಮಂದಿರಕ್ಕೆ ಜಗನ್ನಾಥ ಮೂರ್ತಿಯನ್ನು ಮೆರವಣಿಗೆ ಮೂಲಕ ಕರೆತರಲಾಗುತ್ತದೆ. ಸದ್ಯ ಗುಂಡೀಚಾ ದೇಗುಲದಲ್ಲಿ ಜಗನ್ನಾಥ ಮೂರ್ತಿ ಸೇರಿ ಮೂರು ದೇವರುಗಳಿವೆ. ಜುಲೈ 5ರಂದು 'ಬಹುದಾ ಯಾತ್ರೆ' ಜರುಗಲಿದ್ದು, ಜಗನ್ನಾಥ ರಥಗಳು ದಕ್ಷಿಣಾಭಿಮುಖವಾಗಿ ಸಂಚರಿಸಲಿವೆ. ಆರಾಧ್ಯ ದೈವಗಳ ಜನ್ಮಸ್ಥಳವೆಂದೇ ಕರೆಯುವ ಗುಂಡೀಚಾ ದೇಗುಲದಿಂದ ಬಲಭದ್ರ ದೇವರ ತಲಧ್ವಜ ರಥ, ಸುಭದ್ರಾ ದೇವಿಯ ದರ್ಪದಲನ್ ರಥ, ಜಗನ್ನಾಥ ದೇವರ ನಂದಿಘೋಷ್ ರಥಗಳನ್ನು ಎಳೆಯಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದರು.

ಮೊಹರಂ: ಕಟ್ಟೆಚ್ಚರ

ಸಂಭಲ್/ಯುಪಿ (ಪಿಟಿಐ): ಕೋಮು ಸೌಹಾರ್ದ ಕಾಪಾಡಲು ಮತ್ತು ಭದ್ರತೆ ದೃಷ್ಟಿಯಿಂದ ಚಿಕ್ಕ ಮಕ್ಕಳು ಮೊಹರಂ ಮೆರವಣಿಗೆಯಲ್ಲಿ 'ತಜಿಯ' ಮತ್ತು 'ಆಲಂ' ಪ್ರತಿಕೃತಿ ಹಿಡಿದು ಸಾಗುವುದನ್ನು ಸಂಭಲ್ ಪೊಲೀಸರು ನಿಷೇಧಿಸಿದ್ದಾರೆ.

ಮೊಹರಂ ಮೆರವಣಿಗೆ ಅಂಗವಾಗಿ ಬುಧವಾರ ಇಲ್ಲಿ ನಡೆದ ಸಮುದಾಯ ಪ್ರತಿನಿಧಿಗಳ ಸಭೆಯಲ್ಲಿ ಸಂಭಲ್‌ನ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಜೇಶ್‌ಕುಮಾರ್ ಶ್ರೀವಾಸ್ತವ ಈ ಸೂಚನೆ ನೀಡಿದರು. 'ಮಕ್ಕಳು 'ತಜಿಯ' ಮತ್ತು 'ಆಲಂ' ಹಿಡಿದು ಸಾಗುವುದಕ್ಕೆ ಅವಕಾಶ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.


ಮೆರವಣಿಗೆಯಲ್ಲಿ ಧಾರ್ಮಿಕ ಪ್ರತಿಕೃತಿಗಳು ವಿದ್ಯುತ್ ತಂತಿಗೆ ತಾಗಿ ಈ ಹಿಂದೆ ಅವಘಡ ಸಂಭವಿಸಿದ್ದವು.

'ಉತ್ತರಾಧಿಕಾರಿ ಆಯ್ಕೆ: ಟ್ರಸ್ಟ್ ನಿರ್ಧಾರ'

ಬೌದ್ಧ ಧರ್ಮ ಗುರು ದಲೈಲಾಮಾ ಹೇಳಿಕೆ ಆಕ್ಷೇಪ ವ್ಯಕ್ತಪಡಿಸಿದ ಚೀನಾ

ಧರ್ಮಶಾಲಾ(ಹಿಮಾಚಲ ಪ್ರದೇಶ) (ಪಿಟಿಐ): ತಮ್ಮ ಉತ್ತರಾಧಿಕಾರಿ ಆಯ್ಕೆ ಕುರಿತಂತೆ ಟಿಬೆಟ್‌ನ ಅಧ್ಯಾತ್ಮ ಗುರು ದಲೈ ಲಾಮಾ ಅವರು ಬುಧವಾರ ನೀಡಿರುವ ಹೇಳಿಕೆಯನ್ನು ಅವರ ಅನುಯಾಯಿಗಳು ಸ್ವಾಗತಿಸಿದ್ದರೆ, ಚೀನಾ ಆಕ್ಷೇಪ ವ್ಯಕ್ತಪಡಿಸಿದೆ.

ಅರುಣಾಚಲ ಪ್ರದೇಶ ಮುಖ್ಯ ಮಂತ್ರಿ ಪೆಮಾ ಖಂಡು ಕೂಡ ದಲೈ ಲಾಮಾ ಅವರ ಹೇಳಿಕೆಯನ್ನು ಸ್ವಾಗತಿಸಿದ್ದಾರೆ.


ದಲೈ ಲಾಮಾ

ತಾವು ಸ್ಥಾಪಿಸಿರುವ ಸಂಪ್ರದಾಯ ಮತ್ತು ಸಂಸ್ಥೆ ಮುಂದುವರಿಯಲಿದ್ದು, ಭವಿಷ್ಯದ ಧಾರ್ಮಿಕ ಗುರು ಯಾರಾಗಬೇಕು ಎಂಬುದರ ಕುರಿತು ಗಾಡೆನ್ ಫೋಡ್ರಾಂಗ್ ಟ್ರಸ್ಟ್ ನಿರ್ಧರಿಸಲಿದೆ ಎಂದು ದಲೈ ಲಾಮಾ ಹೇಳಿದ್ದಾರೆ. ಈ ಮೂಲಕ, ತಮ್ಮ ಕಾಲಾನಂತರ ಉತ್ತರಾಧಿಕಾರಿಯನ್ನು ನೇಮಕ ಮಾಡುವ ಕುರಿತಂತೆ ಎದ್ದಿದ್ದ ಅನಿಶ್ಚಿತತೆಗೆ ಅವರು ಅಂತ್ಯಹಾಡಿದ್ದಾರೆ.

2015ರಲ್ಲಿ ದಲೈ ಲಾಮಾ ಅವರು ಗಾಡೆನ್ ಫೋಡ್ರಾಂಗ್ ಟ್ರಸ್ಟ್ ಸ್ಥಾಪಿಸಿದ್ದಾರೆ. 14ನೇ ದಲೈ ಲಾಮಾ ತೆನ್‌ಜಿನ್ ಗ್ಯಾತ್ಸೊ ಅವರನ್ನು ಲಾಮಾ ಥೊಂಡುಪ್ ಎಂದೂ ಕರೆಯಲಾಗುತ್ತದೆ. ಅವರು ಮೇ 21ರಂದು ಈ ಹೇಳಿಕೆ ನೀಡಿದ್ದಾರೆ. ಅವರ 90ನೇ ಜನ್ಮ ದಿನಾಚರಣೆ ಭಾನುವಾರ ನಡೆಯಲಿದೆ.

ಅದಕ್ಕೂ ನಾಲ್ಕು ದಿನ ಮೊದಲು, ಅವರ ಕಚೇರಿಯು ಈ ಹೇಳಿಕೆಯನ್ನು ಬಿಡುಗಡೆ ಮಾಡಿದೆ. ಅಲ್ಲದೇ, ಟಿಬೆಟ್ ಭಾಷೆಯಲ್ಲಿರುವ 5.57 ನಿಮಿಷಗಳ ವಿಡಿಯೊಂದನ್ನು ಸಹ ಬಿಡುಗಡೆ ಮಾಡಿದೆ.

ವಿವಾದವೇನು?: ತಾನು ಸ್ಥಾಪಿಸಿದ ಸಂಸ್ಥೆಯು ಮುಂದುವರಿಯುವ ಕುರಿತ ನಿರ್ಧಾರವನ್ನು ತಮಗೆ 90 ವರ್ಷ ತುಂಬಿದ ಸಂದರ್ಭದಲ್ಲಿ ಪ್ರಕಟಿಸುವುದಾಗಿ ದಲೈ ಲಾಮಾ ಅವರು 2011ರಲ್ಲಿ ಹೇಳಿದ್ದರು. 'ನಾನು ಮುಂದುವರಿಯುವ ಕುರಿತು, ನನಗೆ 90 ವರ್ಷ ತುಂಬಿದ ಸಂದರ್ಭದಲ್ಲಿ ಟಿಬೆಟನ್ ಬೌದ್ಧ ಸಂಪ್ರದಾಯಕ್ಕೆ ಸೇರಿದ ಹಿರಿಯ ಲಾಮಾಗಳು, ಟಿಬೆಟ್‌ನ ಪ್ರಜೆಗಳು ಹಾಗೂ ಈ ಸಂಪ್ರದಾಯ ಅನುಸರಿಸುವ ಇತರ ಜನರ ಜೊತೆ ಸಮಾಲೋಚನೆ ನಡೆಸಿ, ನಿರ್ಧರಿಸುವೆ' ಎಂಬುದಾಗಿಯೂ ಅವರು ಆಗ ಹೇಳಿದ್ದರು. ಈಗ, 'ದಲೈ ಲಾಮಾ ಸ್ಥಾಪಿತ ಸಂಸ್ಥೆ ಮುಂದುವರಿಯಲಿದೆ. ಭವಿಷ್ಯದ ಧರ್ಮ ಗುರುವಿನ ಪುನರ್ಜನ್ಮ ಮಾನ್ಯ ಮಾಡುವ ಅಧಿಕಾರವನ್ನು ಗಾಡೆನ್ ಫೋಡ್ರಾಂಗ್ ಟ್ರಸ್ಟ್ ಹೊಂದಿದೆ ಎಂದು ನಾನು ಪುನರುಚ್ಚರಿಸುತ್ತೇನೆ. ಈ ವಿಷಯದಲ್ಲಿ ಮಧ್ಯಪ್ರವೇಶಿಸಲು ಯಾರಿಗೂ ಅಧಿಕಾರ ಇಲ್ಲ' ಎಂದು ಬುಧವಾರ ಪ್ರಕಟಣೆಯಲ್ಲಿ ತಿಳಿಸಲಾಗಿದೆ. 'ಸಂಸ್ಥೆಯ ಸಂಪ್ರದಾಯದ ಪ್ರಕಾರ, ಮುಂದಿನ ಧರ್ಮ ಗುರುವಿಗಾಗಿ ಶೋಧ ಹಾಗೂ ಮಾನ್ಯತೆ ನೀಡುವ ಪ್ರಕ್ರಿಯೆಯನ್ನು ಟ್ರಸ್ಟ್‌ನ ಸದಸ್ಯರು ಆರಂಭಿಸಬೇಕು' ಎಂದೂ ತಿಳಿಸಲಾಗಿದೆ.

ನಮ್ಮ ಅನುಮೋದನೆ ಅಗತ್ಯ: ಚೀನಾ

ಬೀಜಿಂಗ್: ತಮ್ಮ ಉತ್ತರಾಧಿಕಾರಿ ಆಯ್ಕೆ ಕುರಿತಂತೆ ದಲೈ ಲಾಮಾ ಪ್ರಕಟಿಸಿರುವ ಯೋಜನೆಯನ್ನು ಚೀನಾ ಬುಧವಾರ ತಿರಸ್ಕರಿಸಿದೆ.

'ಶತಮಾನಗಳಿಂದಲೂ ಪಾಲಿಸಿಕೊಂಡು ಬರುತ್ತಿರುವ ಪದ್ಧತಿಯಂತೆ, ಟಿಬೆಟನ್ನರ ಮುಂದಿನ ಧರ್ಮ ಗುರು ಯಾರಾಗಬೇಕು ಎಂಬುದನ್ನು ಚೀನಾ ಗುರುತಿಸಿ, ಅನುಮೋದಿಸುತ್ತದೆ' ಎಂದೂ ಹೇಳಿದೆ.

ಈ ಮೂಲಕ, ಹಲವು ದಶಕಗಳಿಂದ ಟಿಬೆಟ್ ಕುರಿತಂತೆ ನಡೆಯುತ್ತಿರುವ ಸಂಘರ್ಷದಲ್ಲಿ ಹೊಸ ಅಧ್ಯಾಯವೊಂದು ಆರಂಭಗೊಂಡಂತಾಗಿದೆ. ದಲೈ ಲಾಮಾ ಅವರನ್ನು ಪ್ರತ್ಯೇಕತಾವಾದಿ ಎಂದೇ ಚೀನಾ ಪರಿಗಣಿಸುತ್ತದೆ.

'ದಲೈ ಲಾಮಾ ಅವರ ಪುನರ್ಜನ್ಮವನ್ನು ಪ್ರಾದೇಶಿಕ ನಿಯಮಗಳಂತೆ ಮಾನ್ಯ ಮಾಡಲಾಗುತ್ತದೆ. ಇದಕ್ಕೆ, ಈ ನೆಲದ ಕಾನೂನು ಮತ್ತು ಧಾರ್ಮಿಕ ಸಂಪ್ರದಾಯಗಳ ಪ್ರಕಾರ ನಮ್ಮ ಸರ್ಕಾರ ಅನುಮೋದನೆ ನೀಡಬೇಕು' ಎಂದು ಚೀನಾ ವಿದೇಶಾಂಗ ಸಚಿವಾಲಯ ವಕ್ತಾರೆ ಮಾವೊ ನಿಂಗ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.



'ದಲೈ ಲಾಮಾ ಅವರ ಈ ನಿರ್ಧಾರವು ಹಿಮಾಲಯದ ತಪ್ಪಲಿನ ಪ್ರದೇಶಗಳಲ್ಲಿನ ಅವರ ಲಕ್ಷಾಂತರ ಅನುಯಾಯಿಗಳಿಗೆ ಸಂತಸವನ್ನುಂಟು ಮಾಡಿದೆ'
ಪೆಮಾ ಖಂಡು, ಅರುಣಾಚಲ ಪ್ರದೇಶ ಮುಖ್ಯಮಂತ್ರಿ

ಬಾಲಕಿಗೆ ಕಿರುಕುಳ: ಆರೋಪಿ ಬಂಧಿಸಿದ 24 ಗಂಟೆಯೊಳಗೆ ಆರೋಪಪಟ್ಟಿ

ಠಾಣೆ (ಪಿಟಿಐ): ಮಹಾರಾಷ್ಟ್ರದ ಠಾಣೆಯಲ್ಲಿ 14 ವರ್ಷದ ಬಾಲಕಿಯನ್ನು ಹಿಂಬಾಲಿಸಿದ ಆರೋಪದಲ್ಲಿ ವ್ಯಕ್ತಿಯೊಬ್ಬನನ್ನು ಬಂಧಿಸಿದ 24 ಗಂಟೆಗಳೊಳಗೆ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ಬುಧವಾರ ಹೇಳಿದ್ದಾರೆ. ಘಟನೆ ಜೂನ್ 29ರಂದು ವರ್ತಕ್ ನಗರದಲ್ಲಿ ಸಂಭವಿಸಿತ್ತು.

ಕಿಸಾನ್ ನಗರದ ನಿವಾಸಿ ದಿನೇಶ್ ವಿವೇಕ್ ಫಾಗ್ (26) ಆರೋಪಿ. ಕಲ್ಯಾಣ್ ಬಳಿ ತಪ್ಪಿಸಿಕೊಳ್ಳುವಾಗ ಆತನನ್ನು ಬಂಧಿಸಲಾಯಿತು ಎಂದು ಹಿರಿಯ ಪೊಲೀಸ್ ಇನ್‌ಸ್ಪೆಕ್ಟರ್ ವಾಘಚೌರೆ ಹೇಳಿದ್ದಾರೆ. ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 78 (1), 78 (2) (ಹಿಂಬಾಲಿಸುವುದು) ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಬಾಲಕಿಯು ತನ್ನ ತರಗತಿ ಮುಗಿಸಿ ಮನೆಗೆ ಹೋಗುತ್ತಿರುವ ವೇಳೆ ವರ್ತಕ್ ನಗರದಲ್ಲಿ ಅಪರಿಚಿತ ವ್ಯಕ್ತಿ ಕೆಂಪು ಕಾರಿನಲ್ಲಿ ಸುಮಾರು 500 ಮೀಟರ್ ಹಿಂಬಾಲಿಸಿದ್ದಾಗಿ ಸಂತ್ರಸ್ತೆಯ ತಾಯಿ ದೂರಿನಲ್ಲಿ ತಿಳಿಸಿದ್ದಾರೆ. ಕಾರಿನಲ್ಲಿ ಕುಳಿತುಕೊಳ್ಳುವಂತೆ ಆರೋಪಿಯು ಬಾಲಕಿಯನ್ನು ಒತ್ತಾಯಿಸಿದ್ದು, ಆದರೆ ಬಾಲಕಿ ನಿರಾಕರಿಸಿ ಅಲ್ಲಿಂದ ತಪ್ಪಿಸಿಕೊಂಡಿದ್ದಳು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ನಂತರ ಪ್ರದೇಶದ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ವೇಳೆ ಪೊಲೀಸರು ಕಾರು ಮತ್ತು ಅದರ ನೋಂದಣಿ ಸಂಖ್ಯೆಯನ್ನು ಗುರುತಿಸಿದ್ದು, ಆರೋಪಿ ಕಲ್ಯಾಣ್ ಪ್ರದೇಶದಲ್ಲಿ ಇರುವುದನ್ನು ಪತ್ತೆಹಚ್ಚಿದ್ದರು. ತಕ್ಷಣವೆ ಕಾರ್ಯಾಚರಣೆ ನಡೆಸಿದ ಪೊಲೀಸರು ಬಾರ್ ಒಂದರಲ್ಲಿ ಆತನನ್ನು ಬಂಧಿಸಿದ್ದಾರೆ ಎಂದು ಅಧಿಕಾರಿ ಹೇಳಿದ್ದಾರೆ.

ತನಿಖೆಯನ್ನು 24 ಗಂಟೆಗಳೊಳಗೆ ಪೂರ್ಣಗೊಳಿಸಿ, ಪ್ರಬಲ ಸಾಕ್ಷ್ಯಾಧಾರಗಳೊಂದಿಗೆ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

ರೈಲು: 8 ಗಂಟೆಗೂ ಮುನ್ನ ಸೀಟು ಖಾತರಿ

ನವದೆಹಲಿ (ಪಿಟಿಐ): ಬೆಳಿಗ್ಗೆ 5 ಗಂಟೆಯಿಂದ ಮಧ್ಯಾಹ್ನ 2 ಗಂಟೆಯ ನಡುವೆ ಹೊರಡುವ ರೈಲುಗಳಿಗೆ ಸೀಟು ಕಾಯ್ದಿರಿಸಿದ ಪಟ್ಟಿಯನ್ನು ಹಿಂದಿನ ದಿನ ರಾತ್ರಿ 9 ಗಂಟೆಗೆ ಮತ್ತು ಇತರ ಅವಧಿಯಲ್ಲಿ ಸಂಚರಿಸುವ ರೈಲುಗಳಿಗೆ ಎಂಟು ಗಂಟೆ ಮುನ್ನ ಈ ಪಟ್ಟಿಯನ್ನು ಸಿದ್ಧಪಡಿಸಲಾಗುವುದು ಎಂದು ರೈಲ್ವೆ ತಿಳಿಸಿದೆ.

ಪ್ರಯಾಣಿಕರ ಅನುಕೂಲಕ್ಕಾಗಿ ಬದಲಾವಣೆ ಮಾಡಲಾಗಿದೆ ಎಂದು ರೈಲ್ವೆ ಸಚಿವಾಲಯ ಬುಧವಾರ ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದೆ. 2015ರಿಂದಲೂ, ರೈಲು ಹೊರಡುವ ಸಮಯಕ್ಕೂ ನಾಲ್ಕು ಗಂಟೆಗಳ ಮುನ್ನ ಸೀಟು ಕಾಯ್ದಿರಿಸಿದ ಮೊದಲ ಪಟ್ಟಿಯು ಸಿದ್ಧಪಡಿಸಲಾಗುತ್ತಿತ್ತು. ಇದೀಗ ಈ ನಿಯಮದಲ್ಲಿ ಬದಲಾವಣೆ ತರಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿರುವ ಸಚಿವಾಲಯ, ಇದು ಯಾವ ದಿನಾಂಕದಿಂದ ಜಾರಿಯಾಗಬೇಕು ಎಂಬುದನ್ನು ಪ್ರಸ್ತಾಪಿಸಿಲ್ಲ.

ಕಾವಡ್ ಯಾತ್ರೆ: 6 ಮಂದಿಗೆ ಸಮನ್ಸ್

ಮುಜಫ್ಫರ್‌ನಗರ (ಪಿಟಿಐ): ಕಾವಡ್ ಯಾತ್ರಾ ಮಾರ್ಗದ ಹೋಟೆಲ್‌ಗಳ ಮಾಲೀಕರ ಗುರುತನ್ನು ಬಹಿರಂಗಪಡಿಸುವಂತೆ ಒತ್ತಾಯಿಸುತ್ತಿದ್ದ ಆರೋಪದಲ್ಲಿ ಸ್ವಾಮಿ ಯಶವೀರ್ ಮಹಾರಾಜ್ ಅವರ 6 ಮಂದಿ ಅನುಯಾಯಿಗಳಿಗೆ ಸಮನ್ಸ್ ನೀಡಿರುವುದಾಗಿ ಪೊಲೀಸರು ಬುಧವಾರ ಹೇಳಿದ್ದಾರೆ.

ಜಿಲ್ಲಾಡಳಿತದ ಅನುಮತಿಯನ್ನೂ ಪಡೆಯದೇ ಕೆಲವು ವ್ಯಕ್ತಿಗಳು ಅನಧಿಕೃತವಾಗಿ ಹೋಟೆಲ್ ಸಿಬ್ಬಂದಿಯ ಗುರುತು ಪರಿಶೀಲನೆಗೆ ಮುಂದಾಗಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ.

ಸುಮಿತ್ ಬಹ್ರಾಗಿ, ರೋಹಿತ್, ವಿವೇಕ್, ಸುಮಿತ್, ಸುನ್ನಿ ಹಾಗೂ ರಾಕೇಶ್ ಎಂಬವರಿಗೆ 3 ದಿನಗಳ ಒಳಗೆ ಠಾಣೆಗೆ ಹಾಜರಾಗುವಂತೆ ಸಮನ್ಸ್ ಜಾರಿಗೊಳಿಸಲಾಗಿದೆ. ಈ 6 ಮಂದಿ ಸ್ವಾಮಿ ಯಶವೀರ್ ಅವರ ಯೋಗ ಸಾಧನಾ ಯಶವೀರ ಆಶ್ರಮದ ಕಾರ್ಯಕರ್ತರು ಎಂದು ಪೊಲೀಸರು ಹೇಳಿದ್ದಾರೆ. ಇವರಲ್ಲದೇ, ವಿಡಿಯೊದಲ್ಲಿ ಕಂಡುಬಂದಿರುವ ಇತರರಿಗೂ ಶೀಘ್ರವೇ ಸಮನ್ಸ್ ನೀಡಲಾಗುವುದು ಎಂದು ತಿಳಿಸಿದ್ದಾರೆ. ಸ್ಥಳೀಯರ ಪ್ರಕಾರ, ಕಾವಡ್ ಯಾತ್ರಾ ಮಾರ್ಗದಲ್ಲಿರುವ ಹೋಟೆಲ್‌ಗಳ ಮಾಲೀಕರ ಪೂರ್ವಪರ, ಗುರುತು ವಿಚಾರಿಸುವ ಅಭಿಯಾನಕ್ಕೆ ಭಾನುವಾರ ಸ್ವಾಮಿ ಯಶವೀರ್ ಚಾಲನೆ ನೀಡಿದರು ಎನ್ನಲಾಗಿದೆ.

ಭಯೋತ್ಪಾದನೆಗೆ ಸಮ: 'ಹೋಟೆಲ್ ಮಾಲೀಕರು ಯಾವ ಧರ್ಮಕ್ಕೆ ಸೇರಿದವರೆಂದು ತಿಳಿಯಲು ಬಲವಂತವಾಗಿ ಅವರ ಹೆಸರು ಹೇಳುವಂತೆ ಪೀಡಿಸಲಾಗುತ್ತಿದೆ, ಅವರನ್ನು ವಿವಸ್ತ್ರಗೊಳಿಸಲಾಗುತ್ತಿದೆ. ಈ ಕೃತ್ಯಕ್ಕೂ ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ಕೃತ್ಯಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಇದೂ ಒಂದು ರೀತಿಯ ಭಯೋತ್ಪಾದನೆ' ಹೀಗೆಂದು ಸಮಾಜವಾದಿ ಪಕ್ಷದ ಹಿರಿಯ ನಾಯಕ ಎಸ್.ಟಿ ಹಸನ್ ಹೇಳಿದ್ದಾರೆ. ಉತ್ತರಾಖಂಡದ ಹಲವು ಪ್ರದೇಶಗಳಲ್ಲಿ ಸ್ಥಳೀಯ ಹಿಂದೂ ಸಂಘಟನೆಗಳ ಸದಸ್ಯರು ಹೋಟೆಲ್ ಮಾಲೀಕರ ಗುರುತು ಬಹಿರಂಗ ಪಡಿಸಲು ಒತ್ತಾಯಿಸಿರುವ ವಿಡಿಯೊಗಳು ವೈರಲ್ ಆಗಿರುವ ಹಿನ್ನೆಲೆಯಲ್ಲಿ ಹಸನ್ ಈ ಹೇಳಿಕೆ ನೀಡಿದ್ದಾರೆ.

ನೋಂದಣಿ ಪ್ರದರ್ಶನ ಕಡ್ಡಾಯ

ಡೆಹ್ರಾಡೂನ್ (ಪಿಟಿಐ): ಕಾವಡ್ ಯಾತ್ರೆ ಮಾರ್ಗದಲ್ಲಿರುವ ತಿಂಡಿ–ತಿನಿಸು ಮಳಿಗೆಗಳು, ಹೋಟೆಲ್‌ಗಳು ಕಡ್ಡಾಯವಾಗಿ ಆಹಾರ ಪರವಾನಗಿ ಪತ್ರ ಮತ್ತು ನೋಂದಣಿ ಪತ್ರಗಳನ್ನು ಗ್ರಾಹಕರಿಗೆ ಸೂಕ್ತವಾಗಿ ಕಾಣುವ ರೀತಿಯಲ್ಲಿ ಪ್ರದರ್ಶಿಸಬೇಕು ಎಂದು ಉತ್ತರಾಖಂಡ ಸರ್ಕಾರ ಆದೇಶಿಸಿದೆ.

ಆರೋಗ್ಯ ಕಾರ್ಯದರ್ಶಿ ಆರ್. ರಾಜೇಶ್ ಕುಮಾರ್ ಅವರು ಈ ಬಗ್ಗೆ ಮಾಹಿತಿ ನೀಡಿದ್ದು, ಸಣ್ಣಪುಟ್ಟ ಮಳಿಗೆಗಳು, ಕಾರ್ಟ್‌ಗಳು, ಡಾಬಾ, ರೆಸ್ಟೋರೆಂಟ್‌ಗಳು ಕೂಡ ನೋಂದಣಿ ಪತ್ರ ಪ್ರದರ್ಶಿಸಬೇಕು ಎಂದಿದ್ದಾರೆ.

1700 ಕೆ.ಜಿ ದನದ ಮಾಂಸ ಜಪ್ತಿ, 200 ಜನರ ಬಂಧನ

ಪ್ರಜಾವಾಣಿ ವಾರ್ತೆ

ಗುವಾಹಟಿ: ದನದ ಮಾಂಸ ಮಾರಾಟ ಮತ್ತು ಸಾಗಣೆ ವಿರುದ್ಧ ಮಂಗಳವಾರದಿಂದ ಕಾರ್ಯಾಚರಣೆ ಆರಂಭಿಸಿರುವ ಅಸ್ಸಾಂ ಸರ್ಕಾರ, ಈ ವರೆಗೆ 200 ಜನರನ್ನು ಬಂಧಿಸಿದ್ದು 1,700 ಕೆ.ಜಿಗೂ ಅಧಿಕ ಶಂಕಾಸ್ಪದ ದನದ ಮಾಂಸವನ್ನು ಜಪ್ತಿ ಮಾಡಿದೆ.

ರಾಜ್ಯದ ಕೆಲ ದೇವಸ್ಥಾನಗಳ ಸಮೀಪ ಶಂಕಿತ ದನದ ಮಾಂಸ ವಶಪಡಿಸಿಕೊಂಡ ನಂತರ, ಕೋಮು ಸಂಘರ್ಷ ಕಂಡುಬಂದಿತ್ತು. ಇದರ ಬೆನ್ನಲ್ಲೇ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದಾರೆ.

'ಅಕ್ರಮ ಕಸಾಯಿಖಾನೆಗಳು ಹಾಗೂ ಜಾನುವಾರುಗಳ ಸಂರಕ್ಷಣಾ ಕಾಯ್ದೆ ಉಲ್ಲಂಘಿಸಿ ದನದ ಮಾಂಸ ಮಾರಾಟ ಮಾಡುವುದರ ವಿರುದ್ಧ ರಾಜ್ಯದಾದ್ಯಂತ ಮಂಗಳವಾರದಿಂದ ಕಾರ್ಯಾಚರಣೆ ಆರಂಭಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಂತರರಾಜ್ಯ ಜಾಲದ ಮೂವರು ಶಂಕಿತ ಸದಸ್ಯರ ಬಂಧನ

₹1.20 ಕೋಟಿ ಮೌಲ್ಯದ ಆಕ್ಸಿಟಾಸಿನ್ ವಶ

ಲಖನೌ (ಪಿಟಿಐ): 'ಆಕ್ಸಿಟಾಸಿನ್ ಚುಚ್ಚುಮದ್ದು' ಕಳ್ಳಸಾಗಾಣಿಕೆ ಮತ್ತು ಪೂರೈಕೆಯಲ್ಲಿ ತೊಡಗಿದೆ ಎನ್ನಲಾದ ಅಂತರರಾಜ್ಯ ಜಾಲದ ಮೂವರು ಶಂಕಿತ ಸದಸ್ಯರನ್ನು ಉತ್ತರ ಪ್ರದೇಶದ ವಿಶೇಷ ಕಾರ್ಯಪಡೆಯು ಬುಧವಾರ ಬಂಧಿಸಿದೆ.

ಅಧಿಕ ಹಾಲು ಮತ್ತು ಅಧಿಕ ಇಳುವರಿ ಪಡೆಯುವ ದುರುದ್ದೇಶದಿಂದ ಜಾನುವಾರು ಹಾಗೂ ತರಕಾರಿ ಗಿಡಗಳಿಗೆ ನಿರ್ಬಂಧಿತ 'ಆಕ್ಸಿಟಾಸಿನ್' ಚುಚ್ಚುಮದ್ದನ್ನು ಅವೈಜ್ಞಾನಿಕವಾಗಿ ಬಳಸಲಾಗುತ್ತದೆ. ಈ ಚುಚ್ಚುಮದ್ದು ಪ್ರಾಣಿಗಳು ಮತ್ತು ಮಾನವನ ಆರೋಗ್ಯಕ್ಕೆ ಮಾರಕವಾಗಿದೆ. ವಿಶೇಷ ಕಾರ್ಯಪಡೆಯು ಮನೆ ಯೊಂದರ ಮೇಲೆ ದಾಳಿ ನಡೆಸಿ ₹1.20 ಕೋಟಿ ಮೌಲ್ಯದ 5,87,880 ಮಿಲಿ ಲೀಟರ್ 'ಆಕ್ಸಿಟಾಸಿನ್' ವಶಪಡಿಸಿಕೊಂಡಿದೆ.

'ಬಂಧಿತರನ್ನು ಅನ್ಮೋಲ್ ಪಾಲ್, ಅವದೇಶ್ ಪಾಲ್, ಖಾಗೇಶ್ವರ್ ಎಂದು ಗುರುತಿಸಲಾಗಿದೆ. ಇವರಿಂದ ₹12,000 ನಗದು, 800 ಖಾಲಿ ಡಬ್ಬಿಗಳು, ರಬ್ಬರ್ ಮತ್ತು ಅಲ್ಯುಮಿನಿಯಂ ಮುಚ್ಚಳಗಳು, ಪ್ಲಾಸ್ಟಿಕ್ ಪೈಪ್‌ಗಳು, ಉಪ್ಪಿನ ಪೊಟ್ಟಣಗಳು, ಮೂರು ಮೊಬೈಲ್ ಫೋನ್ ಮತ್ತು ಸಾಗಿಸಲು ಬಳಸುವ ವಾಹನವನ್ನು ವಶಕ್ಕೆ ಪಡೆಯಲಾಗಿದೆ' ಎಂದು ಕಾರ್ಯ ಪಡೆ ತಿಳಿಸಿದೆ.



'ಈ ಜಾಲವು ಖನಿಜಯುಕ್ತ ನೀರಿನ ಪಾರ್ಸೆಲ್ ಹೆಸರಿನಲ್ಲಿ ಬಿಹಾರದಿಂದ 'ಆಕ್ಸಿಟಾಸಿನ್' ತರಿಸಿಕೊಂಡು ಸಣ್ಣ ಸಣ್ಣ ಡಬ್ಬಗಳಲ್ಲಿ ತುಂಬಿ ಅಕ್ರಮವಾಗಿ ಲಖನೌ ಮತ್ತು ಸುತ್ತಮುತ್ತ ಜಿಲ್ಲೆಗಳಲ್ಲಿ ವಿತರಿಸುತ್ತಿತ್ತು' ಎಂದು ತಿಳಿಸಿದೆ. ಕಕೋರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶುಭಮನ್ ಗಿಲ್ ಶತಕದ ಸೊಬಗು

ಎರಡನೇ ಟೆಸ್ಟ್: ಯಶಸ್ವಿ ಜೈಸ್ವಾಲ್ ಚೆಂದದ ಬ್ಯಾಟಿಂಗ್ • ಮೊದಲ ದಿನ 300ರ ಗಡಿ ದಾಟಿದ ಭಾರತ

• ಸಿದ್ದಿ ಕಿರಣ್

ಎಜ್‌ಬಾಸ್ಟನ್: ನಾಯಕನಿಗೆ ತಕ್ಕ ಆಟವಾಡಿದ ಶುಭಮನ್ ಗಿಲ್ 'ಇಂಗ್ಲೆಂಡ್ ಎದುರಿನ ಸತತ ಎರಡನೇ ಟೆಸ್ಟ್‌ನಲ್ಲಿ ಶತಕದಾಖಲಿಸಿದರು.

ತಂಡದ ವ್ಯವಸ್ಥಾಪನ ಮಂಡಳಿಯು ಆಯ್ಕೆ ಮಾಡಿದ ಹನ್ನೊಂದರ ಬಳಗದ ಕುರಿತ ಚರ್ಚೆಗಳನ್ನು ಗೌಣಗೊಳಿಸಿದ ಹೊತ್ತಿನಲ್ಲಿ ಗಿಲ್ ಆಟ ಚೇತೋಹಾರಿಯಾಗಿತ್ತು. ಬುಧವಾರ ಆರಂಭವಾದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ತಂಡವು ದಿನದಾಟದ ಕೊನೆಗೆ 85 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 310 ರನ್ ಗಳಿಸಿತು. ಗಿಲ್ (ಬ್ಯಾಟಿಂಗ್ 114) ಮತ್ತು ರವೀಂದ್ರ ಜಡೇಜ (ಬ್ಯಾಟಿಂಗ್ 41) ಕ್ರೀಸ್‌ನಲ್ಲಿದ್ದಾರೆ.

ಚಹಾ ವಿರಾಮದ ನಂತರ ರಿಷಭ್ ಪಂತ್ ಮತ್ತು ನಿತೀಶ್ ಕುಮಾರ್ ರೆಡ್ಡಿ ಅವರು ಪೆವಿಲಿಯನ್ ಸೇರಿದರು. ಈ ಹೊತ್ತಿನಲ್ಲಿ ಕ್ರೀಸ್‌ನಲ್ಲಿದ್ದ ಗಿಲ್ ಇನಿಂಗ್ಸ್ ಕುಸಿಯದಂತೆ ಹೊಣೆಯರಿತು ಆಡಿದರು. ಮುರಿಯದ ಆರನೇ ವಿಕೆಟ್ ಜೊತೆಯಾಟದಲ್ಲಿ 99 ರನ್ ಸೇರಿಸಿದರು.

ಬ್ಯಾಟಿಂಗ್‌ಗೆ ಸುಲಭವಾಗಿದ್ದ ಪರಿಸ್ಥಿತಿಯನ್ನು ಸಮರ್ಥವಾಗಿ ಬಳಸಿಕೊಂಡ ಗಿಲ್, 12 ಬೌಂಡರಿ ಬಾರಿಸಿದರು. 216 ಎಸೆತಗಳನ್ನು ಎದುರಿಸಿದರು.

ಇಂಗ್ಲೆಂಡ್ ವಿರುದ್ಧ ಸತತ ಎರಡು ಟೆಸ್ಟ್‌ಗಳಲ್ಲಿ ಶತಕ ದಾಖಲಿಸಿದ ಭಾರತದ ಮೂರನೇ ಬ್ಯಾಟರ್ ಆದರು. ಈ ಹಿಂದೆ ವಿಜಯ್ ಹಜಾರೆ ಮತ್ತು ಮೊಹಮ್ಮದ್ ಅಜರುದ್ದೀನ್ ಈ ಸಾಧನೆ ಮಾಡಿದ್ದರು.

ಯಶಸ್ವಿ ಬ್ಯಾಟಿಂಗ್: ಇಂಗ್ಲೆಂಡ್ ತಂಡದೊಂದಿಗೆ ತಮ್ಮ 'ಸರಸ'ವನ್ನು ಯಶಸ್ವಿ ಜೈಸ್ವಾಲ್ ಮುಂದುವರಿಸಿದರು. ಟಾಸ್ ಗೆದ್ದ ಆತಿಥೇಯ ಇಂಗ್ಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಲೀಡ್ಸ್‌ನಲ್ಲಿ ನಡೆದಿದ್ದ ಮೊದಲ ಪಂದ್ಯದಲ್ಲಿ ಶತಕ ಬಾರಿಸಿದ್ದ ಯಶಸ್ವಿ ಈ ಪಂದ್ಯದಲ್ಲಿಯೂ ಮೋಡಿ ಮಾಡುವತ್ತ ದಾಪುಗಾಲಿಟ್ಟಿದ್ದರು. ಆದರೆ ಚೆಂದದ 87 ರನ್ ಗಳಿಸಿದ ಅವರು ನಿರ್ಗಮಿಸಿದರು.

ಯುವ ಬ್ಯಾಟರ್ ಯಶಸ್ವಿ ಅವರು ಬಿರುಗಾಳಿ ಮುನ್ನ ತಮ್ಮ ಅಮೋಘ ಪ್ರತಿಭೆಯ ಆಟವನ್ನು ಮತ್ತೊಮ್ಮೆ ಪ್ರದರ್ಶಿಸಿದರು. ಭಾರತ ಕ್ರಿಕೆಟ್‌ನ ಭವಿಷ್ಯದ ತಾರೆಯಾಗುವ ಸಾಮರ್ಥ್ಯ ಆಟಗಾರ ತಾವು ಎಂಬುದನ್ನು ತೋರಿಸಿಕೊಟ್ಟರು. ಇನಿಂಗ್ಸ್ ಆರಂಭವಾದ ಮೊದಲ ಒಂದು ಗಂಟೆ ಮೋಡ ಮುಸುಕಿದ ವಾತಾವರಣವಿತ್ತು. ನಂತರ ಬಿಸಿಲು ಅರಳಿತು. ಜೈಸ್ವಾಲ್ ಜೊತೆಗೆ ಇನಿಂಗ್ಸ್ ಆರಂಭಿಸಿದ ಅನುಭವಿ ಕೆ.ಎಲ್. ರಾಹುಲ್ ಅವರು ಈ ಅವಧಿಯಲ್ಲಿ ಇಂಗ್ಲೆಂಡ್ ವೇಗಿಗಳಾದ ಕ್ರಿಸ್ ವೋಕ್ಸ್ ಮತ್ತು ಜೋಶ್ ಟಂಗ್ ಅವರನ್ನು ಏಕಾಗ್ರತೆಯಿಂದ ಎದುರಿಸಿದರು. ಪಿಚ್ ಸತ್ವ ಮತ್ತು ವಾತಾವರಣದ ಲಾಭ ಪಡೆದ ಬೌಲರ್‌ಗಳು ಪರಿಣಾಮಕಾರಿ ದಾಳಿ ನಡೆಸಿದರು.



ಭಾರತ ತಂಡದ ನಾಯಕ ಶುಭಮನ್ ಗಿಲ್ ಶತಕ ಸಂಭ್ರಮ ಎಪಿ ಚಿತ್ರಗಳು

ಒಂದೆರಡು ಎಲ್‌ಬಿಡಬ್ಲ್ಯು ಅಪೀಲ್‌ಗಳಲ್ಲಿ ಸ್ವಲ್ಪ ಅಂತರದಲ್ಲಿ 'ಜೀವದಾನ' ಪಡೆದ ರಾಹುಲ್ 9ನೇ ಓವರ್‌ನಲ್ಲಿ ವೋಕ್ಸ್ ಎಸೆತವನ್ನು ಆಡುವ ಭರದಲ್ಲಿ ಸ್ಟಂಪ್‌ಗೆ ಎಳೆದುಕೊಂಡರು. ಅವರ ಆಟಕ್ಕೆ ತೆರೆಬಿತ್ತು. 36 ವರ್ಷ ವಯಸ್ಸಿನ ವೋಕ್ಸ್ ತಮ್ಮ ತವರು ಅಂಗಳದಲ್ಲಿ ಸಂಭ್ರಮಿಸಿದರು.

ಆದರೆ ಜೈಸ್ವಾಲ್ ಅವರು ಮಾತ್ರ ತದೇಕಚಿತ್ತದಿಂದ ಬೌಲರ್‌ಗಳನ್ನು ಎದುರಿಸಿದರು. ಕ್ರಮಾಂಕದಲ್ಲಿ ಬಡ್ತಿ ಪಡೆದ ಕರುಣ್ ನಾಯರ್ (31 ರನ್) ಅವರೊಂದಿಗೆ ಮೂರನೇ ವಿಕೆಟ್ ಜೊತೆಯಾಟದಲ್ಲಿ 80 ರನ್ ಸೇರಿಸಿದರು.

ಭಾರತ VS ಇಂಗ್ಲೆಂಡ್
ECB
ಇಂದು ಮಧ್ಯಾಹ್ನ 2:30 ರಿಂದ
SONY SPORTS TEN 1 — ENGLISH
SONY SPORTS TEN 3 — HINDI
SONY SPORTS TEN 5 — ENGLISH

ಸ್ಕೋರ್ ಕಾರ್ಡ್

ಭಾರತ 1ನೇ ಇನಿಂಗ್ಸ್
5ಕ್ಕೆ 310 (85 ಓವರ್)

ಜೈಸ್ವಾಲ್ ಸಿ ಸ್ಮಿತ್ ಬಿ ಸ್ಟೋಕ್ಸ್ 87 (107ಎ, 4x13),
ರಾಹುಲ್ ಬಿ ವೋಕ್ಸ್ 2 (26ಎ),
ಕರುಣ್ ಸಿ ಬ್ರೂಕ್ ಬಿ ಕಾರ್ಸ್ 31 (50ಎ, 4x5),
ಗಿಲ್ ಬ್ಯಾಟಿಂಗ್ 114 (216ಎ, 4x12),
ಪಂತ್ ಸಿ ಕ್ರಾಲಿ ಬಿ ಬಶೀರ್ 25 (42ಎ, 6x1, 4x1),
ನಿತೀಶ್ ಬಿ ವೋಕ್ಸ್ 1 (50ಎ, 4x5),
ಜಡೇಜಾ ಬ್ಯಾಟಿಂಗ್ 41 (67ಎ, 4x5)
ಇತರೆ 9 (ಬೈ 1, ಲೆಗ್‌ಬೈ 4, ನೋಬಾಲ್ 4)
ವಿಕೆಟ್ ಪತನ: 1–15 (ಕೆ.ಎಲ್. ರಾಹುಲ್, 8.4), 2–95 (ಕರುಣ್ ನಾಯರ್, 23.3), 3–161 (ಯಶಸ್ವಿ ಜೈಸ್ವಾಲ್, 45.1), 4–208(ರಿಷಭ್ ಪಂತ್), 5–211(ನಿತೀಶ್ ರೆಡ್ಡಿ)
ಬೌಲಿಂಗ್: ಕ್ರಿಸ್ ವೋಕ್ಸ್ 21–6–59–2; ಬ್ರೈಡನ್ ಕಾರ್ಸ್ 16–2–49–1; ಜೋಶ್ ಟಂಗ್ 13–0–66–0; ಬೆನ್ ಸ್ಟೋಕ್ಸ್ 15–0–58–1; ಶೋಯೆಬ್ ಬಶೀರ್ 19–0–65–1; ಜೋ ರೂಟ್ 1-0-8-0.

ಕನ್ನಡಿಗ ಕರುಣ್ ಅವರು ಚೆಂದದ ಕವರ್ ಡ್ರೈವ್‌ಗಳನ್ನು ಪ್ರಯೋಗಿಸಿದರು. ಆತ್ಮವಿಶ್ವಾಸದಿಂದ ಆಡುತ್ತಿದ್ದ ಕರುಣ್ ಅವರಿಗೆ ಬ್ರೈಡನ್ ಕಾರ್ಸ್ ಅಡ್ಡಿಯಾದರು. ಹ್ಯಾರಿ ಬ್ರೂಕ್ ಪಡೆದ ಚೆಂದದ ಕ್ಯಾಚ್‌ಗೆ ನಿರ್ಗಮಿಸಿದರು.

ನಾಯಕ ಗಿಲ್ ಜೊತೆಗೂಡಿದ ಜೈಸ್ವಾಲ್ ಮತ್ತೊಂದು ಪಾಲುದಾರಿಕೆ ಆಟಕ್ಕೆ ವೇದಿಕೆ ಸಿದ್ಧಗೊಳಿಸಿದರು. ಡ್ರೈವ್, ಕಟ್ ಮತ್ತು ಪುಲ್ ಹೊಡೆತಗಳ ಮೂಲಕ ಬೌಲರ್‌ಗಳ ತಂತ್ರಗಳನ್ನು ವಿಫಲಗೊಳಿಸಿದರು. ಯಾವ ಎಸೆತಗಳನ್ನು ದಂಡಿಸಬೇಕು ಮತ್ತು ಯಾವ ಎಸೆತಗಳನ್ನು ರಕ್ಷಣಾತ್ಮಕವಾಗಿ ಆಡಬೇಕು ಎಂಬ ತಂತ್ರಗಾರಿಕೆಯೊಂದಿಗೆ ಬ್ಯಾಟಿಂಗ್ ಮಾಡಿದರು. ಇದರ ನಡುವೆ ಚುರುಕಾದ ಒಂಟಿ ರನ್‌ಗಳನ್ನೂ ತಮ್ಮ ಬುಟ್ಟಿಗೆ ತುಂಬಿಕೊಂಡರು. ಇದರಿಂದಾಗಿ ಸ್ಕೋರ್ ಕಾರ್ಡ್ ಚಲನೆ ನಿರಂತರವಾಗಿತ್ತು. ಇಬ್ಬರೂ ಬ್ಯಾಟರ್‌ಗಳ ಹೊಂದಾಣಿಕೆ ಅಮೋಘವಾಗಿತ್ತು. ಬಿಸಿಲು ಪ್ರಖರವಾದಂತೆ ಪಿಚ್ ಕೂಡ ಫ್ಲ್ಯಾಟ್ ಆಯಿತು.

ಮೊದಲ ಟೆಸ್ಟ್‌ನಲ್ಲಿ ಮಾಡಿದಂತೆಯೇ ಇಂಗ್ಲೆಂಡ್ ಇಲ್ಲಿಯೂ ಭಾರತಕ್ಕೆ ತಿರುಗೇಟು ನೀಡಿತು. ಚಹಾ ವಿರಾಮಕ್ಕೆ ಇನ್ನೂ ಅರ್ಧಗಂಟೆ ಬಾಕಿ ಇದ್ದಾಗ ಜೊತೆಯಾಟಕ್ಕೆ ತಡೆಯೊಡ್ಡಿತು. ಆತಿಥೇಯ ನಾಯಕ ಬೆನ್ ಸ್ಟೋಕ್ಸ್ ತಮ್ಮ ಬೌಲಿಂಗ್ ನಲ್ಲಿ ಜೈಸ್ವಾಲ್ ಆಟಕ್ಕೆ ಕಡಿವಾಣ ಹಾಕಿದರು.


ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್

ಫುಟ್‌ಬಾಲ್ ತಂಡದ ಹೆಡ್ ಕೋಚ್ ಸ್ಥಾನ ತ್ಯಜಿಸಿದ ಮಾರ್ಕ್ವೆಝ್

ನವದೆಹಲಿ (ಪಿಟಿಐ): ಭಾರತ ಫುಟ್‌ಬಾಲ್ ತಂಡ ಸತತವಾಗಿ ಹಿನ್ನಡೆ ಕಾಣುತ್ತಿದ್ದ ಪರಿಣಾಮ ಮುಖ್ಯ ಕೋಚ್ ಮನೊಲೊ ಮಾರ್ಕ್ವೆಝ್ ಅವರು ಬುಧವಾರ ಪದತ್ಯಾಗ ಮಾಡಿದ್ದಾರೆ. ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಜೊತೆ 'ಪರಸ್ಪರ ಸಮ್ಮತಿ'ಯ ಮೇರೆಗೆ ಅವರು ಈ ನಿರ್ಧಾರ ಕೈಗೊಂಡಿದ್ದಾರೆ.


ಮನೊಲೊ ಮಾರ್ಕ್ವೆಝ್

ಎಐಎಫ್‌ಎಫ್ ಕಾರ್ಯಕಾರಿ ಸಮಿತಿಯು ಸಭೆ ಸೇರಿ, ಮಾರ್ಕ್ವೆಝ್ ಅವರನ್ನು ಕರ್ತವ್ಯದಿಂದ ಮುಕ್ತಗೊಳಿಸಲು ಮಾಡಲು ಒಪ್ಪಿಕೊಂಡಿತು. ಮೂಲ ಒಪ್ಪಂದದ ಪ್ರಕಾರ ಮಾರ್ಕ್ವೆಝ್ ಅವರಿಗೆ ಇನ್ನೂ ಒಂದು ವರ್ಷ ಅವಧಿ ಉಳಿದಿತ್ತು.


'ಹಣಕಾಸು ವಿಷಯಕ್ಕೆ ಸಂಬಂಧಿಸಿ ಯಾವುದೇ ಅಭಿಪ್ರಾಯಭೇದಗಳಿಲ್ಲದೇ ಪರಸ್ಪರ ಸಮ್ಮತಿಯ ಮೇರೆಗೆ ಎಐಎಫ್‌ಎಫ್ ಮತ್ತು ಮನೊಲೊ ಒಪ್ಪಂದ ಕೊನೆಗೊಳಿಸಿದ್ದೇವೆ. ಅವರನ್ನು ಕೋಚ್ ಹುದ್ದೆಯಿಂದ ಮುಕ್ತಗೊಳಿಸಲಾಗಿದೆ. ಹೊಸ ಮುಖ್ಯ ಕೋಚ್ ನೇಮಕಕ್ಕೆ ಸಂಬಂಧಿಸಿ ಎಐಎಫ್‌ಎಫ್ ಶೀಘ್ರವೇ ಪ್ರಕ್ರಿಯೆ ಆರಂಭಿಸಲಿದೆ' ಎಂದು ಫೆಡರೇಷನ್‌ನ ಉಪ ಮಹಾ ಪ್ರಧಾನ ಕಾರ್ಯದರ್ಶಿ ಕೆ. ಸತ್ಯನಾರಾಯಣ ಸುದ್ದಿಸಂಸ್ಥೆಗೆ ತಿಳಿಸಿದರು.

ಕ್ರೊವೇಷ್ಯಾದ ಇಗೊರ್ ಸ್ಟಿಮಾಚ್ ಸ್ಥಾನದಲ್ಲಿ ಸ್ಪೇನ್‌ನ ಮಾರ್ಕ್ವೆಝ್ ಅವರನ್ನು 2024ರ ಜೂನ್‌ನಲ್ಲಿ ಎರಡು ವರ್ಷಗಳ ಅವಧಿಗೆ ಹೆಡ್ ಕೋಚ್ ಆಗಿ ನೇಮಕ ಮಾಡಲಾಗಿತ್ತು. ಅವರ ಅವಧಿಯಲ್ಲಿ ಭಾರತ ತಂಡವು ಆಡಿದ ಎಂಟು ಪಂದ್ಯಗಳಲ್ಲಿ ಕೇವಲ ಒಂದರಲ್ಲಿ ಮಾತ್ರ (ಮಾರ್ಚ್‌ನಲ್ಲಿ ಮಾಲ್ಡೀವ್ಸ್ ವಿರುದ್ಧ) ಜಯಗಳಿಸಿದೆ.

ಅವರು ಇಂಡಿಯನ್ ಸೂಪರ್ ಲೀಗ್‌ನಲ್ಲಿ ಆಡುವ ಎಫ್‌ಸಿ ಗೋವಾ ತಂಡಕ್ಕೂ 2024–25ರ ಸಾಲಿನಲ್ಲಿ ಹೆಡ್ ಕೋಚ್ ಆಗಿದ್ದರು. 2024–25ರಲ್ಲಿ ಅವರು ಈ ಎರಡೂ ಪಾತ್ರಗಳನ್ನು ನಿರ್ವಹಿಸಿದ್ದರು.

ಕೆನಡಾ ಓಪನ್: ಎರಡನೇ ಸುತ್ತಿಗೆ ಶ್ರೀಕಾಂತ್; ಆಯುಷ್ ನಿರ್ಗಮನ

ಕ್ಯಾಲ್ಗರಿ (ಕೆನಡಾ) (ಪಿಟಿಐ): ಭಾರತದ ಅನುಭವಿ ಆಟಗಾರ ಕಿದಂಬಿ ಶ್ರೀಕಾಂತ್ ಅವರು ಇಲ್ಲಿ ನಡೆಯುತ್ತಿರುವ ಕೆನಡಾ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.


ಕಿದಂಬಿ ಶ್ರೀಕಾಂತ್


ಆಯುಷ್ ಶೆಟ್ಟಿ

ಶ್ರೀಕಾಂತ್ ಅವರು, ಬುಧವಾರ ನಡೆದ ಪಂದ್ಯದಲ್ಲಿ ಸ್ವದೇಶದ ಪ್ರಿಯಾಂಶು ರಾಜಾವತ್ ಅವರನ್ನು 18–21, 21–19, 21–14ರಿಂದ ಮಣಿಸಿದರು. ರೋಚಕ ಹಣಾಹಣಿಯಿಂದ ಕೂಡಿದ್ದ ಈ ಪಂದ್ಯದಲ್ಲಿ ಶ್ರೀಕಾಂತ್ ಅವರು ಮೊದಲ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದರೂ, ಬಳಿಕ ಪುಟಿದೆದ್ದರು.


ಪ್ರಿಯಾಂಶು ಅವರು 2024ರಲ್ಲಿ ಈ ಟೂರ್ನಿಯ ಸೆಮಿಫೈನಲ್ ತಲುಪಿದ್ದರು.

ಆಯುಷ್ ಶೆಟ್ಟಿ ನಿರ್ಗಮನ: ಈಚೆಗಷ್ಟೇ ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದಿದ್ದ ಕನ್ನಡಿಗ ಆಯುಷ್ ಶೆಟ್ಟಿ ಅವರು ಟೂರ್ನಿಯಿಂದ ಹೊರಬಿದ್ದರು. ಆಯುಷ್, ಸ್ವದೇಶದ ಶಂಕರ್ ಮುತ್ತುಸ್ವಾಮಿ ಎದುರು 23–21, 21–12ರಿಂದ ಪರಾಭವಗೊಂಡರು.

ಚುಟುಕು ಸುದ್ದಿ

ಕೊಕ್ಕೊ ಫೆಡರೇಷನ್ ಅಧ್ಯಕ್ಷರಾಗಿ ಸುಧಾಂಶು ಮಿತ್ತಲ್ ಪುನರಾಯ್ಕೆ

ನವದೆಹಲಿ (ಪಿಟಿಐ): ಬಿಜೆಪಿ ನಾಯಕ ಸುಧಾಂಶು ಮಿತ್ತಲ್ ಅವರು ಭಾರತ ಕೊಕ್ಕೊ ಫೆಡರೇಷನ್ ಅಧ್ಯಕ್ಷರಾಗಿ ಪುನರಾಯ್ಕೆಗೊಂಡರು. ಪಂಜಾಬ್‌ನ ಉಪಕಾರ್ ಸಿಂಗ್ ವಿರ್ಕ್ ನೂತನ ಕಾರ್ಯದರ್ಶಿಯಾಗಿದ್ದಾರೆ.




ಫೆಡರೇಷನ್‌ನ ಆಡಳಿತ ಮಂಡಳಿ ಸಭೆ ಬುಧವಾರ ಇಲ್ಲಿ ನಡೆಯಿತು. ಆಡಳಿತ ಮಂಡಳಿಗೆ ಎಂಟು ಉಪಾಧ್ಯಕ್ಷರನ್ನು ಆಯ್ಕೆ ಮಾಡಲಾಗಿದೆ. ಇವರಲ್ಲಿ ಕರ್ನಾಟಕ ಕೊಕ್ಕೊ ಸಂಸ್ಥೆ ಅಧ್ಯಕ್ಷ ಲೋಕೇಶ್ವರ್ ಅವರೂ ಒಬ್ಬರಾಗಿದ್ದಾರೆ.

2030ರ ಏಷ್ಯನ್ ಕ್ರೀಡೆಗಳಲ್ಲಿ ಮತ್ತು 2032ರ ಒಲಿಂಪಿಕ್ಸ್‌ಗೆ ಕೊಕ್ಕೊ ಸೇರ್ಪಡೆ ಮಾಡಲು ಸರ್ವಪ್ರಯತ್ನ ಮಾಡುವುದಾಗಿ ಮಿತ್ತಲ್ ಈ ಸಂದರ್ಭದಲ್ಲಿ ತಿಳಿಸಿದರು. ಈಗ 58 ರಾಷ್ಟ್ರಗಳಲ್ಲಿ ಕೊಕ್ಕೊ ಆಡಲಾಗುತ್ತಿದೆ. ಈ ವರ್ಷ ಅದನ್ನು 90ಕ್ಕೆ ಹೆಚ್ಚಿಸುವ ಗುರಿ ಹೊಂದಿದ್ದೇವೆ ಎಂದರು.

ಪತ್ನಿ, ಮಗಳಿಗೆ ₹4 ಲಕ್ಷ ಪರಿಹಾರ ನೀಡಲು ಶಮಿಗೆ ಆದೇಶ

ಕೋಲ್ಕತ್ತ (ಪಿಟಿಐ): ಕ್ರಿಕೆಟಿಗ ಮೊಹಮ್ಮದ್ ಶಮಿ ಅವರು ತಮ್ಮಿಂದ ದೂರವಾದ ಪತ್ನಿ ಹಾಗೂ ಮಗಳಿಗೆ ಮಾಸಿಕ ₹4 ಲಕ್ಷ ಜೀವನಾಂಶ ನೀಡಬೇಕು ಎಂದು ಕೋಲ್ಕತ್ತ ಹೈಕೋರ್ಟ್ ನಿರ್ದೇಶಿಸಿದೆ.




2014ರಲ್ಲಿ ಶಮಿ ಮತ್ತು ಹಸೀನ್ ಜಹಾನ್ ಅವರು ಮದುವೆಯಾಗಿದ್ದರು. ಆದರೆ, 2018ರಲ್ಲಿ ಶಮಿ ಅವರು ತಮ್ಮ ಮೇಲೆ ದೌರ್ಜನ್ಯ ಎಸಗಿದ್ದಾರೆಂದು ಹಸೀನ್ ಅವರು ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿ ದೂರು ನೀಡಿದ್ದರು.

'ಶಮಿ ವಿರುದ್ಧದ ಕೌಟುಂಬಿಕ ದೌರ್ಜನ್ಯ ಪ್ರಕರಣ ಇತ್ಯರ್ಥವಾಗುವವರೆಗೆ ಪತ್ನಿಗೆ ₹1.50 ಲಕ್ಷ ಮತ್ತು ಮಗಳಿಗೆ ₹2.50 ಲಕ್ಷ ಮಾಸಿಕ ಪರಿಹಾರ ನೀಡಬೇಕು' ಎಂದು ಕೋರ್ಟ್ ಆದೇಶ ನೀಡಿದೆ.

ಮುಖ್ಯ ಕೋಚ್ ಆಗಿ ಮೋಹನ್‌ರಾಜ್ ಮರುನೇಮಕ

ಬೆಂಗಳೂರು (ಪಿಟಿಐ): ಭಾರತ ಫುಟ್ಬಾಲ್ ತಂಡದ ಮಾಜಿ ಆಟಗಾರ ಎನ್. ಮೋಹನ್ ರಾಜ್ ಅವರು ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡದ ಮುಖ್ಯ ಕೋಚ್ ಆಗಿ ಮರುನೇಮಕಗೊಂಡಿದ್ದಾರೆ.



'ಐ–ಲೀಗ್ 2ರ 2025–26ನೇ ಆವೃತ್ತಿಯಲ್ಲಿಯೂ ಮೋಹನ್‌ರಾಜ್ ಅವರೇ ಮುಖ್ಯ ಕೋಚ್ ಆಗಿ ಮುಂದುವರಿಯಲಿದ್ದಾರೆ' ಎಂದು ನಿಮಿದಾ ಸ್ಪೋರ್ಟ್ಸ್ ಸಂಸ್ಥಾಪಕ ಗೌರವ್ ಎಂ. ತಿಳಿಸಿದ್ದಾರೆ. ಈ ಸಂಸ್ಥೆ, ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡದ ಮಾಲೀಕತ್ವ ಹೊಂದಿದೆ.

ಎಫ್‌ಸಿ ಬೆಂಗಳೂರು ಯುನೈಟೆಡ್, ಕಳೆದ ಆವೃತ್ತಿಯಲ್ಲಿ ನಾಲ್ಕನೇ ಸ್ಥಾನ ಪಡೆದಿತ್ತು.

ಕೊಕೊ ಗಾಫ್‌ಗೂ ಆಘಾತ • ಮ್ಯಾಡಿಸನ್ ಕೀಸ್ ಮುನ್ನಡೆ

ವಿಂಬಲ್ಡನ್: ಮೂರನೇ ಸುತ್ತಿಗೆ ಸಬಲೆಂಕಾ

ಲಂಡನ್ (ರಾಯಿಟರ್ಸ್): ವಿಶ್ವದ ಅಗ್ರ ಕ್ರಮಾಂಕದ ಆಟಗಾರ್ತಿ ಅರಿನಾ ಸಬಲೆಂಕಾ ಅವರು ವಿಂಬಲ್ಡನ್ ಟೆನಿಸ್ ಚಾಂಪಿಯನ್‌ಷಿಪ್‌ನ ಎರಡನೇ ಸುತ್ತಿನಲ್ಲಿ ಬುಧವಾರ ಝೆಕ್ ಆಟಗಾರ್ತಿ ಮೇರಿ ಬೌಝ್ಕೋವಾ ಅವರಿಂದ ನಿರೀಕ್ಷೆಗಿಂತ ಹೆಚ್ಚಿನ ಹೋರಾಟ ಎದುರಿಸಿದರು. ಅಂತಿಮವಾಗಿ 7–6 (4), 6–4 ರಿಂದ ಜಯಗಳಿಸಿದ ಬೆಲರೂಸ್‌ನ ಆಟಗಾರ್ತಿ ಮೂರನೇ ಸುತ್ತಿಗೆ ಮುನ್ನಡೆದರು.

ಇನ್ನಷ್ಟು ಅಚ್ಚರಿಯ ಫಲಿತಾಂಶಗಳು ಹೊರ ಬರಲಿಕ್ಕಿಲ್ಲ ಎಂಬ ವಿಶ್ವಾಸ ಹೊಂದಿರುವುದಾಗಿ ಗೆಲುವಿನ ನಂತರ ಸಬಲೆಂಕಾ ಪ್ರತಿಕ್ರಿಯಿಸಿದರು.

ಎರಡನೇ ಶ್ರೇಯಾಂಕದ ಕೊಕೊ ಗಾಫ್, ಮೂರನೇ ಶ್ರೇಯಾಂಕದ ಜೆಸಿಕಾ ಪೆಗುಲಾ, ಐದನೇ ಶ್ರೇಯಾಂಕದ ಝೆಂಗ್ ಕ್ವಿನ್ವೆನ್ ಮತ್ತು ಒಂಬತ್ತನೇ ಶ್ರೇಯಾಂಕದ ಪೌಲಾ ಬಡೋಸಾ ಅವರು ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದಾರೆ. ಇದರಿಂದ ಸಬಲೆಂಕಾ ಅವರಿಗೆ ಇಲ್ಲಿ ಮೊದಲ ಸಲ ಪ್ರಶಸ್ತಿ ಗೆಲ್ಲುವ ಅವಕಾಶವೂ ಉಜ್ವಲವಾಗಿದೆ.

ಬಿಸಿಲಿನ ಕಣ್ಣಾಮುಚ್ಚಾಲೆ ಕಂಡ ಸೆಂಟರ್‌ಕೋರ್ಟ್‌ನಲ್ಲಿ ಸಬಲೆಂಕಾ ಅವರಿಗೆ ಮೊದಲ ಸೆಟ್ ಸುಲಭವಾಗಿ ಗೆಲ್ಲುವ ಅವಕಾಶವಿತ್ತು. ಆದರೆ ಪ್ರತಿಬಾರಿ ಬೌಝ್ಕೋವಾ ಪ್ರತಿರೋಧ ಒಡ್ಡಿದರು. 11ನೇ ಗೇಮ್‌ನಲ್ಲಿ ಸಬಲೆಂಕಾ ಡಬಲ್‌ಫಾಲ್ಟ್ ಎಸಗಿ ಸರ್ವ್ ಕಳೆದುಕೊಂಡರು. ಹೀಗಾಗಿ 48ನೇ ಕ್ರಮಾಂಕದ ಮೇರಿ ಅವರಿಗೆ ಸೆಟ್‌ಗಾಗಿ ಸರ್ವ್ ಮಾಡುವ ಅವಕಾಶ ಒದಗಿತು.

ಈ ಗೇಮ್‌ನಲ್ಲಿ ಒಮ್ಮೆ ಬ್ರೇಕ್ ಪಾಯಿಂಟ್ ಅವಕಾಶ ಕಳೆದುಕೊಂಡ ಸಬಲೆಂಕಾ ಹತಾಶರಾಗಿ ಚೀರಿದರು ಸಹ. ಆದರೆ ಬೇಗನೇ ಶಾಂತಚಿತ್ತರಾದ 27 ವರ್ಷದ ಆಟಗಾರ್ತಿ ಬ್ಯಾಕ್‌ಹ್ಯಾಂಡ್ ವಿನ್ನರ್ ಮೂಲಕ ಎದುರಾಳಿಯ ಸರ್ವ್ ಬ್ರೇಕ್ ಮಾಡಿ ಮೊದಲ ಸೆಟ್‌ಅನ್ನು ಟೈಬ್ರೇಕರಿಗೆ ಬೆಳೆಸಿ ನಂತರ ಹಿಡಿತ ಸಾಧಿಸಿದರು. ಎರಡನೇ ಸೆಟ್‌ನ ಐದನೇ ಗೇಮ್‌ನಲ್ಲಿ ಮೇರಿ ಎಸಗಿದ ತಪ್ಪಿನಿಂದ ಸರ್ವಿಸ್ ಬ್ರೇಕ್ ಮಾಡಿದ ಸಬಲೆಂಕಾ ನಂತರ ಪಂದ್ಯವನ್ನು ನಿಯಂತ್ರಣಕ್ಕೆ ಪಡೆದರು.

ಮೂರು ಗ್ರ್ಯಾನ್‌ಸ್ಲಾಮ್ ವಿಜೇತ ಆಟಗಾರ್ತಿ ಮುಂದಿನ ಪಂದ್ಯದಲ್ಲಿ ಆತಿಥೇಯ ಬ್ರಿಟನ್ ಆಟಗಾರ್ತಿ ಎಮ್ಮಾ ರಾಡುಕಾನು –2023ರ ಚಾಂಪಿಯನ್ ಮಾರ್ಕೆತಾ ವೊಂದ್ರುಸೋವಾ (ಝೆಕ್ ರಿಪಬ್ಲಿಕ್) ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.


ಝೆಕ್ ರಿಪಬ್ಲಿಕ್‌ನ ಮೇರಿ ಬೌಝ್ಕೋವಾ ವಿರುದ್ಧ ಜಯಗಳಿಸಿದ ಅರಿನಾ ಸಬಲೆಂಕಾ ಸಂಭ್ರಮ ಎಎಫ್‌ಪಿ ಚಿತ್ರ

ಡಬಲ್ಸ್: ಯುಕಿ ಭಾಂಬ್ರಿ– ಗ್ಯಾಲೊವೆ ಮುನ್ನಡೆ

ಭಾರತದ ಯುಕಿ ಭಾಂಬ್ರಿ ಮತ್ತು ಅಮೆರಿಕದ ರಾಬರ್ಟ್ ಗ್ಯಾಲೊವೆ ಜೋಡಿ ನೇರ ಸೆಟ್‌ಗಳ ಗೆಲುವಿನೊಡನೆ ವಿಂಬಲ್ಡನ್ ಚಾಂಪಿಯನ್‌ಷಿಪ್ ಪುರುಷರ ಡಬಲ್ಸ್ ಎರಡನೇ ಸುತ್ತನ್ನು ತಲುಪಿತು.

16ನೇ ಶ್ರೇಯಾಂಕ ಪಡೆದಿರುವ ಭಾಂಬ್ರಿ–ಗ್ಯಾಲೊವೆ ಜೋಡಿ ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ 7–6 (10–8), 6–4 ರಿಂದ ಫ್ರಾನ್ಸ್‌ನ ಮಾನ್ಯುಯೆಲ್ ಗಿನಾರ್ಡ್– ಮೊನಾಕೊದ ರೊಮೇನ್ ಅರ್ನೇಡೊ ಜೋಡಿಯನ್ನು 1 ಗಂಟೆ 49 ನಿಮಿಷಗಳ ಪಂದ್ಯದಲ್ಲಿ ಸೋಲಿಸಿತು.

ಆದರೆ ಭಾರತದ ರೋಹನ್ ಬೋಪಣ್ಣ ಮತ್ತು ಬೆಲ್ಜಿಯಂನ ಸ್ಯಾಂಡರ್ ಗಿಲ್ ಜೋಡಿ ಹೊರಬಿತ್ತು. ಈ ಜೋಡಿಯನ್ನು 6–3, 6–4ರಿಂದ ಸೋಲಿಸಿದ ಮೂರನೇ ಶ್ರೇಯಾಂಕದ ಕೆವಿನ್ ಕ್ರಾವೀಟ್ಜ್– ಟಿಮ್ ಪುಯೆಟ್ಜ್ (ಜರ್ಮನಿ) ಜೋಡಿ ಎರಡನೇ ಸುತ್ತು ತಲುಪಿತು.

ಕೀಸ್ ಮುನ್ನಡೆ: ಆಸ್ಟ್ರೇಲಿಯನ್ ಓಪನ್ ಚಾಂಪಿಯನ್ ಮ್ಯಾಡಿಸನ್ ಕೀಸ್ ಎರಡನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ 6–4, 6–2 ರಿಂದ ಓಲ್ಗಾ ದಾನಿಲೊವಿಕ್ ಅವರನ್ನು ಸೋಲಿಸಿದರು.

ಒಂದೇ ವರ್ಷ ಆಸ್ಟ್ರೇಲಿಯನ್ ಓಪನ್ ಮತ್ತು ವಿಂಬಲ್ಡನ್ ಸಿಂಗಲ್ಸ್ ಗೆದ್ದು 'ವಿರಳ ಡಬಲ್' ಸಾಧಿಸುವ ಯತ್ನದಲ್ಲಿ ಆರನೇ ಶ್ರೇಯಾಂಕದ ಅಮೆರಿಕದ ಆಟಗಾರ್ತಿ ಇದ್ದಾರೆ. ಇದೇ ದೇಶದ ದಿಗ್ಗಜ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಕೊನೆಯ ಬಾರಿ (2009ರಲ್ಲಿ) ಈ ಸಾಧನೆಗೆ ಪಾತ್ರರಾಗಿದ್ದರು.

ನೋರಿ ಮುನ್ನಡೆ: ಬ್ರಿಟನ್‌ನ ಕ್ಯಾಮೆರಾನ್ ನೋರಿ ತಮ್ಮ ನೆಚ್ಚಿನ ಅಂಕಣದಲ್ಲಿ 12ನೇ ಶ್ರೇಯಾಂಕದ ಫ್ರಾನ್ಸಿಸ್ ಟಿಯಾಫೊ (ಅಮೆರಿಕ) ಅವರನ್ನು 4–6, 6–4, 6–3, 7–5 ರಿಂದ ಸೋಲಿಸಿ ಪುರುಷರ ಸಿಂಗಲ್ಸ್ ಮೂರನೇ ಸುತ್ತಿಗೆ ಮುನ್ನಡೆದರು.

2022ರಲ್ಲಿ ಒಂದನೇ ಕೋರ್ಟ್‌ನಲ್ಲಿ ಮೂರು ಪಂದ್ಯಗಳನ್ನು ಗೆದ್ದಿದ್ದ ಎಡಚ ನೋರಿ, ಆ ಬಾರಿ ಸೆಮಿಫೈನಲ್ ತಲುಪಿದ್ದರು.

ಗಾಫ್‌ಗೂ ಆಘಾತ: ಕಳೆದ ತಿಂಗಳು ರೋಲಂಡ್ ಗ್ಯಾರೋಸ್‌ನಲ್ಲಿ ಚಾಂಪಿಯನ್ ಆಗಿದ್ದ ಕೊಕೊ ಗಾಫ್ ಇಲ್ಲಿ ಬಲುಬೇಗ ನಿರಾಶೆ ಅನುಭವಿಸಬೇಕಾಯಿತು. ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಉಕ್ರೇನಿನ ಡಯಾನಾ ಯಸ್ಟ್ರೆಮ್‌ಸ್ಕಾ ಅವರನ್ನು 6–7 (3) 1–6 ರಿಂದ ಅಮೆರಿಕದ ಆಟಗಾರ್ತಿಯನ್ನು ಸೋಲಿಸಿದರು.

ಭಾರತ ವನಿತೆಯರಿಗೆ ಜಯ

2ನೇ ಟಿ20 ಪಂದ್ಯ: ಅಮನ್ಜೋತ್, ಜೆಮಿಮಾ ಅರ್ಧಶತಕ

ಬ್ರಿಸ್ಟಲ್ (ಪಿಟಿಐ): ಚುಟುಕು ಕ್ರಿಕೆಟ್ ಪಂದ್ಯದಲ್ಲಿ ಭಾರತ ಮಹಿಳೆಯರ ತಂಡದ ಗೆಲುವಿನ ಯಾತ್ರೆ ಮುಂದುವರಿಯಿತು. ಅಮನ್ಜೋತ್ ಕೌರ್ ಮತ್ತು ಜೆಮಿಮಾ ರಾಡ್ರಿಗಸ್ ಅವರ ಅರ್ಧ ಶತಕಗಳ ನೆರವಿನಿಂದ ಭಾರತ ತಂಡ ಮಹಿಳೆಯರ ಟಿ20 ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು 24 ರನ್‌ಗಳಿಂದ ಸೋಲಿಸಿತು.

ಮಂಗಳವಾರ ರಾತ್ರಿ ನಡೆದ ಪಂದ್ಯ ಗೆಲ್ಲುವ ಮೂಲಕ ಹರ್ಮನ್‌ಪ್ರೀತ್ ಕೌರ್ ಪಡೆ ಐದು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಪಡೆಯಿತು. ಪ್ರವಾಸಿ ತಂಡ ಮೊದಲ ಪಂದ್ಯವನ್ನು ದಾಖಲೆಯ 97 ರನ್‌ಗಳಿಂದ ಗೆದ್ದುಕೊಂಡಿತ್ತು.

ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಭಾರತ ತಂಡದ ಆರಂಭ ಉತ್ತಮವಾಗಿರಲಿಲ್ಲ. ಸ್ಮೃತಿ ಮಂದಾನ (13), ಶಫಾಲಿ ವರ್ಮಾ (3) ಮತ್ತು ಹರ್ಮನ್‌ಪ್ರೀತ್ ಕೌರ್ (1) ಅವರು 5 ಓವರುಗಳಲ್ಲಿ 31 ರನ್ ಗಳಾಗುಷ್ಟರಲ್ಲಿ ನಿರ್ಗಮಿಸಿದ್ದರು.

ಜೆಮಿಮಾ 41 ಎಸೆತಗಳಲ್ಲಿ 63 ರನ್ ಬಾರಿಸಿದರೆ, ಅಮನ್ಜೋತ್ (ಅಜೇಯ 63, 40ಎ) ಟಿ20 ಕ್ರಿಕೆಟ್‌ನಲ್ಲಿ ಚೊಚ್ಚಲ ಅರ್ಧ ಶತಕ ಗಳಿಸಿದರು. ಇವರಿಬ್ಬರು ನಾಲ್ಕನೇ ವಿಕೆಟ್‌ಗೆ 93 ರನ್ ಸೇರಿಸಿದ್ದರಿಂದ ತಂಡ 4 ವಿಕೆಟ್‌ಗೆ 181 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ಇಂಗ್ಲೆಂಡ್ 7 ವಿಕೆಟ್‌ಗೆ 157 ರನ್ ಗಳಿಸಲಷ್ಟೇ ಶಕ್ತವಾಯಿತು.

ಸ್ಕೋರುಗಳು: ಭಾರತ: 20 ಓವರುಗಳಲ್ಲಿ 4 ವಿಕೆಟ್‌ಗೆ 181 (ಜೆಮಿಮಾ ರಾಡ್ರಿಗಸ್ 63, ಅಮನ್ಜೋತ್ ಕೌರ್ ಔಟಾಗದೇ 63, ರಿಚಾ ಘೋಷ್ ಔಟಾಗದೇ 32; ಲಾರೆನ್ ಬೆಲ್ 17ಕ್ಕೆ2); ಇಂಗ್ಲೆಂಡ್: 20 ಓವರುಗಳಲ್ಲಿ 7 ವಿಕೆಟ್‌ಗೆ 157 (ಟಾಮಿ ಬ್ಯೂಮಾಂಟ್ 54, ಆ್ಯಮಿ ಜೋನ್ಸ್ 32, ಸೋಫಿ ಎಕ್ಲೆಸ್ಟೋನ್ 35; ಶ್ರೀಚರಣಿ 28ಕ್ಕೆ2, ಅಮನ್ಜೋತ್ ಕೌರ್ 28ಕ್ಕೆ1).

ಪಂದ್ಯದ ಆಟಗಾರ್ತಿ: ಅಮನ್ಜೋತ್ ಕೌರ್.



ಟಿ20 ಕ್ರಿಕೆಟ್‌ನಲ್ಲಿ ಚೊಚ್ಚಲ ಅರ್ಧ ಶತಕ ಗಳಿಸಿದ ಅಮನ್ಜೋತ್ ಕೌರ್ ಬಿಸಿಸಿಐ 'ಎಕ್ಸ್' ಚಿತ್ರ

ನ್ಯಾಯಸಮ್ಮತ ತನಿಖೆ ನಡೆಸಿ: ಸಾಮಿ

ಸೇಂಟ್ ಜಾರ್ಜ್, ಗ್ರೆನೆಡಾ (ಪಿಟಿಐ): ವೆಸ್ಟ್ ಇಂಡೀಸ್ ಕ್ರಿಕೆಟ್ ತಂಡದಲ್ಲಿರುವ ಆಟಗಾರರೊಬ್ಬರು ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಲ್ಲಿ ಸಿಲುಕಿದ್ದಾರೆ. ಈ ಪ್ರಕರಣದಲ್ಲಿ ಸೂಕ್ತ ತನಿಖಾ ಪ್ರಕ್ರಿಯೆ ನಡೆಸಬೇಕು ಮತ್ತು ನ್ಯಾಯ ಒದಗಿಸಬೇಕು ಎಂದು ತಂಡದ ಮುಖ್ಯ ಕೋಚ್ ಡ್ಯಾರೆನ್ ಸಾಮಿ ಹೇಳಿದ್ದಾರೆ.

ಒಬ್ಬ ಹದಿಹರೆಯದ ಬಾಲಕಿ ಸೇರಿದಂತೆ 11 ಮಹಿಳೆಯರ ಮೇಲೆ ವಿಂಡೀಸ್ ಆಟಗಾರ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿದ ವರದಿ ಗಯಾನಾ ಮೂಲದ ಕೈಟಿಯರ್ ನ್ಯೂಸ್ ಮಾಧ್ಯಮದಲ್ಲಿ ಪ್ರಕಟವಾಗಿತ್ತು. ಈ ಪ್ರಕರಣವು 2023ರಲ್ಲಿ ನಡೆದಿತ್ತು ಎಂದೂ ಅದರಲ್ಲಿ ಉಲ್ಲೇಖವಾಗಿತ್ತು. ಆದರೆ ಇದುವರೆಗೂ ಯಾವುದೇ ದೂರು ದಾಖಲಾಗಿಲ್ಲ.

ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಾಮಿ, 'ನಮ್ಮ ಆಟಗಾರರೊಂದಿಗೆ ನಾನು ಬಹಳ ಆಪ್ತವಾಗಿದ್ದೇನೆ. ಅವರೊಂದಿಗೆ ಬಹಳಷ್ಟು ಚರ್ಚೆಗಳನ್ನು ನಡೆಸಿರುವೆ. ಒಂದು ಮಾತು ಹೇಳಲು ಬಯಸುತ್ತೇನೆ. ಅದೇಂದರೆ ನಾವು ನ್ಯಾಯದಲ್ಲಿ ನಂಬಿಕೆ ಇಟ್ಟಿದ್ದೇವೆ. ನಮ್ಮ ಬಳಗಕ್ಕೆ ನ್ಯಾಯ ಲಭಿಸುವ ನಂಬಿಕೆಯಿದೆ' ಎಂದರು.

ಆರ್‌ಸಿಬಿ, ಕೆಎಸ್‌ಸಿಎಯಿಂದ ವಿವರಣೆ ಕೇಳಿದ ಬಿಸಿಸಿಐ ಒಂಬುಡ್ಸ್‌ಮನ್

ನವದೆಹಲಿ (ಪಿಟಿಐ): ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರ್ಯಾಂಚೈಸಿ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಲಿಖಿತ ವಿವರಣೆ ಸಲ್ಲಿಸಬೇಕು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಒಂಬುಡ್ಸ್‌ಮನ್ ಮತ್ತು ನೈತಿಕ ಅಧಿಕಾರಿ ಅರುಣ್ ಮಿಶ್ರಾ ಸೂಚಿಸಿದ್ದಾರೆ.

ಹೋದ ತಿಂಗಳು ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಪ್ರಶಸ್ತಿ ಗೆದ್ದ ಆರ್‌ಸಿಬಿ ತಂಡವು ಬೆಂಗಳೂರಿನಲ್ಲಿ ಸಂಭ್ರಮಾಚರಣೆ ಹಮ್ಮಿಕೊಂಡಿತ್ತು. ಆ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿತ್ತು. 11 ಮಂದಿ ಮೃತರಾಗಿದ್ದರು.

ಈ ಹಿನ್ನೆಲೆಯಲ್ಲಿ ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ಅವರು ನೀಡಿರುವ ಲಿಖಿತ ದೂರಿಗೆ ಸ್ಪಂದಿಸಿರುವ ಒಂಬುಡ್ಸ್‌ಮನ್ ಮಿಶ್ರಾ ಅವರು ನಾಲ್ಕು ವಾರದೊಳಗೆ ವಿವರಣೆ ಸಲ್ಲಿಸಬೇಕು ಎಂದು ಆರ್‌ಸಿಬಿ ಮತ್ತು ಕೆಎಸ್‌ಸಿಎಗೆ ನಿರ್ದೇಶಿಸಿದ್ದಾರೆ.

ಈ ದುರಂತದ ವಿಚಾರಣೆ ಮುಕ್ತಾಯವಾಗುವ ತನಕ ಫ್ರ್ಯಾಂಚೈಸಿಯನ್ನು ಬೇರೆಯವರಿಗೆ ಮಾರಾಟ ಮಾಡಬಾರದೆಂದು ಸೂಚಿಸಬೇಕು ಎಂದು ವಿಕಾಸ್ ಕುಮಾರ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಒಂಬುಡ್ಸ್‌ಮನ್ ನಿರ್ದೇಶಿಸಿರುವ ಪತ್ರವು ಪಿಟಿಐ ಕೈಸೇರಿದೆ.

'ಈ ದುರ್ಘಟನೆಯ ತೀವ್ರತೆಯನ್ನು ಪರಿಗಣಿಸಿ ಕೆಎಸ್‌ಸಿಎ ಮತ್ತು ಆರ್‌ಸಿಬಿ ಫ್ರ್ಯಾಂಚೈಸಿಯು ದೂರುದಾರರಿಗೆ ಲಿಖಿತ ವಿವರಣೆ ಸಲ್ಲಿಸಬೇಕು. ಈ ದೂರನ್ನು ಅವರು 2025ರ ಜೂನ್ 4ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತ ದುರಂತಕ್ಕೆ ಸಂಬಂಧಿಸಿ ಕೊಟ್ಟಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರ್ಯಾಂಚೈಸಿಯು ಸುರಕ್ಷತಾ ಕ್ರಮಗಳನ್ನು ಪಾಲಿಸದ ಮತ್ತು ನಿರ್ಲಕ್ಷ್ಯದ ಕಾರಣದಿಂದ ದುರ್ಘಟನೆ ಸಂಭವಿಸಿದೆ ಎಂದು ಅವರು ಆರೋಪಿಸಿದ್ದಾರೆ. ಪ್ರಕರಣದ ಹೊಣೆಯನ್ನು ಹೊತ್ತುಕೊಳ್ಳಬೇಕು ಎಂದೂ ದೂರಿನಲ್ಲಿ ಹೇಳಿದ್ದಾರೆ. ಆರ್‌ಸಿಬಿಯನ್ನು ಅಮಾನತು ಮಾಡಬೇಕು ಮತ್ತು ಸದ್ಯ ನಡೆಯುತ್ತಿರುವ ಮಾರಾಟ ಪ್ರಕ್ರಿಯೆಯನ್ನು ತಡೆಯಬೇಕೆಂದೂ ದೂರುದಾರರು ಮನವಿ ಮಾಡಿದ್ದಾರೆ' ಎಂದು ನಿವೃತ್ತ ನ್ಯಾಯಮೂರ್ತಿಯೂ ಆಗಿರುವ ಮಿಶ್ರಾ ನಿರ್ದೇಶಿಸಿದ್ದಾರೆ.

'ನಾಲ್ಕು ವಾರಗಳಲ್ಲಿ ಕೆಎಸ್‌ಸಿಎ ಮತ್ತು ಆರ್‌ಸಿಬಿಯು ದೂರುದಾರರ ಸವಾಲಿಗೆ ಲಿಖಿತ ಪ್ರತಿಕ್ರಿಯೆ ನೀಡಬೇಕು. ಅದರ ಪ್ರತಿಯನ್ನು ದೂರುದಾರರಿಗೂ ಲಗತ್ತಿಸಬೇಕು. ಇದಕ್ಕೆ ಪ್ರತಿಯಾಗಿ ಮರುದೂರು ಸಲ್ಲಿಸಲು ವಿಕಾಸ್ ಕುಮಾರ್ ಅವರಿಗೆ 10 ದಿನಗಳ ಕಾಲಾವಕಾಶ ಇರುತ್ತದೆ' ಎಂದೂ ತಿಳಿಸಲಾಗಿದೆ.

ಆರ್‌ಸಿಬಿ ಫ್ರ್ಯಾಂಚೈಸಿಯನ್ನು ಮಾರಾಟ ಮಾಡುತ್ತಿರುವ ಕುರಿತು ಐಪಿಎಲ್ ವಲಯದಲ್ಲಿ ಮಾತುಗಳು ಕೇಳಿಬರುತ್ತಿವೆ. ಪ್ರಸ್ತುತ ಫ್ರ್ಯಾಂಚೈಸಿಯ ಮಾಲೀಕರು ಈ ಪ್ರಕರಣದಿಂದ ಅಂತರ ಕಾಯ್ದುಕೊಳ್ಳುವ ಪ್ರಯತ್ನದಲ್ಲಿದ್ದಾರೆ ಎಂದೂ ಹೇಳಲಾಗುತ್ತಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರವು ಬೆಂಗಳೂರು ನಗರ ಪೊಲೀಸ್ ಆಯುಕ್ತರಾಗಿದ್ದ ಬಿ. ದಯಾನಂದ್ ಮತ್ತು ಐಪಿಎಸ್ ಅಧಿಕಾರಿ ವಿಕಾಸ್ ಕುಮಾರ್ ಅವರನ್ನು ಅಮಾನತು ಮಾಡಿತ್ತು. ಸರ್ಕಾರದ ಕ್ರಮವನ್ನು ಪ್ರಶ್ನಿಸಿದ್ದ ವಿಕಾಸ್ ಕುಮಾರ್ ಅವರು ಕೇಂದ್ರ ಆಡಳಿತ ಟ್ರಿಬ್ಯುನಲ್ (ಸಿಎಟಿ) ಮೊರೆ ಹೋಗಿದ್ದರು.

ಈ ಪ್ರಕರಣದ ವಿಚಾರಣೆ ನಡೆಸಿದ್ದ ಸಿಎಟಿ ಅಮಾನತು ಆದೇಶವನ್ನು ರದ್ದು ಮಾಡಿತ್ತು.



ವಿಜೇತ ಕರ್ನಾಟಕ ತಂಡ: (ಎಡದಿಂದ) ನಿಂತವರು: ಶೀತಲ್ ಕಿರಣ್ (ಕೋಚ್), ಸಾಹಿತಿ, ಗಗನಪ್ರಿಯಾ, ನರ್ತನಾ, ತನುಶ್ರೀ, ಸಿರೀಶಾ, ಜಹಿಲ್, ದಿಶಾ, ಸಹನಾ, ಚೈತ್ರಾ(ಮ್ಯಾನೇಜರ್) . ಕುಳಿತವರು: ಚಂದನಾ, ಶರಣ್ಯಾ, ಶ್ರಾವಣಿ, ಸೊಹಾನಿ ಎಸ್‌ಕಿರಣ್

ಕರ್ನಾಟಕ ಬಾಲಕಿಯರ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡ, ತುಮಕೂರಿನ ಎಸ್‌ಐಟಿ ಕ್ರೀಡಾಂಗಣದಲ್ಲಿ ನಡೆದ ದಕ್ಷಿಣ ವಲಯ 15 ವರ್ಷದೊಳಗಿನ ಬಾಲಕಿಯರ ಕ್ರಿಕೆಟ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡಿತು. ಸೋಮವಾರ ನಡೆದ ಫೈನಲ್‌ನಲ್ಲಿ ಕರ್ನಾಟಕ 60 ರನ್‌ಗಳಿಂದ ತಮಿಳುನಾಡು ತಂಡವನ್ನು ಸೋಲಿಸಿತು.

ಎಚ್‌ಸಿಎಲ್ ಫೌಂಡೇಷನ್ ಈ ಟೂರ್ನಿಯನ್ನು ಹಮ್ಮಿಕೊಂಡಿತು.

ಸ್ಕೋರುಗಳು: ಕರ್ನಾಟಕ: 24 ಓವರುಗಳಲ್ಲಿ 207 (ಸಿರೀಶಾ 49, ಸೊಹಾನಿ ಕಿರಣ್ 44, ಸಹನಾ 25, ಚಂದನಾ 23; ಬೃಂದಾ 29ಕ್ಕೆ3, ಕಾವ್ಯಾ 59ಕ್ಕೆ3, ಪ್ರಿಯಾಂಕ 31ಕ್ಕೆ2); ತಮಿಳುನಾಡು: 24 ಓವರುಗಳಲ್ಲಿ 147 (ಬೃಂದಾ 34, ಕಾವ್ಯಾ 26, ನಿವೇತಾ 25; ಸಿರೀಶಾ 21ಕ್ಕೆ3)

ಚಿಕ್ಕಮಗಳೂರು ಜಿಲ್ಲಾ ತಂಡಕ್ಕೆ ಗೆಲುವು

ಬೆಂಗಳೂರು: ಚಿಕ್ಕಮಗಳೂರು ಜಿಲ್ಲಾ ತಂಡವು ಎಸ್. ರಂಗರಾಜನ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಸಿ' ಡಿವಿಷನ್ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 66–49ರಿಂದ ಮೌಂಟ್ಸ್ ಕ್ಲಬ್ ತಂಡವನ್ನು ಸೋಲಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಲ್ಲಿ ಬುಧವಾರ ಲೀಗ್ ಹಂತದ ಪಂದ್ಯಗಳು ನಡೆದವು.

ಫಲಿತಾಂಶಗಳು: ಅಪ್ಪಯ್ಯ ಬಿ.ಸಿ ತಂಡವು 73–66ರಿಂದ ಧಾರವಾಡ ಜಿಲ್ಲೆ ಎ ವಿರುದ್ಧ; ಚಿಕ್ಕಮಗಳೂರು ಜಿಲ್ಲಾ ತಂಡ 66–49ರಿಂದ ಮೌಂಟ್ಸ್ ಕ್ಲಬ್ ವಿರುದ್ಧ; ಎಂಇಜಿ & ಸೆಂಟರ್ 69–30ರಿಂದ ಧಾರವಾಡ ಜಿಲ್ಲೆ ಬಿ ವಿರುದ್ಧ; ರಾಜ್‌ಕುಮಾರ್ ಬಿ.ಸಿ 62–43ರಿಂದ ಕೋಲಾರ ಜಿಲ್ಲೆ ವಿರುದ್ಧ; ಡಿಆರ್‌ಡಿಒ ತಂಡ 53–38ರಿಂದ ಹಾಸನ ಜಿಲ್ಲೆ ವಿರುದ್ಧ; ಹೂಪ್ಸ್ 7 ಬಿ.ಸಿ ತಂಡ 64–37ರಿಂದ ಮೈಸೂರು ಜಿಲ್ಲೆ ಎ ವಿರುದ್ಧ; ಸಿನ್‌ಸಿನಾಟೀಸ್ ಬಿ.ಸಿ ತಂಡವು 66–49ರಿಂದ ಧಾರವಾಡ ಜಿಲ್ಲೆ ಎ ವಿರುದ್ಧ; ಮೈಸೂರು ಜಿಲ್ಲೆ ಬಿ ತಂಡವು 80–77ರಿಂದ ಅಪ್ಪಯ್ಯ ಬಿ.ಸಿ ವಿರುದ್ಧ ಹಾಗೂ ಚಿಕ್ಕಮಗಳೂರು ಜಿಲ್ಲಾ ತಂಡ 72–57ರಿಂದ ರಾಜ್‌ಕುಮಾರ್ ಬಿ.ಸಿ ವಿರುದ್ಧ ಜಯ ಸಾಧಿಸಿದವು.

ಫುಟ್‌ಬಾಲ್: ವನಿತೆಯರಿಗೆ ಜಯ

ಚಿಯಾಂಗ್ ಮೈ (ಥಾಯ್ಲೆಂಡ್), (ಪಿಟಿಐ): ಭಾರತದ ಮಹಿಳಾ ಫುಟ್‌ಬಾಲ್ ತಂಡ ಮತ್ತೊಮ್ಮೆ ಅಧಿಕಾರಯುತ ಆಟವಾಡಿ ಎಎಫ್‌ಸಿ ಮಹಿಳಾ ಏಷ್ಯನ್ ಕಪ್ 2026ರ ಕ್ವಾಲಿಫೈಯರ್ ಪಂದ್ಯದಲ್ಲಿ ಇರಾಕ್ ತಂಡವನ್ನು ಬುಧವಾರ 5–0 ಗೋಲುಗಳಿಂದ ಸದೆಬಡಿಯಿತು.

'ಬಿ' ಗುಂಪಿನ ಈ ಪಂದ್ಯದಲ್ಲಿ ವಿರಾಮದ ವೇಳೆಗೆ 2–0 ಮುನ್ನಡೆ ಪಡೆದಿದ್ದ ಭಾರತ, ಗೆಲುವು ಸಾಧಿಸಿತು.